Digitized by Arya Samaj Foundation Chennai and eGangotri

ಸ್ವರೂಪ

ಕೆಲವು ಕನ್ನಡ ಕೃತಿಗಳ ಅಧ್ಯಯನ

ಸಿ. ಎನ್. ರಾಮಚಂದ್ರನ್

ಕನ್ನಡ ಅಧ್ಯಯನ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ

CC-0. In Public Domain. Gurukul Kangri Collection, Haridwar

[illegible] - ಸಿ. ಎನ್. ರಾಮಚಂದ್ರನ್

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय, हरिद्वार
कृपया पुस्तक के ऊपर कोई निशान आदि
न लगायें।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

पुस्तकालय

गुरुकुल काँगड़ी विश्वविद्यालय, हरिद्वार

वर्ग संख्या……—……—……आगत संख्या……………

पुस्तक–वितरण की तिथि नीचे अंकित है। इस तिथि सहित २० वें दिन तक यह पुस्तक पुस्तकालय में वापिस आ जानी चाहिए। अन्यथा १० पैसे के हिसाब से विलम्ब–दण्ड लगेगा।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
D. 6856
CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂಬಯಿ ವಿ. ವಿ. ಕನ್ನಡ ಪ್ರಕಟನೆ–೭

DONATION

ಸ್ವರೂಪ

ಕೆಲವು ಕನ್ನಡ ಕೃತಿಗಳ ಅಧ್ಯಯನ

पुस्तकालय
गुरुकुल कांगड़ी विश्वविद्यालय

"Forwarded free of cost, and with the Compliments of the department of Education, Government of India, NEW DELHI."

6856

ಡಾ. ಸಿ. ಎನ್. ರಾಮಚಂದ್ರನ್
ಪ್ರಾಧ್ಯಾಪಕರು, ಆಂಗ್ಲ ಸಾಹಿತ್ಯ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

ಕನ್ನಡ ಅಧ್ಯಯನ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

SWARUPA :
KELAVU KANNADA KRUTHIGALA ADHYAYANA
(Genre Criticism and other critical essays on Kannada Literature) by Dr. C. N. Ramachandran. Professor and Head. Dept. of English, Mangalore University, Mangala-gangotri 574 199, D. K. Dist. Karnataka. Published by University of Bombay, Dept. Kannada Bombay-400 098
PP. x + 72 Price Rs. 18/- 1988.

© ಡಾ. ಸಿ. ಎನ್. ರಾಮಚಂದ್ರನ್

ಮುಖಪುಟದ ಕಂಪ್ಯೂಟರ್ ವಿನ್ಯಾಸ:
ಶ್ರೀ ಭೀಮಸೇನ ತೊರಗಲ್ಲ

ಪ್ರಕಾಶಕರು :
ಕನ್ನಡ ಅಧ್ಯಯನ ವಿಭಾಗ,
ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ-400 098

ರೂ. ಹದಿನೆಂಟು.

ಮುದ್ರಕರು:
ಫ. ಶಿ. ಭಾಂಡಗೆ ತ್ವರಿತ ಮುದ್ರಣ
ಗಂಗಾಪೂರಪೇಟ ಗದಗ-582101
(ಹಸ್ತಪ್ರತಿಯನ್ನು ಕಾದಿರಿಸಲಾಗಿದೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"Forwarded free of cost, and with the Compliments of the department of Education, Government of India, NEW DELHI."

ಅರ್ಪಣೆ

ಸಾಹಿತ್ಯ ವಿಮರ್ಶೆಯನ್ನು ಅತೀವ ಶಿಸ್ತಿನಿಂದ
ಸಾಹಿತ್ಯದ ವಿಮರ್ಶೆಯಾಗಿಯೇ
ಭಾರತದಲ್ಲಿ ಬೆಳೆಸಲು ಸದಾ ಶ್ರಮಿಸುತ್ತಿರುವ
ನನ್ನ ಪೂಜ್ಯ ಗುರುಗಳಾದ

ಪ್ರೊ. ಸಿ. ಡಿ. ನರಸಿಂಹಯ್ಯ

ಇವರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲ ನುಡಿ

ಪ್ರೊ. ರಾಮಚಂದ್ರನ್ ಅವರು Genre criticism ಬಗ್ಗೆ ತಮ್ಮ ಅನಿಸಿಕೆಗಳನ್ನು ಐದಾರು ವರ್ಷಗಳ ಹಿಂದೆಯೇ ಪ್ರಸ್ತಾಪಿಸಿದ್ದರು. ಕನ್ನಡದಲ್ಲಿ ಅದನ್ನು ಏನೆಂದು ಹೆಸರಿಸಬೇಕೆಂಬ ಬಗ್ಗೆಯೂ ಆಗ ನಾವು ಮಾತಾಡಿದ್ದೆವು. ಅವರ ಇನ್ನೂ ಹಲವು ವಿಮರ್ಶನ ವಿಚಾರಗಳ ಸ್ವೋಪಜ್ಞತೆಯನ್ನು ಮನದಂದು, ಕಳೆದ ವರ್ಷ ಮುಂಬಯಿಯಲ್ಲಿ ಅವರ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಅದರ ಫಲವೇ ಈ ಕೃತಿಯ ಪ್ರಕಟನೆ.

ಪ್ರಸ್ತುತ ಗ್ರಂಥದಲ್ಲಿ ನಾಲ್ಕು ಪ್ರಬಂಧಗಳಿವೆ. ಮೊದಲಿನದು ಸ್ವರೂಪ-ವಿಮರ್ಶೆಯ ಬಗ್ಗೆ ತಾತ್ವಿಕ ವಿವೇಚನೆಯನ್ನು ಒಳಗೊಂಡಿದೆ. ಉಳಿದ ಮೂರರಲ್ಲಿ ಸ್ವರೂಪವಿಮರ್ಶೆ ಮತ್ತು ಚಿರಪ್ರತೀಕಗಳನ್ನು (Archetypes) ಕನ್ನಡ ಸಾಹಿತ್ಯ ಕೃತಿಗಳಿಗೆ ಅನ್ವಯಿಸಿ ವಿವರಿಸಲಾಗಿದೆ. ಒಟ್ಟಿನ ವಸ್ತು-ವಿಚಾರಗಳ ಮಂಡನೆಯಲ್ಲಿ ಏಕಸೂತ್ರತೆ ಕಂಡು ಬರುವಂತಿದೆ.

ಇದು ಅವರ ದ್ವಿತೀಯ ವಿಮರ್ಶನ ಸಂಕಲನ. ಮೊದಲಿನ 'ಶಿಲ್ಪ ವಿನ್ಯಾಸ'ದಲ್ಲಿಯೂ ಏಕಸೂತ್ರತೆ ಇದ್ದು Structuralism ವಿಮರ್ಶಾ ವಿಧಾನವು ತಳಹದಿಯಾಗಿ ಬಂದಿದೆ. ಅಲ್ಲಿ ಶಿಲ್ಪ, ಇಲ್ಲಿ ಸ್ವರೂಪ! ಮತ್ತೆ ಅಲ್ಲಿ ಬಂಧನ-ಬಿಡುಗಡೆ ಮತ್ತು ಸ್ವಾಭಿಮುಖತೆ* ಎಂಬ ಚಿರಪ್ರತೀಕಗಳು ಕಾಣಿಸಿಕೊಂಡದ್ದಾದರೆ, ಇಲ್ಲಿ 'ರಾಜಕೀಯತೆ', 'ಪರಿಭ್ರಮಣ ಮತ್ತು ಶೋಧ', ಹಾಗೂ 'ಕಲಾವ್ಯಕ್ತಿತ್ವ' ಎಂಬೀ ಅಂಶಗಳು ವ್ಯಕ್ತಗೊಂಡಿವೆ. ಒಂದರ್ಥದಲ್ಲಿ ಈ ಸಂಕಲನವು ಹಿಂದಿನದರ ಮುಂದುವರಿಕೆಯೇ ಸೈ. ಹೀಗೆ ಸಿ. ಎನ್. ಆರ್. ಪಾಶ್ಚಾತ್ಯರಲ್ಲಿ ತಲೆದೋರಿರುವ ವಿಮರ್ಶನ ಪ್ರಣಾಲಿಗಳನ್ನು ವಿವೇಚನೆ ಮಾಡಿ, ಅವುಗಳ ಸಮರ್ಥನೆಗಾಗಿ ಕನ್ನಡಸಾಹಿತ್ಯ ಕೃತಿಗಳನ್ನು ಪರಾಮರ್ಶಿಸುತ್ತಾರೆ. ಕನ್ನಡದಲ್ಲಿ ವಿಮರ್ಶನ ಶಾಸ್ತ್ರವು ಕ್ರಮಬದ್ಧವಾಗಿ ರೂಪುಗೊಳ್ಳ

---

* ಸ್ವಾಭಿಮುಖತೆ ! ಎಷ್ಟೊಂದು ಜನ ಕನ್ನಡ ಲೇಖಕರು ತಮ್ಮ ಕೃತಿಗಳಲ್ಲಿ ಸ್ವಯಂ ಕಾಣಿಸಿಕೊಂಡಿದ್ದಾರೆ! ಸಿ.ಎನ್.ಆರ್. ಮುದ್ದಣನಲ್ಲಿಯು, ಅದರಂತೆ ಶಾಂತಿನಾಥ ದೇಸಾಯಿಯವರಲ್ಲಿಯು ಸ್ವಾಭಿಮುಖತೆಯನ್ನು ತೋರಿಸಿದ್ದಾರಲ್ಲವೆ. ಅದರಂತೆ ಶ್ರೀರಂಗರು ಸೂತ್ರಧಾರ, ನಾಟಕಕಾರ ಪಾತ್ರಗಳ ಮೂಲಕ ತಮ್ಮ ವಿಚಾರಗಳನ್ನು ಅವ್ಯಾಹತವಾಗಿ ಹರಿಬಿಟ್ಟಿದ್ದಾರೆ. ಅದೇಕೆ, ಹಳಗಾಲದ ರಾಘವಾಂಕನು ತನ್ನ ಕೃತಿಗಳಲ್ಲಿ ಕಾವ್ಯಸೃಷ್ಟಿಯ ಬಗ್ಗೆ ತನ್ನ ವಿಚಾರಗಳನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಿರುವುದನ್ನೂ ಇಲ್ಲಿ ನೆನೆಯಬಹುದು-ಈ ಸ್ವಾಭಿಮುಖತೆಯನ್ನು ಇತರರ ಕೃತಿಗಳಲ್ಲಿ ಕಂಡುಹಿಡಿಯುವ, ರಾಮಚಂದ್ರನ್‌ರ ವಿಮರ್ಶಾ ವಿಧಾನವು ಅನುಗಣನೀಯವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿದ್ದಾಗ ಅವರು ಆಯ್ದುಕೊಂಡ ಈ ವಿಧಾನವು ಒಂದು ಸ್ಪೃಹಣೀಯ ಬೆಳವಣಿಗೆಯಾಗಿದೆ.

ಇವೆರಡು ಸಂಕಲನಗಳಲ್ಲಿಯ ಇನ್ನೊಂದು ಸಾಮಾನ್ಯ ಅಂಶವೆಂದರೆ ತಮ್ಮ ವಿವರಣೆಗೆ ಅವರು ಕನ್ನಡ ಕಾದಂಬರಿ ಪ್ರಕಾರವನ್ನು ಹೆಚ್ಚಾಗಿ ಆಯ್ದುಕೊಂಡದ್ದು. 'ಶೋಧ' ಎಂಬ ಕಾದಂಬರಿಯನ್ನು ಸಹ ಬರೆದಿರುವ ಅವರಿಗೆ ಈ ಸಾಹಿತ್ಯ ಪ್ರಕಾರವು ಮೆಚ್ಚಿನದೆನ್ನಬಹುದು.

ರಾಮಚಂದ್ರನ್ ಅವರ ವಿಶಿಷ್ಟ ಧೋರಣೆಯೊಂದನ್ನು ಇಲ್ಲಿ ಪ್ರಸ್ತಾಪಿಸತಕ್ಕುದು. ಇವತ್ತಿನ ಕನ್ನಡ ವಿಮರ್ಶಕರು ಪಾಶ್ಚಿಮಾತ್ಯ ಸಾಹಿತ್ಯವನ್ನು, ಅಲ್ಲಿ ಕಂಡುಬರುವ ಚಿಂತನೆಗಳನ್ನು ಚೆನ್ನಾಗಿ ಅರಿತವರು. ಅಲ್ಲದೆ ಅವರಲ್ಲಿ ಹೆಚ್ಚಿನವರು ಇಂಗ್ಲೀಷಿನ ಅಧ್ಯಾಪಕರು. ಇವರು ಆಧುನಿಕ ಕನ್ನಡ ಸಾಹಿತ್ಯದ ಕೃತಿಗಳನ್ನೇ ತಮ್ಮ ವಿಮರ್ಶೆಗೆ ಒಳಪಡಿಸಿದೆ; ಇವರಿಗೆ ಹಳಗನ್ನಡ ಸಾಹಿತ್ಯ ಬರಡಾಗಿ ಕಾಣುತ್ತದೆ. 'ಅದರಲ್ಲೇನಿದೆ ? ಎಲ್ಲೋ ಒಬ್ಬಿಬ್ಬ ಕವಿಗಳಲ್ಲಿ ಸ್ವೋಪಜ್ಞತೆ ಕಂಡು ಬಂದೀತು' ಎಂಬ ನಿಲುವು ಅವರದು. (ಕೀರ್ತಿನಾಥ ಕುರ್ತಕೋಟಿ, ಅಮೂರರಂಥ ಕೆಲವರು ಇದಕ್ಕೆ ಅಪವಾದ.)

ನಮ್ಮ ರಾಮಚಂದ್ರನ್‌ರೂ ಇಂಗ್ಲೀಶ್ ಪ್ರಾಧ್ಯಾಪಕರು. ಆದರೆ ಅವರಿಗೆ ಹಳಗನ್ನಡ ಕವಿಗಳ ಬಗ್ಗೆ ಅನೂನ ಆದರವಿದೆ; ಹಲವಾರು ಪ್ರಾಚೀನ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಸಂಸ್ಕೃತ ಸಾಹಿತ್ಯದ, ಕಾವ್ಯ ಮೀಮಾಂಸೆಯ ಗ್ರಂಥಗಳನ್ನು ಮನನ ಮಾಡಿದ್ದಾರೆ. ಈ 'ಹಳೆಯ' ಕೃತಿಗಳಲ್ಲಿಯೂ ಹೊಸತನ್ನು ಕಾಣುವ ಹವಣು ಅವರದು. ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಕಂಡುಬಂದ ಯಾವುದೊಂದು ಹೊಸ ವಿಚಾರವನ್ನು ಕನ್ನಡದಲ್ಲಿ ಹೇಗೆ ತರಬೇಕು–ಎಂಬ ನಿಲುಮೆಯ ಬದಲಾಗಿ, ಹೇಗೆ ಅದು ನಮ್ಮಲ್ಲಿಯೂ ಕಂಡು ಬಂದಿದೆ–ಎಂಬುದಾಗಿ ಅವರು ಪರೀಕ್ಷಿಸುತ್ತಾರೆ. ಅವರ ಈ ಪ್ರಶಂಸನೀಯ ನಿಲುವಿನಿಂದಾಗಿ, ನಮ್ಮ ಪ್ರಾಚೀನ ಕಾವ್ಯಮೀಮಾಂಸಕರ ಪ್ರಸ್ಥಾನಗಳು ಸ್ವರೂಪ ವಿಮರ್ಶೆಯ ಲಕ್ಷಣಗಳನ್ನು ಹೇಗೆ ಒಳಗೊಂಡಿವೆಯೆಂಬುದು ನಿಷ್ಪನ್ನವಾಗುತ್ತದೆ. ಸ್ವರೂಪ ವಿಮರ್ಶೆಯ ಮುಖ್ಯ ಗುಣಧರ್ಮವೆಂದರೆ ವರ್ಗೀಕರಣ ಅಥವಾ ವಿಭಜನೆ*. ನೂರೆಂಟು ಅಲಂಕಾರಗಳನ್ನು ಹೆಸರಿಸುವಲ್ಲಿಯಾಗಲೀ, ರಸ–ಧ್ವನಿ, ರೀತಿ, ಗುಣಗಳನ್ನು ನಿರ್ದಿಷ್ಟಗೊಳಿಸುವಲ್ಲಿಯಾಗಲೀ ಸ್ವರೂಪ ವಿಮರ್ಶೆಯನ್ನೇ ಕಾಣಬಹುದೆಂಬುದನ್ನು ಸಿ.ಎನ್.ಆರ್. ಎತ್ತಿ ತೋರಿಸಿದ್ದಾರೆ.

ಕನ್ನಡ ಜೈಮಿನಿಭಾರತದ ಕುರಿತಾದ ಇದುವರೆಗಿನ ವಿಮರ್ಶೆಯಲ್ಲಿ ಕಿಂಚಿತ್ತಾದರೂ ತೋರಿ ಬರದ ಕೆಲವು ವಿನೂತನ ಅಂಶಗಳನ್ನು ನಮ್ಮೀ ಲೇಖಕರು ಹೊರಗೆಡಹಿದ್ದಾರೆ. ಇದೊಂದು ಅಶ್ವಮೇಧದ ಮೂಲಕ ಕೃಷ್ಣಭಕ್ತರ ಚರಿತೆಯನ್ನು ಹೇಳುವ

---

* ಸಮಾಜ ಶಾಸ್ತ್ರಗಳ ಅಧ್ಯಯನದಲ್ಲಿ ಕಂಡುಬರುವ 'ವಸ್ತು ವಿಶ್ಲೇಷಣೆ'ಯ (content analysis) ಗುಣಧರ್ಮವೂ ಸ್ಥೂಲವಾಗಿ ಇದೇ ಆಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾವ್ಯವೆಂದು ನಾವು ತಿಳಿದಿದ್ದೇವೆ. ಬಹಳವಾದರೆ ಇದೊಂದು ನಾದಲೋಲತೆಯುಳ್ಳ ರಸಸ್ಯಂದಿಯಾದ ಕಾವ್ಯವೆಂದೂ ಹೊಗಳುತ್ತೇವೆ. ಆದರೆ ಕಾವ್ಯದ ಸೂತ್ರರೂಪವಾದ ಯಜ್ಞದ ಬಗ್ಗೆ ಅವರಿವರಿಂದ ಕವಿ ಹೇಳಿಸಿದ ಮಾತುಗಳನ್ನು, ನಾಯಕನಾದ ಕೃಷ್ಣನ ಪರಾಭವದ ಆವಳಿಯನ್ನು, ಸಾಂಪ್ರದಾಯಿಕವೆನಿಸುವ 'ನಗರ ವರ್ಣನಾ' ಕ್ರಮದಲ್ಲಿ ಹಸ್ತಿನಾವತಿಯನ್ನು ಕವಿ ವರ್ಣಿಸಿದ ರೀತಿಯನ್ನೂ ರಾಮಚಂದ್ರನ್ನರು ವಿಶ್ಲೇಷಿಸಿ, ಈ ಕಾವ್ಯದ ಆಶಯವು ನಾವು ತಿಳಿದಂತೆ ಸರಳ-ಸುಗಮವಲ್ಲ ಎಂಬುದಾಗಿ ನಮಗೆ ಎಚ್ಚರಿಕೆ ಇತ್ತಿದ್ದಾರೆ. ಅಶ್ವಮೂಲಕವಾದ ಈ ಪರಿಭ್ರಮಣದಲ್ಲಿ ನಾವೂ ಮುಂದೆ ಸಾಗಿದಾಗ, ಶೋಧವಾಗುವುದು ಬೇರೆಯೇ !

ಇದೇ ರೀತಿಯ ಎಚ್ಚರಿಕೆ ನಮಗೆ 'ಕಲಾವಿದ ಕಾದಂಬರಿ'ಗಳ ವಿವೇಚನೆಯಲ್ಲಿ ಮೂಡಿಬಂದಿದೆ. ಕಲಾವಿದನೊಬ್ಬನ ಬಾಳಿನ ಘಟನೆಗಳು, ಅವುಗಳ ಆಮೋದ ಇಲ್ಲವೆ ದಾರುಣತೆ, ಅಥವಾ ತನ್ನ ಕಲೆಯ ಪ್ರದರ್ಶನ-ಇವು ಕಲಾವಿದ ಕಾದಂಬರಿಯಲ್ಲಿ ಗೌಣ ವಿಷಯಗಳಾಗಿದ್ದು, ಕಲಾಸಿದ್ಧಿಯತ್ತ ಸಾಗಿದ ಅವನ ಯತ್ನ, ದುಡಿಮೆಗಳ ಚಿತ್ರಣ ಪ್ರಧಾನವಾಗಿರಬೇಕು. ಇದುವೆ 'ಕಲಾವಿದ ಕಾದಂಬರಿ' ಎಂಬ ಪರಿಕಲ್ಪನೆಯ ಮುಖ್ಯ ಲಕ್ಷಣ. ಆದರೆ ಇವತ್ತಿನ ಕನ್ನಡದ ಅನೇಕ ಕಲಾವಿದ ಕಾದಂಬರಿಗಳು ಈ ಮಾನದಂಡಕ್ಕೆ ನಿಲ್ಲುವುದೇ ಇಲ್ಲ; ಕಾರಂತರ ಮೊಗಪಡೆದ ಮನ-ಒಂದೇ ಇದಕ್ಕೆ ಅಪವಾದ, ಎನ್ನುವ ತೂಕದ ಮಾತನ್ನು ಹೇಳಿದ್ದಾರೆ ಸಿ.ಎನ್.ಆರ್. ಇಂಥದೇ ಎತ್ತರದ ನಿಲುವನ್ನು ರಾಜಕೀಯ ಕಾದಂಬರಿಗಳ ವಿಷಯದಲ್ಲಿಯೂ ನಾವು ತಾಳಬೇಕಾಗುವುದು. ರಾಜಕೀಯ ಪುಢಾರಿಗಳ ಜೀವನ, ವ್ಯಕ್ತಿತ್ವ, ರಾಜಕೀಯ ಘಟನೆಗಳಿದ್ದ ಮಾತ್ರಕ್ಕೆ ಅದು ರಾಜಕೀಯ ಸಾಹಿತ್ಯ ಆಗಲಾರದು.

ರಾಮಚಂದ್ರನ್ ಅವರ ವಿಚಾರಗಳಿಗೆ ಸೂಕ್ತವೆನಿಸುವ ತಾತ್ವಿಕ ಹಿನ್ನೆಲೆಯನ್ನು ಪ್ರೊ. ಕೆ. ರಾಘವೇಂದ್ರರಾಯರು ಒದಗಿಸಿದ್ದಾರೆ. ಅದುವೆ ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಹಿನ್ನುಡಿ. ಈ ರಾಮಚಂದ್ರ-ರಾಘವೇಂದ್ರರು ಸಮಾನಶೀಲರು; ನಿಕಟ ಸ್ನೇಹಿತರು (ಕೆಲವು ಕಾಲ ಒಂದೇ ಮನೆಯಲ್ಲಿ ವಾಸವಾಗಿದ್ದವರೂ ಹೌದು.) ಇಲ್ಲಿ ಬಂದಿರುವ ಅನೇಕ ಅಂಶಗಳನ್ನು ಪರಸ್ಪರ ಚರ್ಚಿಸಿ ವಿನಿಮಯ ಮಾಡಿಕೊಂಡವರು. ಉನ್ನತವಾದ ಬೌದ್ಧಿಕ ಪಾತಳಿಯುಳ್ಳ ಅವರಲ್ಲಿ ಆಗೀಗ ತಾತ್ವಿಕ ಭಿನ್ನಾಭಿಪ್ರಾಯ ತೋರಿ ಬಂದರೆ ಅಚ್ಚರಿಯೇನಲ್ಲ. ಅವರ ಈ ಹಿನ್ನುಡಿಯಲ್ಲಿ ಅಭ್ಯಾಸಿಗಳಿಗೆ ಉಪಯುಕ್ತವಾದ ವಿಷಯಗಳಿರುವುದರಿಂದ ಅದನ್ನು ಇಲ್ಲಿ ಸೇರಿಸಲು ಸಂತೋಷಿಸುತ್ತೇವೆ.

ಸೆಪ್ಟೆಂಬರ್ ೧೯೮೮
ಮುಂಬಯಿ ವಿ. ವಿ.
ಕನ್ನಡ ಅಧ್ಯಯನ ವಿಭಾಗ

ಶ್ರೀನಿವಾಸ ಹಾವನೂರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೃತಜ್ಞತೆಗಳು

ಈ ಸಂಗ್ರಹದ ಲೇಖನಗಳಿಗೆ ಎಲ್ಲಾ ರೀತಿಯಿಂದಲೂ ಕಾರಣರಾದವರು ಪ್ರೊ. ಶ್ರೀನಿವಾಸ ಹಾವನೂರ ಅವರು. ಮಾರ್ಚ್ ೧೯೮೭ ರಲ್ಲಿ ಮುಂಬಯಿ ವಿಶ್ವ ವಿದ್ಯಾಲಯದ ಕನ್ನಡ ವಿಭಾಗದ ವತಿಯಿಂದ ನನ್ನನ್ನು ಕರೆಸಿ 'Guest Lectures' ರೂಪದಲ್ಲಿ ಪ್ರಬಂಧಗಳನ್ನು ಮಂಡಿಸಲು ಅವಕಾಶ ಕಲ್ಪಿಸಿಕೊಟ್ಟವರು ಅವರು. ಅಂತಹವರಿಗೆ ನನ್ನ ಭಾವನೆಗಳನ್ನು ಮತ್ತು ಕೃತಜ್ಞತೆಯನ್ನು ಸಮರ್ಪಕವಾಗಿ ವ್ಯಕ್ತ ಪಡಿಸಲು ಸಾಧ್ಯವೇ ಇಲ್ಲ. 'ನಿಮ್ಮ ಪ್ರೇಮ ಹಾಗೂ ಆಶೀರ್ವಾದ ಸದಾ ಹೀಗೆಯೇ ಇರಲಿ'–ಎಂದಷ್ಟು ಮಾತ್ರ ಹೇಳಬಲ್ಲೆ.

ಹಿನ್ನುಡಿಯನ್ನು ಬರೆದುಕೊಟ್ಟು ನನ್ನನ್ನು ಹರಸಿರುವವರು ನನ್ನ ಹಿರಿಯ ಮಿತ್ರ ರಾದ ಡಾ. ರಾಘವೇಂದ್ರರಾವ್ ಅವರು. ಸಾಹಿತ್ಯ ಹಾಗೂ ರಾಜಕೀಯ ಶಾಸ್ತ್ರ ಇವೆ ರಡರಲ್ಲೂ ಅಗಾಧ ಪಂಡಿತರು. ಅವರ 'ಹಿನ್ನುಡಿ'ಯಿಂದ ನನ್ನ ಕೃತಿಗೆ ಬೆಲೆ ಬಂದಿದೆ ಎಂದು ನಂಬಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕೆಂದೆನಿಸುತ್ತದೆ. ನನ್ನ ವಿಮರ್ಶಾ ಲೇಖನಗಳಲ್ಲಿ ನಾನು 'ಮಾರ್ಕ್ಸಿಸ್ಟ್' ವಿಚಾರಗಳನ್ನು ಮತ್ತು ದೃಷ್ಟಿಕೋನವನ್ನು ಪರಿಗಣಿಸದಿರುವುದಕ್ಕೆ ಕಾರಣ ಕೇವಲ ನನ್ನ ಅಜ್ಞಾನವಲ್ಲ. ನಾನು ಸಾಹಿತ್ಯವನ್ನು ಒಂದು ಅಪೂರ್ವ ಹಾಗೂ ಕ್ರಿಯಾತ್ಮಕ 'ಶಿಸ್ತು' (discipline) ಎಂದು ನಂಬುವ ಕಾರಣದಿಂದ ಪೂರ್ವ ನಿಯೋಜಿತ ದಾರಿಯಲ್ಲಿ ಪೂರ್ವ ನಿಶ್ಚಿತ ಸಿದ್ಧಾಂತವನ್ನು ತಲುಪುವ 'ಮಾರ್ಕ್ಸಿಸ್ಟ್ ವಿಮರ್ಶೆ' ನನ್ನದಾಗಲು ಸಾಧ್ಯವೇ ಇಲ್ಲ. ಹಾಗೆಂದು ಕ್ರಿಸ್ಟಾಫರ್ ಕಾಡ್‌ವೆಲ್, ರೇಮಂಡ್ ವಿಲಿಯಮ್ಸ್ ಇಂತಹ ವಿಮರ್ಶಕರ ಸಾಧನೆಯನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ನನ್ನ ದೃಷ್ಟಿಯಲ್ಲಿ ಒಂದು ಉತ್ತಮ ಸಾಹಿತ್ಯ ಕೃತಿ 'ಸಾಮಾಜಿಕ ದಾಖಲೆ' ಅಷ್ಟೇ ಅಲ್ಲ, ಒಂದು ಮಹತ್ತರ ರಚನೆ.' (A work of literature is not a 'document' but a 'monument'.)

ಈ ಸಂಗ್ರಹದಲ್ಲಿರುವ ಒಂದು ಪ್ರಬಂಧ "ಕನ್ನಡ ರಾಜಕೀಯ ಕಾದಂಬರಿ: ಒಂದು ಅಭ್ಯಾಸ"–ಮುಂಬಯಿಯಲ್ಲಿ ಓದಿದ ಒಂದು ಲೇಖನವೆ ಆಗಿದ್ದರೂ ಇಲ್ಲಿಯದು ಅದರ ವಿಸ್ತಾರಿತ ಮತ್ತು ಸುಧಾರಿತ ರೂಪ. ಈ ಪ್ರಬಂಧವನ್ನು ಬೆಂಗಳೂರಿನಲ್ಲಿ ಕಳೆದ ನವಂಬರದಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿ ಸಲು ಆಹ್ವಾನಿಸಿ ಪ್ರೋತ್ಸಾಹಿಸಿದ ಹಿರಿಯ ವಿದ್ವಾಂಸ ಡಾ. ಶಿವರುದ್ರಪ್ಪನವರಿಗೆ ನಾನು ಕೃತಜ್ಞನಾಗಿದ್ದೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲಿನಿಂದಲೂ ನನ್ನನ್ನು ಪ್ರೋತ್ಸಾಹಿಸುತ್ತಾ ಬಂದಿರುವ, ಸದ್ಯ ಉಪಕುಲಪತಿಗಳಾಗಿರುವ ಡಾ. ಯು. ಆರ್. ಅನಂತಮೂರ್ತಿಯವರಿಗೆ ಮತ್ತು ಡಾ. ಶಾಂತಿನಾಥ ದೇಸಾಯಿ ಅವರಿಗೆ; ಹಾಗೂ ಅನೇಕ ವಿಧದಲ್ಲಿ ನೆರವು ನೀಡಿರುವ ಡಾ. ವಿವೇಕ ರೈ. ಡಾ. ವಸಂತಕುಮಾರ್ ಮತ್ತು ಡಾ. ಶಿವರಾಮ ಪಡಿಕ್ಕಲ್ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಗದುಗಿನ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣದ ಸಂಚಾಲಕರಾದ ಶ್ರೀ ಅಶೋಕ, ಇವರುಗಳಿಗೆ ನಾನು ಋಣಿಯಾಗಿದ್ದೇನೆ.

ಮಂಗಳ ಗಂಗೋತ್ರಿ
ಮೇ ೧೯೮೮

ಸಿ. ಎನ್. ರಾಮಚಂದ್ರನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಪ್ಪೋಲೆ

ಪುಟ	ತಪ್ಪು	ಒಪ್ಪು
1	Structuralistical	Structuralist
9	ಇಸ್ರ	ಇಸರ್
11	ಅವರಿಗಿಂತ ಆ	ಅವರಿಗಿಂತ ಅವನು
13	ಕಲ್ಲರ್	ಕಲರ್
18	ರೊಮಾನ್ ಎಕ್ಲಫ್	ರೊಮಾನ್ ಎ ಕ್ಲೆಫ್
	(Roman eclef)	(Roman e clef)
23	ಇವರು	ಇರುವ
24	ಮಾರ್ಕ್ಸಿ ಷ್ಟ	ಮಾರ್ಕ್ಸಿ ಸ್ಟ
27	ಆ ಯಶಸ್ಸು	ಅಯಶಸ್ಸು
35	(Aestheticce....)	(Aesthetie....)
43	ಜೇಡ್‌ನ	ಜೀಡ್‌ನ
45	'ಅರ್ಕಿ ಟೈಪ್'	'ಆರ್ಕಿ ಟೈಪ್'
"	Psyctic	Psychic
46	ಮಹತ್ವಸ್ತು	ಮಹದ್ವಸ್ತು
"	ಮಣ್ಣು	ಹಣ್ಣು
48	ಪೆನಲಿಟ	ಪೆನಲಿಪಿ
49	ಗೋಸಿಯನ್ಸ್	ಗೋನಿಯನ್ಸ್
"	(Temptations to....)	(Temptations and....)
50	"Of an things....	"Of all things....
"	Let on man	Let no man
"	goods	gods
53	ಅಮೃತ ಮಿರಲಳಗೆಳಸಿದಂತಾಯ್ತು	ಅಮೃತ ಮಿರಲಳೆಗೆಳಸಿದಂತಾಯ್ತು
59	'humaniseanise'	'humanise'
"	ವಿಷ್ಣು	ವಿಪ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ತಪ್ಪು	ಒಪ್ಪು
61	ಕಲಾಭಿಮಾನದ	ದುರಭಿಮಾನದ
"	They	Thy
"	Stinset	Still Set
62	ಚಿರಕಾಲ ಮಪ್ಪುವುದಿಲ್ಲ	ಚಿರಕಾಲ ಮಿಪ್ಪುದಿಲ್ಲ
64	ಯೋಗಾನುಭವವನ್ನೂ	ಭೋಗಾನುಭವವನ್ನೂ

ಲೇಖಕ, ಮುದ್ರಕ, ಅದರಂತೆ ಪ್ರಕಾಶಕ ಈ ಮೂವರೂ ಮೂರು ದಿಕ್ಕಿನಲ್ಲಿ, ದೂರ ಇದ್ದವರು. ಹಾಗಾಗಿ ತಪ್ಪುಗಳು ಉಳಿದುಕೊಂಡಿವೆ, ಹೀಗಾಗಬಾರದಿತ್ತು. ಓದುಗರು ದಯವಿಟ್ಟು ಅವನ್ನು ಮೊದಲು ಸರಿಪಡಿಸಿಕೊಂಡೇ ಮುಂದುವರಿಯ ಬೇಕಾಗಿ ವಿನಂತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿವಿಡಿ

			ಪುಟ
೧.	ಸ್ವರೂಪ ವಿಮರ್ಶೆ	—ಒಂದು ತಾತ್ವಿಕ ವಿವೇಚನೆ.	೧
೨.	ರಾಜಕೀಯ ಕಾದಂಬರಿ	—ಕೆಲವು ಕನ್ನಡ ಕಾದಂಬರಿಗಳ ತೌಲನಿಕ ಅಭ್ಯಾಸ.	೧೮
೩.	ಕಲಾವಿದ ಕಾದಂಬರಿ	—ಕನ್ನಡದಲ್ಲಿ ಕಲಾವಿದ ಕಾದಂಬರಿಗಳು ಮತ್ತು ಕಾರಂತರ 'ಮೊಗ ಪಡೆದ ಮನ'	೩೦
೪.	ಪರಿಭ್ರಮಣ ಮತ್ತು ಶೋಧ	—ಕನ್ನಡ ಜೈಮಿನಿ ಭಾರತದ ಅಭ್ಯಾಸ.	೪೫
	ಹಿನ್ನುಡಿ– ಪಶ್ಚಿಮದ ಅಂಚಿನಲ್ಲಿ	—ಡಾ. ಕೆ. ರಾಘವೇಂದ್ರರಾವ್	೬೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧. 'ಸ್ವರೂಪ ವಿಮರ್ಶೆ'

ಒಂದು ತಾತ್ವಿಕ ವಿವೇಚನೆ

ಸಾಹಿತ್ಯ ವಿಮರ್ಶೆಯಲ್ಲಿ ಆಗಿಂದಾಗ್ಗೆ ಧೋರಣೆಗಳು ಮತ್ತು ವಿಮರ್ಶಾವಿಧಾನಗಳು ಏಕೆ ಬದಲಾಗುತ್ತವೆ? ಇಂದು ಒಬ್ಬ ಸಾಹಿತ್ಯ ವಿದ್ಯಾರ್ಥಿಯ ಎದುರಿಗಿರುವ ಬಗೆಬಗೆಯ-ಆಂಗ್ಲೊ-ಅಮೇರಿಕನ್ ವಿಮರ್ಶಾ ವಿಧಾನಗಳು ಯಾರನ್ನಾದರೂ ದಿಗ್ಭ್ರಮೆಗೊಳಿಸುವಷ್ಟು ವಿಪುಲವಾಗಿವೆ ಮತ್ತು ಅನೇಕ ವೇಳೆ ಪರಸ್ಪರ ವಿರುದ್ಧವಾಗಿಯೂ ಇವೆ: ಪರಂಪರಾಗತವಾದ 'ಕರ್ತೃನಿಷ್ಠ' (biographical), 'ಚಾರಿತ್ರಿಕ' (historical), ಮತ್ತು 'ದಾರ್ಶನಿಕ' (Philosophical) ವಿಮರ್ಶಾ –ವಿಧಾನಗಳಲ್ಲದೇ ಈ ಶತಮಾನದಲ್ಲಿ ಬೆಳೆದು ಬಂದಿರುವ 'ಮನೋವೈಜ್ಞಾನಿಕ' (psychological), 'ರೂಪನಿಷ್ಠ' (formalistic), 'ಮಾರ್ಕ್ಸಿಸ್ಟ್', 'ರಾಚನಿಕ' (structuralistical) ಇವೇ ಮುಂತಾದ ವಿಮರ್ಶಾ ವಿಧಾನಗಳು ಸಾಹಿತ್ಯ –ವಿದ್ಯಾರ್ಥಿಯಲ್ಲಿ ಮತ್ತು ಓದುಗನಲ್ಲಿ ಸಂಪೂರ್ಣ ಗೊಂದಲವನ್ನೇ ಉಂಟು ಮಾಡಿದರೆ ಆಶ್ಚರ್ಯವೇನಿಲ್ಲ. ಅಂತೆಯೇ ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿಯೂ ಅನೇಕ ವಿಮರ್ಶಾ ವಾದಗಳು, ವಿಧಿ-ವಿಧಾನಗಳು ಇರುವುದು ನಮಗೆಲ್ಲರಿಗೂ ತಿಳಿದಿರುವ ಸಂಗತಿಯೇ. ಅಲಂಕಾರ–ವಾದ, ರೀತಿ–ಗುಣ–ವಾದ, ರಸ–ಧ್ವನಿ–ವಾದ, ವಕ್ರೋಕ್ತಿ–ವಾದ, ಔಚಿತ್ಯ–ವಾದ ಇತ್ಯಾದಿ. ಸಾಹಿತ್ಯ ಕೃತಿಗಳಿಗೆ ಎಲ್ಲರೂ ಒಪ್ಪಿಕೊಳ್ಳುವಂತಹ ಸಾರ್ವಕಾಲಿಕ ಸತ್ಯವಾದ ಒಂದೇ ಅರ್ಥವಿದ್ದರೆ ಎಷ್ಟು ಚೆನ್ನ? —ಎಂದು ಯಾರಿಗಾದರೂ ಅನ್ನಿಸಬಹುದು. ಮತ್ತು ಈ ವಿಮರ್ಶಕರ ವಾದ–ವಿವಾದಗಳು ಅರ್ಥಹೀನ ಹಾಗೂ ನಿಷ್ಪ್ರಯೋಜಕವೆಂದು ಓದುಗರಿಗೆ, ಮುಖ್ಯವಾಗಿ ಸಾಹಿತಿಗಳಿಗೆ ತೋರಬಹುದು.

ಆದರೆ ಈ ಪ್ರಶ್ನೆ ಅಷ್ಟೇ ಸುಲಭವಾಗಿ ಉತ್ತರಿಸಿ ದೂರ ಮಾಡುವಂಥದ್ದಲ್ಲವೆಂದು ಗಂಭೀರವಾಗಿ ಸ್ವಲ್ಪ ಯೋಚಿಸಿದರೂ ತಿಳಿಯುತ್ತದೆ. ಮೊದಲನೆಯದಾಗಿ ವಿಮರ್ಶಾ ವಾದ–ವಿವಾದಗಳ ಹುಟ್ಟು ಸಾಹಿತ್ಯ ಕೃತಿಯ ಸ್ವರೂಪದಲ್ಲಿಯೇ ಅಡಗಿದೆ. ಅಂದರೆ ಸಾಹಿತ್ಯವೆಂದರೇನು? ಮತ್ತು ಸಾಹಿತ್ಯ ಕೃತಿಯನ್ನು ಅದೇ ಭಾಷೆಯನ್ನು ಉಪಯೋಗಿಸಿ ಬರೆಯಲ್ಪಟ್ಟ ಇತರ ವೈಚಾರಿಕ ಕೃತಿಗಳಿಂದ ಯಾವ ರೀತಿ ಬೇರ್ಪಡಿಸಬಹುದು? —ಎಂಬ ಪ್ರಶ್ನೆಗಳಿಗೆ ನಾವು ನೀಡುವ ಉತ್ತರಗಳೇ ನಾನಾ ಬಗೆಯ ವಾದಗಳಿಗೆ ಕಾರಣವಾಗುತ್ತವೆ. ಏಕೆಂದರೆ ಮೂಲಭೂತ ಪ್ರಶ್ನೆಗಳು ಅವೇ ಆದರೂ ಉತ್ತರಗಳು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತವೆ. ಮತ್ತು ಈ ಬದಲಾಗುತ್ತಾ ಹೋಗುವ ಉತ್ತರಗಳಿಗೆ ಓದುಗನ ಸಾಹಿತ್ಯಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರ, ವೈಯಕ್ತಿಕ ಹಾಗೂ ಸಾಮಾಜಿಕ ಮೌಲ್ಯ ವ್ಯವಸ್ಥೆ ಮತ್ತು ಇತರ (ಅಂದರೆ ಸಾಹಿತ್ಯವನ್ನು ಹೊರತಾದ) ಕ್ಷೇತ್ರಗಳಲ್ಲಾದ ಪ್ರಗತಿ ಮತ್ತು ಅದರಿಂದ ದೊರೆತ ಅರಿವು-ಇವೆಲ್ಲಾ ಕಾರಣಗಳಾಗುತ್ತವೆ. ಉದಾಹರಣೆಗೆ ಭರತನ ದೃಷ್ಟಿಯಲ್ಲಿ 'ರಸ' ವನ್ನು ನಿರ್ಮಾಣ ಮಾಡುವುದೇ ಸಾಹಿತ್ಯ, (ಅಂದರೆ 'ಪ್ರಯೋಜನ'ದ ದೃಷ್ಟಿಯಿಂದ ಭರತನು ಸಾಹಿತ್ಯವನ್ನು ನೋಡುತ್ತಾನೆ. ಮತ್ತು ಅದು ಕಾರಣ ಅವನಿಗೆ 'ವಸ್ತು' ಮುಖ್ಯವಾಗುತ್ತದೆ.) ಭಾಮಹನ ದೃಷ್ಟಿಯಲ್ಲಿ ಹೇಳಿಕೆಗಳಲ್ಲದ, ಭಾಷೆ ಮತ್ತು ಅರ್ಥಗಳಲ್ಲಿ 'ವಕ್ರತೆ'ಯಿಂದ ಗುರುತಿಸಲ್ಪಡತಕ್ಕದ್ದೇ ಸಾಹಿತ್ಯ (ಇಲ್ಲಿ ಭಾಮಹ ಒಂದು ಕೃತಿಯ 'ರೂಪ ಮತ್ತು ಶಿಲ್ಪ' ಇವುಗಳಿಗೆ ಒತ್ತು ಕೊಡುತ್ತಾನೆ). ಮುಂದೆ, ಸ್ಫೋಟ ವಾದದಿಂದ ಪ್ರಭಾವಿತನಾದ ಆನಂದವರ್ಧನನು ಕಾವ್ಯದ ಆತ್ಮ 'ಧ್ವನಿ' ಎಂದು ಘೋಷಿಸಿ, ಧ್ವನಿಯಲ್ಲದ್ದು ಕಾವ್ಯವೇ ಅಲ್ಲ ಎನ್ನುತ್ತಾನೆ. (ಅಂದರೆ ಸಾಹಿತ್ಯದಲ್ಲಿ ಆನಂದವರ್ಧನನು ಒಂದು ಕೃತಿಯ ರೂಪ ಮತ್ತು ಪ್ರಯೋಜನ ಎರಡರಲ್ಲಿಯೂ ಸಾಹಿತ್ಯಿಕ ಮತ್ತು ಸಾಹಿತ್ಯೇತರ ಕೃತಿಗಳನ್ನು ಬೇರ್ಪಡಿಸುತ್ತಾನೆ.)

ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ 'ಸಾಹಿತ್ಯವೆಂದರೇನು?' —ಎಂಬ ಪ್ರಶ್ನೆಗೆ ಲಾಕ್ಷಣಿಕರು ಕಾಲಕಾಲಕ್ಕೆ ಕೊಟ್ಟ ಭಿನ್ನ ಭಿನ್ನ ಉತ್ತರಗಳಿಗನುಗುಣವಾಗಿ ಭಿನ್ನ ಪ್ರಸ್ಥಾನಗಳು-ಅಲಂಕಾರ ಪ್ರಸ್ಥಾನ, ರೀತಿ ಪ್ರಸ್ಥಾನ, ಧ್ವನಿ ಪ್ರಸ್ಥಾನ ಇತ್ಯಾದಿ-- ಸ್ಥಾಪಿತವಾದುವು. ಇದೇ ರೀತಿಯಲ್ಲಿ ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ಗ್ರೀಕರಿಂದ ಇಂದಿನ ತನಕವೂ ಸಾಹಿತಿಗಳು ಹಾಗೂ ವಿಮರ್ಶಕರು ಸಾಹಿತ್ಯಕ್ಕೆ ಕೊಟ್ಟ ವಿಭಿನ್ನ ವ್ಯಾಖ್ಯಾನಗಳ ಕಾರಣದಿಂದ ಅನೇಕಾನೇಕ ವಿಮರ್ಶಾ ಪ್ರಸ್ಥಾನಗಳು ಜನ್ಮ ತಳೆದಿವೆ. ಮೂಲತಃ ಒಂದು ಕೃತಿ ಕವಿಯೊಬ್ಬನ ಕಾಲ್ಪನಿಕ ಮೂಸೆಯಲ್ಲಿ ಮೂಡಿ ಬಂದಿರುತ್ತದೆ. ಆ ಕೃತಿರಚನೆಯ ಹಿಂದಿರುವ ಉದ್ದೇಶ-ಕವಿಯ ವೈಯಕ್ತಿಕ ಜೀವನ ಮತ್ತು ಅವನ ಜೀವನ ಮೌಲ್ಯಗಳು-ಇವುಗಳನ್ನು ನಾವು ಅರ್ಥ ಮಾಡಿಕೊಳ್ಳದೇ ಅವನ ಕೃತಿಯನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲವೆಂಬುದು ನಮ್ಮ ನಿಲುವಾದರೆ ಅದು 'ಕರ್ತೃನಿಷ್ಠ ವಿಮರ್ಶೆ' (biographical criticism)ಗೆ ಎಡೆಗೊಡುತ್ತದೆ. ಇದಕ್ಕೆ ವಿರುದ್ಧವಾಗಿ, ಕೃತಿಯು ಕೃತಿಕಾರನಿಗಿಂತಲೂ ಶ್ರೇಷ್ಠ ಮತ್ತು ಕೃತಿಯ ಜನ್ಮ ದಲ್ಲಿ ಕೃತಿಕಾರನ ಸುಪ್ತ ಚಿತ್ತದ ಪ್ರಭಾವ ಹೆಚ್ಚಾಗಿರುತ್ತದೆ; ಆದ್ದರಿಂದ ನಾವು ಕೃತಿಕಾರ ನನ್ನು ಮರೆತು ಕೇವಲ ಕೃತಿಯನ್ನು, ಅದರ ಸಂಕೀರ್ಣ ರೂಪವನ್ನು ಮಾತ್ರ ಪರೀಕ್ಷಿಸ ಬೇಕು-ಎಂದು ನಂಬಿದರೆ ಅಂತಹ ವಿಮರ್ಶೆ 'ರೂಪನಿಷ್ಠ' (formalistic) ವಿಮರ್ಶೆ ಯಾಗುತ್ತದೆ; ಇತ್ಯಾದಿ

ಒಟ್ಟನಲ್ಲಿ ಹೀಗೆ ಹೇಳಬಹುದು:ಸಾಹಿತ್ಯವನ್ನು ಕುರಿತಾದ ನಮ್ಮ ನಂಬಿಕೆಗಳು- ಕೃತಿ-ಕೃತಿಕಾರ,ಕೃತಿ-ಸಮಾಜ, ಕೃತಿ-ಭಾಷೆ,ಹಾಗೂ ಕೃತಿ-ಪ್ರಯೋಜನ ಮುಂತಾದ ಸಂಕೀರ್ಣ ಸಂಬಂಧಗಳ ಬಗ್ಗೆ ನಮ್ಮ ನಂಬಿಕೆಗಳು ಬದಲಾಗುತ್ತಾ ಹೋಗುವಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮ್ಮ ವಿಮರ್ಶಾ ತತ್ವಗಳು ಮತ್ತು ವಿಧಾನಗಳು ಬದಲಾಗುತ್ತಾ ಹೋಗುತ್ತವೆ. ಮತ್ತು ಈ ಪರಿಸ್ಥಿತಿ ಅನಿವಾರ್ಯ ಕೂಡಾ. ಈ ವಿಷಯವನ್ನು ಕುರಿತು ಇತ್ತೀಚಿಗಿನ ಅಮೇರಿಕನ್ ಲಾಕ್ಷಣಿಕ ಎಹ್‌ರಿಂಜರ್ (Ehringer) ಉಪಯೋಗಿಸುವ ಪರಿಕಲ್ಪನೆಗಳು ಅತ್ಯಂತ ಉಪಯುಕ್ತವಾಗಿವೆ. ಅವನು 'ಡೇಟಾ', 'ವಾರಂಟ್' ಮತ್ತು 'ಕ್ಲೇಮ್' ಎಂಬ ಮೂರು ಪರಿಕಲ್ಪನೆಗಳನ್ನು ಸಾಹಿತ್ಯ ವಿಮರ್ಶೆಯಲ್ಲಿ ಬಳಸಬಹುದೆಂದು ಸೂಚಿಸುತ್ತಾನೆ. 'ಡೇಟಾ' ಎಂದರೆ ಕೃತಿಯು ನಾನಾ ಪದರುಗಳಲ್ಲಿ ನಮಗೆ ಕಂಡು ಬರುವ ಸಾಕ್ಷ್ಯ (ಕೃತಿ ನಿರೂಪಿಸುವ ಘಟನೆಗಳು, ಪಾತ್ರಗಳು, ಮೌಲ್ಯಗಳು); 'ಕ್ಲೇಮ್' ಎಂದರೆ ಒಂದು ಕೃತಿಯನ್ನು ನಾವು ಓದಿ ಅರ್ಥಮಾಡಿಕೊಂಡಾದ ಮೇಲೆ ಆ ಕೃತಿಯನ್ನು ಕುರಿತು ಮಾಡುವ ತೀರ್ಮಾನಗಳು. (ಉದಾ: ಈಯೊಂದು ಪಾತ್ರದ ಮೂಲಕ ಕೃತಿಕಾರ ಜೀವನ ಅರ್ಥಪೂರ್ಣವೆಂದು ಗುರುತಿಸುತ್ತಾನೆ; ಈ ಕೃತಿಯ ಮೌಲ್ಯಗಳು ಜೀವನ ವಿಮುಖವಾಗಿವೆ-ಇತ್ಯಾದಿ). ಎಹ್‌ರಿಂಜರ್‌ನ ದೃಷ್ಟಿಯಲ್ಲಿ ಕೃತಿ-ಸಾಕ್ಷ್ಯಕ್ಕೂ ಮತ್ತು ಕೃತಿಯನ್ನು ಕುರಿತಾದ ತೀರ್ಮಾನಕ್ಕೂ ಮಧ್ಯೆ ಅತ್ಯಂತ ಮಹತ್ವದ ಸಂಬಂಧ ಕಲ್ಪಿಸುವ ಸೇತುವೆ ಎಂದರೆ 'ವಾರೆಂಟ್'. 'ವಾರಂಟ್' ಪರಿಕಲ್ಪನೆಯನ್ನು ನಾವು 'ಸಾಹಿತ್ಯ'ವನ್ನು ಕುರಿತಾದ, ಅಂದರೆ ಕೃತಿ-ಕೃತಿಕಾರ, ಕೃತಿ-ಸಮಾಜ ಇತ್ಯಾದಿಗಳನ್ನು ಕುರಿತಾದ ನಮ್ಮ ತಾತ್ವಿಕ ನಂಬಿಕೆಗಳ ಹಾಗೂ ಕಲ್ಪನೆಗಳ ಒಟ್ಟು ಮೊತ್ತ ಎಂದು ಅರ್ಥೈಸಬಹುದು. ಈ ಪರಿಕಲ್ಪನೆಗಳನ್ನು ಉಪಯೋಗಿಸಿ ನಾವು ಎರಡು ಮುಖ್ಯ ವಿಚಾರಗಳನ್ನು ಹೀಗೆ ಮಂಡಿಸಬಹುದು.

1. ನಮ್ಮ 'ವಾರಂಟ್'ಗಳು ಬದಲಾದಂತೆ ನಮ್ಮ 'ಕ್ಲೇಮ್'ಗಳೂ ಬದಲಾಗುತ್ತವೆ; ಮತ್ತು

2. 'ಡೇಟಾ' ಸಾರ್ವಕಾಲಿಕ ಸತ್ಯವಲ್ಲ; ನಮ್ಮ 'ವಾರಂಟ್'ಗಳು ಒಂದೇ ಕೃತಿಯಲ್ಲಿ ಬೇರೆ ಬೇರೆ 'ಡೇಟಾ'ಗಳನ್ನು ಕಾಣಿಸುತ್ತವೆ. ನನ್ನ ದೃಷ್ಟಿಯಲ್ಲಿ ಎಹ್‌ರಿಂಜರ್ ನೀಡುವ ಎರಡನೆಯ ಸಂಗತಿ ಮೊದಲನೆಯದಕ್ಕಿಂತಲೂ ಹೆಚ್ಚು ಅರ್ಥಪೂರ್ಣ. ಏಕೆಂದರೆ ಆ ದೃಷ್ಟಿಕೋನ ಸಾಹಿತ್ಯಿಕ ಕೃತಿಯ ಸಂಕೀರ್ಣತೆಯನ್ನು ಮತ್ತು 'ಇದಮಿತ್ಥಂ' ಎಂದು ಒಂದು ಉತ್ತಮ ಸಾಹಿತ್ಯಿಕ ಕೃತಿಯ ಬಗ್ಗೆ ಹೇಳಲಾಗುವುದೇ ಇಲ್ಲ ಎಂಬ ಸತ್ಯವನ್ನೂ ಒಟ್ಟಿಗೇ ನಮ್ಮ ಮುಂದಿಡುತ್ತದೆ.

ಹಾಗೆಂದರೆ, ಸಾಹಿತ್ಯ ಕೃತಿಗಳನ್ನು ಕುರಿತು ನಾವು ಕೊಡುವ, ಕೊಡಬಹುದಾದ ಎಲ್ಲಾ ಅಭಿಪ್ರಾಯಗಳೂ ಸಮಾನವೆ? ಅಥವಾ ವಿವಿಧ ವಿಮರ್ಶಾ ವಿಧಾನಗಳಲ್ಲಿ ತರ-ತಮ ವ್ಯತ್ಯಾಸವಿದೆಯೆ? ಇದ್ದರೆ ಹೇಗೆ? ಈ ಎಲ್ಲಾ ಪ್ರಶ್ನೆಗಳಿಗೂ ಸ್ಥೂಲವಾಗಿ ಹೀಗೆ ಉತ್ತರಿಸಬಹುದು: ವಿಮರ್ಶಾ ವಿಧಾನಗಳಲ್ಲಿ ಸರಿ-ತಪ್ಪು ಅಥವಾ ಉಚ್ಚ-ನೀಚ ಭೇದಗಳನ್ನು ತರಲಾಗುವುದಿಲ್ಲ. ಏಕೆಂದರೆ ಯಾವುದೇ ಅಭಿಪ್ರಾಯಕ್ಕೂ, ವಿಮರ್ಶಾ ವಿಧಾನಕ್ಕೂ ತನ್ನದೇ ಆದ ತಾತ್ವಿಕ ಹಿನ್ನೆಲೆಯಿರುತ್ತದೆ. ಆದರೆ ಒಂದು ಅಭಿಪ್ರಾಯ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ವಿಧಾನ ಮತ್ತೊಂದು ಅಭಿಪ್ರಾಯ, ವಿಧಾನಕ್ಕಿಂತ ಹೆಚ್ಚು ಅರ್ಥವನ್ನು ಒಂದು ಕೃತಿಯಲ್ಲಿ ಕಾಣಿಸಲು ಸಮರ್ಥವಿರಬಹುದು. ಅಥವಾ ಹೀಗೆ ಹೇಳಬಹುದೇನೋ; ಒಂದು ಉತ್ತಮ ಸಾಹಿತ್ಯಕೃತಿ ಎಷ್ಟು ಅರ್ಥಪೂರ್ಣವಾಗಿರುತ್ತದೆಂದರೆ, ಅದೆಷ್ಟು ಬಗೆಯ ಸಂಕೀರ್ಣತೆಯನ್ನು ಒಳಗೊಂಡಿರುತ್ತದೆಂದರೆ, ಯಾವುದೇ ಒಂದು ಅಭಿಪ್ರಾಯ, ಒಂದು ದೃಷ್ಟಿಕೋನ ಅಥವಾ ಒಂದು ಮಾರ್ಗವು ಅದರ 'ಬಹುಮುಖೀ ಪ್ರತಿಭೆ'ಯನ್ನು ಗುರುತಿಸಲು ಸಾಧ್ಯವಿಲ್ಲ. ಆದ್ದರಿಂದ, ಒಂದು ಸ್ಪಷ್ಟ ತಾತ್ವಿಕ ನೆಲೆಯನ್ನುಳ್ಳ ಮತ್ತು ಕೃತಿಯಲ್ಲಿ ಹೊಸತಾಗಿ ಏನನ್ನಾದರೂ ಗುರುತಿಸಬಲ್ಲ ಯಾವುದೇ ವಿಮರ್ಶಾ ಮಾರ್ಗವು ಗ್ರಾಹ್ಯವಾಗುತ್ತದೆ.

೨

'ಸ್ವರೂಪ ವಿಮರ್ಶೆ'(Genre-criticism) ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಗಳಲ್ಲಿ ಅತ್ಯಂತ ಪುರಾತನವಾದುದು ಮತ್ತು ಅಷ್ಟೇ ಆಧುನಿಕವಾದುದೂ ಕೂಡಾ. ಒಂದು ದೃಷ್ಟಿಯಲ್ಲಿ, ಭರತನಿಂದ ಮಮ್ಮಟನವರೆಗೆ ಬೆಳೆದು ಬಂದ ನಮ್ಮ ಸಂಸ್ಕೃತ ಕಾವ್ಯಮೀಮಾಂಸೆಯ ಅಡಿಗಲ್ಲು ಸ್ವರೂಪ-ವಿಮರ್ಶೆಯೇ ಆಗಿದೆ. ಭರತನು 'ವಸ್ತು-ನಾಯಕ-ನಾಯಿಕಾ ಮತ್ತು ನಾಟಕ-ಶಿಲ್ಪ' ಇವುಗಳ ವೈವಿಧ್ಯದ ಆಧಾರದ ಮೇಲೆ ಕಲ್ಪಿಸುವ ಹತ್ತು ರೂಪಕ-ಪ್ರಕಾರಗಳು ಮತ್ತು ಅವನು ದಾಖಲಿಸುವ ಪ್ರತಿ ರೂಪಕಕ್ಕೂ ಇರಲೇಬೇಕಾದ ಲಕ್ಷಣಗಳು-'ಗುಣ-ರೀತಿ'ಗಳ ಭಿನ್ನತೆಯ ಆಧಾರದ ಮೇಲೆ ದಂಡಿ-ವಾಮನರು ನಿರ್ದೇಶಿಸುವ ಕಾವ್ಯ ಪ್ರಭೇದಗಳು-ನಾಲ್ಕು ಧ್ವನಿ ಪ್ರಕಾರಗಳು ಮತ್ತು ಅವುಗಳ ಆಧಾರದ ಮೇಲೆ ಆನಂದವರ್ಧನನು ನಿರ್ಮಿಸುವ ಕಾವ್ಯ ಪ್ರಭೇದಗಳು-ವಿಶ್ವನಾಥನು ಕಲ್ಪಿಸುವ ಹತ್ತು ಪ್ರಮುಖ ರೂಪಕಗಳು ಮತ್ತು ಹದಿನೆಂಟು ಉಪರೂಪಕಗಳು-ಇವೆಲ್ಲವೂ, 'ಸ್ವರೂಪ-ವಿಮರ್ಶೆ'ಯ ನಿದರ್ಶನಗಳೇ. ನಿಜವಾಗಿ ನೋಡಿದರೆ 'ಸ್ವರೂಪ-ವಿಮರ್ಶೆ' ಮತ್ತು ಅದರ ಅವಿಭಾಜ್ಯ ಅಂಗವಾದ 'ವರ್ಗೀಕರಣ' (classification) ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಕೆಲವು ಸಲ ಎಷ್ಟು ಅತಿರೇಕಕ್ಕೆ ಹೋಗುತ್ತದೆಂದರೆ ತನ್ನ 'ಸಾಹಿತ್ಯ ದರ್ಪಣ'ದಲ್ಲಿ ವಿಶ್ವನಾಥನು ಮುನ್ನೂರಕ್ಕಿಂತಲೂ ಹೆಚ್ಚು ನಾಯಿಕಾ-ಭೇದಗಳನ್ನು ಗುರುತಿಸುತ್ತಾನೆ. ಮತ್ತು ಅಪ್ಪಯ್ಯ ದೀಕ್ಷಿತರು ನೂರಹದಿನೈದು ಅಲಂಕಾರಗಳನ್ನು ಗುರುತಿಸುತ್ತಾರೆ.

ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿಯೂ 'ಸ್ವರೂಪ ವಿಮರ್ಶೆ' ಅರಿಸ್ಟಾಟಲ್‌ನಷ್ಟು ಪ್ರಾಚೀನ; ಆದರೆ ಅದಕ್ಕೆ ಹೊಸ ರೂಪವನ್ನು ಕೊಟ್ಟು ಇದು ಹೊಸ ದಿಕ್ಕಿನಲ್ಲಿ ಪ್ರವಹಿಸುವಂತೆ ಮಾಡಿದವರು ಆಧುನಿಕ ವಿಮರ್ಶಕರಾದ ನಾರ್ಥ್ರೊಪ್ ಫ್ರೈ (Northrop Frye), ಟೊಡೊರೊವ್ (Todorov), ಜೋನಥನ್ ಕಲರ್ (Jonathan Culler) ಇತ್ಯಾದಿ.[1] ಫ್ರೈ ಸ್ವರೂಪ-ವಿಮರ್ಶೆಯನ್ನು 'ಪುರಾಣ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿರಂತನ-ಪ್ರತೀಕ' ವಿಮರ್ಶೆಯೊಡನೆ (archetypal criticism) ಒಂದುಗೂಡಿಸಿದರೆ, ಕಲರ್ ಸ್ವರೂಪ-ವಿಮರ್ಶೆ,'ರಾಚನಿಕ-ವಿಮರ್ಶೆ' (structural criticism) ಮತ್ತು 'ವಾಚಕಾಭಿಮುಖ ವಿಮರ್ಶೆ' (Reader-response criticism) ಇವೆಲ್ಲವುಗಳ ಭವ್ಯ ಸಂಗಮವನ್ನು ಸೃಜಿಸಲು ಪ್ರಯತ್ನಿಸುತ್ತಾನೆ.

ಸ್ವರೂಪ ವಿಮರ್ಶೆಯ ವ್ಯಾಖ್ಯೆಯೇನು? ಒಂದು ಕೃತಿಯ 'ಸ್ವರೂಪ'ವನ್ನು ನಾವು ಹೇಗೆ ಗುರುತಿಸಬಹುದು? ಈ ಎರಡೂ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡುವುದು ಅಸಾಧ್ಯ ಮತ್ತು ಅಷ್ಟೇನೂ ಉಪಯುಕ್ತವೂ ಅಲ್ಲವೆಂದೆನಿಸುತ್ತದೆ. ಅಸಾಧ್ಯವೇಕೆಂದರೆ ಒಂದು ಕೃತಿಯ ಸ್ವರೂಪವನ್ನು ಗುರುತಿಸಲು ನಮಗೆ ಆ ಕೃತಿಯನ್ನೊಳಗೊಳ್ಳುವ ವರ್ಗದ ಅರಿವಿರಬೇಕು ಮತ್ತು ಸರಿಯಾದ ಆ ವರ್ಗದ ಅರಿವಿರಲು-ಅಂದರೆ ಈ ಕೃತಿ ಯಾವ ವರ್ಗಕ್ಕೆ ಸೇರುತ್ತದೆಂದು ಅರಿಯಲು-ನಮಗೆ ಕೃತಿಯ ಸ್ವರೂಪದ ಅರಿವಿರಲೇಬೇಕು. ಈ ಸನ್ನಿವೇಶವನ್ನು ಅಲನ್ ರಾಡ್‌ವೆ, 'ಹರ್ಮನ್ಯೂಟಿಕಲ್ ಡಿಲೆಮಾ' (hermeneutical dilemma) ಎಂದು ಕರೆಯುತ್ತಾನೆ.[2] ಇಂಥ ವ್ಯಾಖ್ಯಾನವು ಅನುಪಯುಕ್ತ; ಏಕೆಂದರೆ ವ್ಯಾಖ್ಯಾನಕ್ಕಿಂತ ನಮಗೆ ಹೆಚ್ಚು ಬೇಕಾದುದು ಆ ವಿಮರ್ಶಾ ಮಾರ್ಗದ ಪರಿಚಯ ಮತ್ತು ಆ ಮಾರ್ಗದಿಂದುಂಟಾಗುವ ಪ್ರಯೋಜನ. ಆದುದರಿಂದ 'ಸ್ವರೂಪ-ವಿಮರ್ಶೆ'ಯ ವ್ಯಾಖ್ಯಾನಕ್ಕೆ ಕೈಹಾಕದೇ ಈ ವಿಮರ್ಶಾ-ವಿಧಾನದ ಗೊತ್ತುಗುರಿಗಳನ್ನು ಕುರಿತು ನೋಡೋಣ.

ಸ್ವರೂಪ-ವಿಮರ್ಶೆಯ ಇತಿಹಾಸವನ್ನು ನೋಡಿದರೆ ಭಾರತದಲ್ಲಾಗಲೀ ಯುರೋಪಿನಲ್ಲಾಗಲೀ, ಅದು ಸೃಜನಾತ್ಮಕ ಸಾಹಿತ್ಯಕ್ಕೆ ಮಿತ್ರನಾಗುವುದಕ್ಕಿಂತ ಶತ್ರುವಾಗಿರುವುದೇ ಹೆಚ್ಚು ಕಂಡುಬರುತ್ತದೆ. ಸಾಹಿತ್ಯವನ್ನು ಅನೇಕ ಪ್ರಭೇದಗಳಲ್ಲಿ ವಿಭಜಿಸಿ ಅವುಗಳ ಭಿನ್ನಭಿನ್ನ ಲಕ್ಷಣಗಳನ್ನು ಗುರುತಿಸುವಾಗ ಭರತ-ಅರಿಸ್ಟಾಟಲ್ ಮುಂತಾದ ಆದಿ ವಿಮರ್ಶಕರು ತಾವು ನಿರೂಪಿಸಿದುದನ್ನು ಇತರರು ಅದೊಂದು ಆದೇಶದಂತೆ ಕಾಣಬೇಕೆಂದು ಪ್ರಾಯಶಃ ಭಾವಿಸಿರಲಿಲ್ಲ. ತಮ್ಮ ಮುಂದಿದ್ದ ಅಪಾರ ಸಾಹಿತ್ಯ ಕೃತಿಗಳನ್ನು ಓದುಗ-ಪ್ರೇಕ್ಷಕ-ವಿಮರ್ಶಕರ ರಸಾಸ್ವಾದನೆಯ ಅನುಕೂಲಕ್ಕಾಗಿ ಅವರುಗಳು ಕೆಲವು ಸಮಾನ ಲಕ್ಷಣಗಳನ್ನುಳ್ಳ ಕೃತಿಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿ ಆಯಾಯ ವರ್ಗಲಕ್ಷಣಗಳನ್ನು ತಿಳಿಹೇಳಿದರೆಂದು ತೋರುತ್ತದೆ. ಆದರೆ ಅವರ ಅನಂತರ ಬಂದ ಲಾಕ್ಷಣಿಕರು-ವಿಮರ್ಶಕರೂ ಸಾಹಿತಿಗಳೂ ಕೂಡ-ಅವರ ವಿಚಾರಗಳನ್ನು 'ಆದೇಶ'ಗಳಂತೆ ಕಂಡು, ಯಾಂತ್ರಿಕವಾಗಿ 'ಈ ಕೃತಿಯಲ್ಲಿ ಈ ಲಕ್ಷಣಗಳಿಲ್ಲದಿದ್ದರೆ ಇದು ಉತ್ತಮ ಕೃತಿಯಲ್ಲ' ಎಂಬಂತಹ ಧೋರಣೆಯನ್ನು (Prescriptive attitude) ತಳೆದರು. ಮತ್ತು ಇಂತಹ ಯಾಂತ್ರಿಕ ಹಾಗೂ ಅನುಚಿತ ಶಾಸನ-ಪ್ರವೃತ್ತಿಯ ವಿರುದ್ಧ ಸೃಜನಾತ್ಮಕ ಲೇಖಕರು ಪ್ರತಿಭಟಿಸಿದ್ದುದು ನಮಗೆ ಮತ್ತೆ ಮತ್ತೆ ಸಾಹಿತ್ಯ ಚರಿತ್ರೆಯಲ್ಲಿ ಕಂಡುಬರುತ್ತದೆ. ಕಾಳಿದಾಸ "ಪುರಾಣಮಿತ್ಯೇವ ನ ಸಾಧು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವಂ" ಎಂದು ಪರಂಪರಾಗತ ದೃಷ್ಟಿಕೋನವನ್ನು ಖಂಡಿಸಿದರೆ, ಭವಭೂತಿ "ಕಾಲೋಹ್ಯಯಂ ನಿರವಧಿಃ, ವಿಪುಲಾಚ ಪೃಥ್ವೀ"–ನಾನು ಬರೆದುದನ್ನು ಅರ್ಥ ಮಾಡಿಕೊಳ್ಳಬಲ್ಲ ರಸಿಕರು ಇಂದಲ್ಲದಿದ್ದರೆ ನಾಳೆ, ಈ ದೇಶದಲ್ಲಿಲ್ಲದಿದ್ದರೆ ಮತ್ತೊಂದು ದೇಶದಲ್ಲಿ ಇದ್ದೇ ಇರುತ್ತಾರೆ –ಎಂದು ಸಮಾಧಾನ ಮಾಡಿಕೊಂಡನು.[3] ಹಾಗೆಯೇ ಇಂಗ್ಲಂಡ್‌ನಲ್ಲಿ ಅರಿಸ್ಟಾಟಲ್‌ನ ವಿಚಾರಗಳಿಗೆ ವಿರೋಧವಾಗಿವೆಯೆಂಬ ಕಾರಣದಿಂದ ಶೇಕ್ಸ್‌ಪಿಯರ್‌ನ ನಾಟಕಗಳನ್ನು ಖಂಡಿಸುವವರು ಮತ್ತು ಅವನ ಪ್ರತಿಭೆಯನ್ನು ಮೆಚ್ಚುವವರು ಇವರುಗಳ ಮಧ್ಯೆ ನೂರಾರು ವರ್ಷಗಳ ವರೆಗೂ ವಾಗ್ಯುದ್ಧ, ಮಂಡನೆ–ಖಂಡನೆಗಳು ನಡೆದುವು.

ಪ್ರಾಯಶಃ ಈ ಕಾರಣಕ್ಕಾಗಿಯೇ–ಅಂದರೆ ಸ್ವರೂಪ–ವಿಮರ್ಶೆ 'ಶಾಸನ–ಪ್ರವೃತ್ತಿ'ಯನ್ನು ತಾಳುತ್ತದೆ ಮತ್ತು ಅದು ಕಾರಣ ಸೃಜನಾತ್ಮಕ ಸಾಹಿತಿಗಳ ಮಾರ್ಗದಲ್ಲಿ ಅಡ್ಡ ಬರುತ್ತದೆ ಎಂಬ ಕಾರಣಕ್ಕಾಗಿಯೇ–ಅಭಿಜಾತ ಯುಗದಲ್ಲಿ ಮತ್ತು ಅನಂತರ 17–18ನೇ ಶತಮಾನಗಳಲ್ಲಿ ಅತ್ಯಂತ ಮಹತ್ವವನ್ನು ಪಡೆದಿದ್ದ 'ಸ್ವರೂಪ–ಪ್ರಶ್ನೆ' 19ನೇ ಶತಮಾನದ ರೊಮ್ಯಾಂಟಿಕ್ ಯುಗದಲ್ಲಿ ಅಗಣ್ಯವೆಂದು ತಿರಸ್ಕೃತವಾಯಿತು. ಫ್ರಾನ್ಸ್‌ನಲ್ಲಿ ವಿಕ್ಟರ್ ಹ್ಯೂಗೊ (Victor Hugo), ಇಂಗ್ಲಂಡ್‌ನಲ್ಲಿ ವರ್ಡ್ಸ್‌ವರ್ತ್, ಕೋಲ್‌ರಿಜ್ ಮುಂತಾದವರು ಸ್ವರೂಪ–ವಿಮರ್ಶೆ ಮತ್ತು ಸಾಹಿತ್ಯ ಕೃತಿಗಳ ವರ್ಗೀಕರಣವನ್ನು ಪ್ರಬಲವಾಗಿ ವಿರೋಧಿಸಿದರು. ಅದರಲ್ಲೂ ಇಟಲಿಯ ಕ್ರೋಚೆ (Benedetto Croce) 'ಕೆಲವು ಸಮಾನ ಲಕ್ಷಣಗಳ ಮೇಲೆ ಸಾಹಿತ್ಯ ಕೃತಿಗಳನ್ನು ವರ್ಗೀಕರಿಸುವುದು ಮತ್ತು ಪ್ರತ್ಯೇಕ ಕೃತಿಗೂ ಒಂದು ಲೇಬಲ್ ಹಚ್ಚುವುದು ಆ ಕೃತಿಗೂ ಹಾಗೂ ವಿಮರ್ಶಕನಿಗೂ ಕೂಡಿಯೇ ಆಗುವ ಹಿಂಸೆ (violence)' ಎಂಬುದಾಗಿ ಈ ವಿಧದ ವಿಮರ್ಶೆಯನ್ನು ತಿರಸ್ಕರಿಸಿದನು.[4] ಈ ಶತಮಾನದ ಮೂರು ಮತ್ತು ನಾಲ್ಕನೇ ದಶಕಗಳಲ್ಲಿ ಅಮೇರಿಕಾದಲ್ಲಿ ಅತ್ಯಂತ ಪ್ರಭಾವಶಾಲಿಗಳಾದ 'ನವ್ಯ ವಿಮರ್ಶಕ'ರಿಗೆ (New Critics) ಕೃತಿಯ ಸ್ವರೂಪ–ಪ್ರಶ್ನೆ ಕೇವಲ ಒಂದು ಕೃತಕ ಪ್ರಶ್ನೆಯಂತೆ, ಅಂದರೆ ಅರ್ಥಹೀನ ಪ್ರಶ್ನೆಯಂತೆ ತೋರಿತು. ಆದರೆ 1956 ರಲ್ಲಿ ಬಂದ ನಾರ್ಥ್ರೊಪ್ ಫ್ರೈ ವಿಮರ್ಶಕನ 'ಅನಾಟಮಿ ಆಫ್ ಕ್ರಿಟಿಸಿಸಂ' (Anatomy of criticism) ಮತ್ತೆ ಸ್ವರೂಪ–ವಿಮರ್ಶೆಗೆ ಹೊಸ ಚಾಲನೆಯನ್ನು ಕೊಟ್ಟಿತು. ಹರ್ಶ್ ಅವರ "ವಲಿಡಿಟಿ ಇನ್ ಇಂಟರ್‌ಪ್ರಿಟೇಶನ್" (Validity in interpretation)[5] ಮತ್ತು ಜೊನಥನ್ ಕಲರ್ ಅವರ "ಸ್ಟ್ರಕ್ಚರಲಿಸ್ಟ್ ಪೊಯೆಟಿಕ್ಸ್" (Structuralist Poetics) ಈ ಗ್ರಂಥಗಳು ಸ್ವರೂಪ–ವಿಮರ್ಶೆಗೆ ನೂತನ ಮಾರ್ಗಗಳನ್ನು ಕಲ್ಪಿಸಿದುವು.

ಸ್ವರೂಪ–ವಿಮರ್ಶೆ ಅತ್ಯಂತ ಹಳೆಯ ವಿಮರ್ಶಾ ವಿಧಾನಗಳಲ್ಲಿ ಒಂದು; ಕಾಲಾನುಕ್ರಮದಲ್ಲಿ ಇದು ಯಾಂತ್ರಿಕವೂ ಮತ್ತು 'ಶಾಸನ–ಧೋರಣೆ'ಯದ್ದೂ ಆಗುತ್ತದೆ; ಎಲ್ಲದಕ್ಕಿಂತ ಹೆಚ್ಚಾಗಿ ಈ ವಿಧದ ವಿಮರ್ಶೆ ಒಂದು ಕೃತಿಯಲ್ಲಿ ಮೌಲಿಕತೆಗಿಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಚ್ಚಾಗಿ ಅನುಕರಣವನ್ನೇ, ಪರಂಪರೆಯ ಅನುಸರಣೆಯನ್ನೇ ದೊಡ್ಡ ಗುಣವೆಂದು ಕಾಣುತ್ತದೆ-ಒಂದು ಕೃತಿಯವಿಶಿಷ್ಟ ಸ್ಥಿತಿಯನ್ನೇ, ವೈಶಿಷ್ಟ್ಯವನ್ನೇ ನಿರಾಕರಿಸುತ್ತದೆ. ಹೀಗಿದ್ದ ಮೇಲೆ ಅಂತಹ ವಿಮರ್ಶಾಕ್ರಮದ ಅಗತ್ಯವೇನು? ಆ ಮಾರ್ಗದ ಪ್ರಯೋಜನಗಳೇನು?

ಸ್ವರೂಪ-ವಿಮರ್ಶೆಯ ಅಗತ್ಯವೇನೆಂದರೆ ಅದು ವಿಮರ್ಶಕ ನಿರಾಕರಿಸಿದರೂ ಉಳಿಯುವ, ಮಾನವನ ವೈಚಾರಿಕ ಕ್ರಮದಲ್ಲಿಯೇ ಜನ್ಮ ತಾಳಿದೆ. ನಮ್ಮೆದುರಿಗಿರುವ ವಿಶಾಲ ವಿಶ್ವವನ್ನೂ ನಮ್ಮ ನಾನಾವಿಧದ ಅನುಭವಗಳನ್ನೂ, ನಾನಾವಿಧದ ಜನರನ್ನೂ ನಾವು ಅರ್ಥೈಸಿಕೊಳ್ಳುವುದೇ ಅವುಗಳಿಗೊಂದು ರೂಪ ಕೊಡುವುದರ ಮೂಲಕ; ಮತ್ತು ಅವುಗಳನ್ನು ವರ್ಗೀಕರಿಸುವುದರ ಮೂಲಕ. ಸಮಾನ ಲಕ್ಷಣಗಳನ್ನಾಧರಿಸಿದ ವರ್ಗೀಕರಣ ಪ್ರವೃತ್ತಿ ಇಲ್ಲದಿದ್ದರೆ ಪ್ರತಿಯೊಂದು ವ್ಯಕ್ತಿಯ ಅನುಭವವೂ ಸ್ವಯಂ ವಿಶಿಷ್ಟವಾಗಿಯೇ ಉಳಿಯುವುದರಿಂದ ವ್ಯವಸ್ಥಿತ ಜ್ಞಾನಾರ್ಜನೆ ಮತ್ತು ಅರ್ಥೈಸುವಿಕೆ ನಮಗೆ ಪ್ರಪಂಚದಲ್ಲಿ ಸಾಧ್ಯವಾಗುತ್ತಲೇ ಇರುತ್ತಿರಲಿಲ್ಲ. ಹಾಗೆ ವರ್ಗೀಕರಣವು ಜೀವನದಲ್ಲಿ ಅನಿವಾರ್ಯವಾದರೆ ಸಾಹಿತ್ಯ ವಿಮರ್ಶೆಯಲ್ಲಿ ಹೇಗೆ ನಿವಾರ್ಯವಾಗಬಹುದು?

ಅಷ್ಟೇ ಅಲ್ಲದೆ ಸ್ವರೂಪ-ವಿಮರ್ಶೆಯ ಪ್ರಯೋಜನಗಳೂ ಅನೇಕವಿವೆ. ಅವುಗಳಲ್ಲಿ ಅತಿ ಮುಖ್ಯವಾದುದೆಂದರೆ ವಿಮರ್ಶೆಗೆ ಅನಿವಾರ್ಯವಾಗಿ ಬೇಕಾಗುವ ತೌಲನಿಕ ಅಭ್ಯಾಸಕ್ಕೆ ಈ ವಿಮರ್ಶೆ ಒಂದು ಕ್ರಮಯುಕ್ತ ಮತ್ತು ಸಹಜ ಸನ್ನಿವೇಶವನ್ನು ನಿರ್ಮಿಸುತ್ತದೆ. ಯಾವುದೇ ಕೃತಿಯ ಮೌಲಿಕತೆಯನ್ನು ನಾವು ಗುರುತಿಸಬೇಕಾದರೂ ಆ ಕೃತಿಯನ್ನು ಸಮಾನಗುಣಗಳನ್ನುಳ್ಳ ಇತರ ಕೃತಿಗಳೊಡನೆ ನಾವು ಹೋಲಿಸಲೇಬೇಕು. "ನಿಜವೆಂದರೆ ವಿಶೇಷತೆ ಮತ್ತು ಸಾಮಾನ್ಯತೆ (Particularity and generality) ಹಾಗೂ ಸ್ವರೂಪ-ವರ್ಗೀಕರಣ ಮತ್ತು (ಕೃತಿಯ) ವಿಶಿಷ್ಟ ಮೌಲಿಕತೆ-ಇವುಗಳಲ್ಲಿ ಪರಸ್ಪರ ವಿರೋಧವೇನೂ ಇಲ್ಲ. ಅಲ್ಲದೆ ಮೌಲಿಕತೆಯನ್ನು ಅರಿಯಲು ಸಮಾನವೆಂದು ತೋರುವ (ಕೃತಿಗಳ) ತುಲನೆಯ ಹೊರತು ಬೇರೆ ಮಾರ್ಗವೇ ಇಲ್ಲ" ಎಂದು ಆಲನ್ ರಾಡ್‌ವೇ ಹೇಳುತ್ತಾನೆ. ಉದಾಹರಣೆಗೆ "ಜೈಮಿನಿ ಭಾರತ"ದ ಮೌಲಿಕತೆ (ಅಥವಾ ಅದರ ಕೊರತೆ) ಅದನ್ನು ಮಹಾಕಾವ್ಯವೆಂದು ಪರಿಗಣಿಸಿ ಇತರ ಮಹಾಕಾವ್ಯಗಳೊಡನೆ ಹೋಲಿಸಿದಾಗ ತಾನೆ ನಮಗೆ ಕಂಡುಬರುವುದು? ಅಂದರೆ ಸ್ವರೂಪ-ವಿಮರ್ಶೆಯ ಮೂಲವಾದ ತೌಲನಿಕ ಅಭ್ಯಾಸವು, ಒಂದು ಕೃತಿಯು ಇತರ ಸಮಾನ ಕೃತಿಗಳಿಗೆ-ಅಥವಾ ಆ ಸಾಹಿತ್ಯ ಪರಂಪರೆಗೆ-ಎಷ್ಟು ಹತ್ತಿರವಾಗಿದೆ ಎನ್ನುವುದಕ್ಕಿಂತ ಎಷ್ಟು ಭಿನ್ನವಾಗಿದೆ ಎಂಬುದರ ಮೇಲೆ ಒತ್ತು ಕೊಡುತ್ತದೆ.

ಎರಡನೆಯದಾಗಿ-ಹರ್ಶ್ ವಾದಿಸುವಂತೆ, ಕೃತಿಕಾರನಿಗೂ ಕೃತಿಗೂ ಅತ್ಯಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಘನಿಷ್ಟ ಸಂಬಂಧವಿದೆಯೆಂದಾದರೆ, ಕೃತಿ ರಚನೆಯಲ್ಲಿ ಕೃತಿಕಾರನಿಗಿರುವ ಉದ್ದೇಶ (intentionality) ಅವನು ಆಯ್ದುಕೊಳ್ಳುವ ಸಾಹಿತ್ಯ ಪ್ರಕಾರದಲ್ಲಿಯೇ ಕಂಡು ಬರುತ್ತದೆ. "ನಮ್ಮ ಚಿತ್ತವೃತ್ತಿ (consiousness) ಪ್ರಭೇದಗಳಲ್ಲಿಯೆ (types) ಕೆಲಸ ಮಾಡುತ್ತದೆ" ಎಂದು ಹರ್ಶ್ ಹೇಳುತ್ತಾನೆ.[7] ಮತ್ತು ಆ ದೃಷ್ಟಿಯಿಂದ ತನ ಗಿರುವ ಅನೇಕ ಸಾಧ್ಯತೆಗಳಲ್ಲಿ ಒಂದಾದ ಸಾಹಿತ್ಯ ಪ್ರಭೇದವನ್ನು ಆರಿಸುವ ಕೃತಿಕಾರನ ಆಯ್ಕೆಯೇ ಅವನ ಸಾಹಿತ್ಯಿಕ ಒಲವನ್ನೂ ಉದ್ದೇಶವನ್ನೂ ಮತ್ತು ಮೌಲ್ಯಗಳನ್ನೂ ಖಚಿತವಾಗಿ ಸೂಚಿಸುತ್ತದೆಂದು ವ್ಯಾಖ್ಯಾನಿಸುತ್ತಾನೆ. ಉದಾಹರಣೆಗೆ ಕುವೆಂಪುರವರ "ರಾಮಾಯಣ ದರ್ಶನಂ" ಕೃತಿಯನ್ನು ತೆಗೆದುಕೊಳ್ಳಬಹುದು. ಮಹಾಕಾವ್ಯ ಪರಂಪರೆ ಅಷ್ಟೇನೂ ಪ್ರಬಲವಾಗಿಲ್ಲದ ಈ ಶತಮಾನದಲ್ಲಿ ಕುವೆಂಪುರವರು ತಮ್ಮ ವಿಶಿಷ್ಟ ದರ್ಶನವನ್ನು ಸಾಕಾರಪಡಿಸಲು ಮಹಾಕಾವ್ಯ ಪ್ರಭೇದವನ್ನೇ ಆಯ್ಕೆ ಮಾಡಿದುದು ಸಾಹಿತ್ಯಿಕವಾಗಿ ಅವರು ಮಹಾಕಾವ್ಯಗಳಿಗೆ ಕೊಡುವ ಮಹತ್ವವನ್ನು ಮತ್ತು ಮಹಾಕಾವ್ಯ ಪರಂಪರೆಯಲ್ಲಿ ಅಂತರ್ಗತವಾಗಿರುವ ಮೌಲ್ಯಗಳನ್ನು ಸ್ವೀಕರಿಸುವುದನ್ನೂ ಸೂಚಿಸಬಹುದು.

ಅಥವಾ ಅವರ ಆಯ್ಕೆ ಮಹಾಕಾವ್ಯ ಪರಂಪರೆ ಪ್ರತಿನಿಧಿಸುವ ಮೌಲ್ಯಗಳ ತಿರಸ್ಕಾರವೂ ಇರಬಹುದು. ಎಂದರೆ ಕೃತಿಕಾರ ಒಂದು ಸಾಹಿತ್ಯ ಪ್ರಭೇದವನ್ನು ಆಯ್ಕೆ ಮಾಡಿದಾಗ ಅವನ ಉದ್ದೇಶ ಆ ಸಾಹಿತ್ಯ ಪರಂಪರೆಯನ್ನು ಮುಂದುವರಿಸುವುದು ಅಥವಾ ವಿರೋಧಿಸುವುದು ಯಾವುದಾದರೂ ಆಗಬಹುದು. "ರಾಮಾಯಣ ದರ್ಶನಂ" ಕೃತಿಯಲ್ಲಿ ಬರುವ ರಾವಣ, ಮಂಥರೆ, ಶಬರಿ ಮುಂತಾದವರುಗಳ ಪಾತ್ರವನ್ನು ಲಕ್ಷಿಸಿದಾಗ-ಅವರು ಪರಂಪರಾಗತ ಕಲ್ಪನೆಗಳಿಂದ ಎಷ್ಟು ಭಿನ್ನರಾಗಿದ್ದಾರೆಂದು ವಿಚಾರಿಸಿದಾಗ-ನಮಗೆ ಕುವೆಂಪುರವರು ಮಹಾಕಾವ್ಯ ಪರಂಪರೆಯಲ್ಲಿ ಅಂತರ್ಗತವಾದ ಮೌಲ್ಯಗಳನ್ನು, ಜೀವನ ದೃಷ್ಟಿಯನ್ನು ಎಷ್ಟು ದೂರ ಮಾಡಿದ್ದಾರೆಂದು ಗೊತ್ತಾಗುತ್ತದೆ. (ಪುರುಷೋತ್ತಮ ರಾಮ-ದುಷ್ಟ ರಾವಣ; ಮಾತ್ಸರ್ಯದಿಂದ ಕೂಡಿದ ಕಪಟಿ ಮಂಥರೆ; ಹೀನ ಕುಲದ ಶಬರಿ;-ಇತ್ಯಾದಿ ರಚನೆಗಳನ್ನೇ ಅಲ್ಲದೆ ಶಿಷ್ಟ-ದುಷ್ಟ; ಉತ್ತಮ-ಹೀನ-ಹೀಗೆ ಜೀವನವನ್ನು ನೋಡುವ ದ್ವಂದ್ವಾತ್ಮಕ ದೃಷ್ಟಿಯನ್ನೂ ಈ ಕೃತಿಯಲ್ಲಿ ಕವಿ ದೂರ ಮಾಡುತ್ತಾರೆ). ಅಣಕು ಕೃತಿಗಳು (mock-forms) ಈ ಮಾತಿಗೆ ಸಮರ್ಥನೆಯನ್ನೀಯುತ್ತವೆ. ಅವು ತಮ್ಮ ವಸ್ತುವನ್ನೇ ಅಲ್ಲದೆ ಅದರ ಸಾಹಿತ್ಯ ಪ್ರಭೇದವನ್ನೂ ಮತ್ತು ಅದು ನಿರ್ದೇಶಿಸುವ ಮೌಲ್ಯಗಳನ್ನೂ ಒಟ್ಟಿಗೇ ನಗೆಗೀಡುಮಾಡುತ್ತವೆ-ಪೋಪ್ ಕವಿಯ 'ದ ರೇಪ್ ಆಫ್ ದ ಲಾಕ್' ಅಣಕು ಕಾವ್ಯವು ತನ್ನ ಸಮಕಾಲೀನ ಸಮಾಜದ ಮೌಲ್ಯಹೀನತೆಯನ್ನು, ಅರ್ಥಹೀನ ಸಾಮಾಜಿಕ ಅಂತಸ್ತುಗಳನ್ನು ಟೀಕಿಸುವಂತೆಯೇ ಹೋಮರ್‌ನಿಂದ ಶುರುವಾದ ಮಹಾಕಾವ್ಯ ಪರಂಪರೆ ಹಾಗೂ ಅದರ ಮೌಲ್ಯಗಳೂ ಕೂಡ ಎಷ್ಟು ಕೃತಕವೆಂದು ತೋರಿಸುವ ಹಾಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ದೃಷ್ಟಿಕೋನದಿಂದ ನೋಡಿದಾಗ ಸ್ವರೂಪ-ವಿಮರ್ಶೆ ಅನೇಕ ಸಾಧ್ಯತೆಗಳುಳ್ಳ ಒಂದು ವಿಶಾಲ ಕ್ಷೇತ್ರವನ್ನೇ ನಮ್ಮದಾಗಿಸುತ್ತದೆ. ಕೃತಿಕಾರ ತನ್ನ ಕೃತಿಯಲ್ಲಿ ಒಂದು ಸಾಹಿತ್ಯ ಪ್ರಭೇದದ ಜತೆಗೇ ಇತರ ಸಾಹಿತ್ಯ ಪ್ರಭೇದಗಳನ್ನೂ ಆರಿಸಿಕೊಳ್ಳಬಹುದು; ಮತ್ತು ತನ್ನ ಕೃತಿಯಲ್ಲಿ ಈ ಪ್ರಭೇದಗಳನ್ನು ಎದುರುಬದುರಾಗಿಸಿ ಆ ಮೂಲಕ ಒಂದು ವಿಶಿಷ್ಟ ಶಿಲ್ಪವನ್ನೂ ಅರ್ಥವನ್ನೂ ಓದುಗರಿಗೆ ಕೊಡಬಹುದು. ಈ ವಿಧದ ಶಿಲ್ಪವು ಉದಾಹರಣೆಗೆ-ದಂಡಿಯ 'ದಶಕುಮಾರ ಚರಿತೆ'ಯಲ್ಲಿ, "ಕನ್ನಡ ಜೈಮಿನಿ ಭಾರತ"ದಲ್ಲಿ ಹಾಗೂ ಛಾಸರ್ ಕವಿಯ "ಕ್ಯಾಂಟರ್‌ಬರಿ ಟೇಲ್ಸ್"ನಲ್ಲಿ ಕಂಡು ಬರುತ್ತದೆ. ಈ ಕೃತಿಗಳಲ್ಲೆಲ್ಲಾ ಕೃತಿಕಾರ ಒಂದು ಪ್ರಭೇದವನ್ನು (ಮತ್ತದರ ಮೌಲ್ಯಗಳನ್ನು) ಮೊದಲು ಎತ್ತಿ ಹಿಡಿದು, ಅದನ್ನು ಮತ್ತೊಂದು ಪ್ರಭೇದದ ಮೂಲಕ ಖಂಡಿಸಿ, ಮತ್ತೆ ಇನ್ನೊಂದು ಪ್ರಭೇದದ ಮೂಲಕ ಖಂಡನೆಯನ್ನು ಖಂಡಿಸಿ-ಹೀಗೆ ಅನ್ಯಾದೃಶವಾದ ಒಂದು ವಿಶಿಷ್ಟ ಶಿಲ್ಪ ವಿನ್ಯಾಸವನ್ನು ರಚಿಸುತ್ತಾನೆ. ಈ ಶಿಲ್ಪ ವಿನ್ಯಾಸದ ಅರಿವು ಮತ್ತು ಅದರಿಂದುಂಟಾಗುವ ರಸಾನಂದ-ನಮಗೆ ಸ್ವರೂಪ ವಿಮರ್ಶೆಯಲ್ಲಿ ಮಾತ್ರ ಸಾಧ್ಯವಾಗುತ್ತದೆ.

ಮತ್ತೆ ಈ ಶತಮಾನದ ಜರ್ಮನ್ ಚಿಂತಕ ವುಲ್ಫ್‌ಗಾಂಗ್ ಇಸ್‌ರ (Wolfgang Iser) ಎಂಬವನ ಅಭಿಪ್ರಾಯದಲ್ಲಿ ಓದುಗರೂ ಕೂಡಾ ತಮ್ಮ ಅನುಭವ, ಅಭ್ಯಾಸ ಇವುಗಳ ಆಧಾರದ ಮೇಲೆ ಸಹಜವಾಗಿಯೇ ಸಾಹಿತ್ಯ ಕೃತಿಗಳನ್ನು ವರ್ಗೀಕರಿಸುತ್ತಾರೆ; ಅಲ್ಲದೆ ಆ ವರ್ಗೀಕರಣದ ಅರಿವಿನಲ್ಲಿ ತಾವು ಯಾವುದೇ ಒಂದು ನೂತನ ಕೃತಿಯನ್ನು ಪ್ರವೇಶಿಸುವಾಗಲೂ ತಮ್ಮದೇ ಆದ 'ನಿರೀಕ್ಷೆ'ಗಳನ್ನು ತರುತ್ತಾರೆ.[8] ಆ ಕೃತಿ ಅಂತಹ ಓದುಗರ 'ನಿರೀಕ್ಷೆ'ಗಳನ್ನು ಸಂಪೂರ್ಣ ತೃಪ್ತಿಗೊಳಿಸಬಹುದು (ಜನಪ್ರಿಯ ಕೃತಿಗಳನ್ನು ಈ ವರ್ಗಕ್ಕೆ ಸೇರಿಸಬಹುದು), ಅಥವಾ ಅವನ್ನು ಆಂಶಿಕವಾಗಿ ಅಥವಾ ಪೂರ್ಣವಾಗಿ ಭಂಗಗೊಳಿಸಬಹುದು (ಮೌಲಿಕ ಕೃತಿಗಳು), ಅಥವಾ ಓದುಗರ ಪರಂಪರಾಗತ ನಿರೀಕ್ಷೆಗಳಿಗೆ ಬದಲಾಗಿ ನೂತನ ನಿರೀಕ್ಷೆಗಳನ್ನೇ ಸೃಷ್ಟಿಸಬಹುದು (ಕ್ರಾಂತಿಕಾರಕ ಕೃತಿಗಳಂತೆ). ಏನೇ ಆದರೂ ಓದುಗರ 'ನಿರೀಕ್ಷೆ'ಗಳಿರುವುದು ನಿಜ ಮತ್ತು ಈ 'ನಿರೀಕ್ಷೆಗಳು' ಮುಖ್ಯವಾಗಿ ಕೃತಿ-ಸ್ವರೂಪದಿಂದಲೇ ಉದ್ಭವಿಸಿರುತ್ತವೆ ಎನ್ನುವುದೂ ನಿಜ. ಕೃತಿ-ಸ್ವರೂಪದಿಂದ (ಅಂದರೆ ಒಂದು ಕೃತಿ ಈ ಸಾಹಿತ್ಯ ಪ್ರಭೇದಕ್ಕೆ ಸೇರಿರಬಹುದು ಎಂಬ ಊಹೆಯಿಂದ) ಉತ್ಪನ್ನವಾಗುವ 'ನಿರೀಕ್ಷೆ'ಗಳು ಹೇಗೆ ಒಂದು ಕೃತಿಯ ಅರ್ಥ-ಗ್ರಹಿಕೆಯನ್ನು ನಿರ್ಣಯಿಸುತ್ತವೆ ಎಂದು ತೋರಿಸಲು ಹೀಥರ್ ಡುಬ್ರೋ (Heather Dubrow) ಎಂಬ ವಿಮರ್ಶಕನು ತನ್ನ Genre ಗ್ರಂಥದಲ್ಲಿ ಈ ಉದಾಹರಣೆಯನ್ನು ಕೊಡುತ್ತಾನೆ. ಈ ಒಂದು ವಾಕ್ಯವೃಂದವನ್ನು ನೋಡಿ:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಆಗ ಗಡಿಯಾರವು ೧೦.೩೦ನ್ನು ತೋರಿಸುತ್ತಿತ್ತು. ಆದರೆ ಆ ಗಡಿಯಾರವು ಈಗೀಗ ಸರಿಯಾಗಿ ನಡೆಯುತ್ತಿಲ್ಲವೆಂದು ಕೆಲವರು ಸೂಚಿಸಿದ್ದರು. ಮುಂದಿನ ಕೊಠಡಿಯ ಹಾಸಿಗೆಯ ಮೇಲೆ ಸ್ತ್ರೀಯೊಬ್ಬಳ ಮೃತ ದೇಹವು ಸ್ತಬ್ಧವಾಗಿ ಬಿದ್ದಿದ್ದಿತು. ಅಷ್ಟೇ ನಿಶ್ಶಬ್ದವಾಗಿ ಒಬ್ಬನ ಆಕೃತಿಯು ಆ ಕೊಠಡಿಯಿಂದ ಹೊರಕ್ಕೆ ನಡೆಯಿತು. ಆ ಪರಿಸರದಲ್ಲೆಲ್ಲಾ ಕೇಳ ಬರುತ್ತಿದ್ದ ಶಬ್ದಗಳೆಂದರೆ ಎರಡೇ-ಗಡಿಯಾರದ ಟಿಕ್ ಟಿಕ್ ಚಲನೆಯ ಶಬ್ದ ಮತ್ತು ಒಂದು ಶಿಶುವಿನ ಆಕ್ರಂದನದ ಶಬ್ದ." 9

ಹೀಗೆ ಪ್ರಾರಂಭವಾಗುವ ಒಂದು ಕೃತಿಯನ್ನು ನಾವು ಸಾಮಾಜಿಕ ಕಾದಂಬರಿಯೆಂದು (ಡಿಕಿನ್ಸ್‌ನ "ಆಲಿವರ್ ಟ್ವಿಸ್ಟ್"ನಂತೆ) ನಿರೀಕ್ಷಿಸಿ ಓದಲು ತೊಡಗಿದರೆ, ಪ್ರತಿಯೊಂದು ವಿವರವೂ ನಮಗೆ ಒಂದು ಬಗೆಯ ಅರ್ಥವನ್ನು ಕೊಡುತ್ತದೆ; ಮೃತ ಸ್ತ್ರೀ ಅಳುತ್ತಿರುವ ಮಗುವಿನ ತಾಯಿಯಿರಬಹುದು, ಹೊರಗೆ ಹೋಗುತ್ತಿರುವ ವ್ಯಕ್ತಿ ಡಾಕ್ಟರ್ ಅಥವಾ ಆ ಸ್ತ್ರೀಯ ಪತಿ ಇರಬಹುದು, ಇತ್ಯಾದಿ. ಅಲ್ಲದೆ ಮುಖ್ಯವಾಗಿ ನಾವು ಪ್ರತಿಯೊಂದು ವಿವರವನ್ನೂ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಮೃತ ಸ್ತ್ರೀಯಳನ್ನು ಮತ್ತು ಆ ನವಜಾತ ಶಿಶುವನ್ನು ಕುರಿತು ನಮಗೆ ಕರುಣೆ ಉಂಟಾಗುತ್ತದೆ. ಸರಿಯಾಗಿ ನಡೆಯದೇ ಇರುವ ಗಡಿಯಾರವು ಅಕಾಲಿಕ ಮೃತ್ಯುವನ್ನು ಮತ್ತು ಕಾಲವೈಪರೀತ್ಯವನ್ನೂ ಸೂಚಿಸುವ ಸಂಕೇತವಾಗುತ್ತದೆ.

ಹಾಗಲ್ಲದೆ ಆ ಕೃತಿಯನ್ನು ನಾವು ಒಂದು ರಹಸ್ಯಮಯ ಪತ್ತೇದಾರಿ ಕಾದಂಬರಿಯಂತೆ ಓದಿದರೆ, ಎಲ್ಲಾ ವಿವರಗಳೂ ಬೇರೆಯೇ ಆದ ಅರ್ಥವನ್ನು ನಮಗೆ ಕೊಡುತ್ತವೆ. ಸತ್ತು ಬಿದ್ದಿರುವ ಸ್ತ್ರೀ ಕೊಲೆಯಾಗಿರಬಹುದು ಮತ್ತು ಹೊರಗೆ ಹೋಗುತ್ತಿರುವ ವ್ಯಕ್ತಿಯೇ ಅವಳ ಕೊಲೆಗಾರನಿರಬಹುದು. ಅವನೇ ಅಥವಾ ಅವನ ಗುಂಪಿನವರು ಆ ಗಡಿಯಾರವನ್ನು ಕೆಡಿಸಿರಬಹುದು. ಅಲ್ಲದೆ, ನಮ್ಮ ಹೃದಯದಲ್ಲಿ ಆ ಮೃತ ಸ್ತ್ರೀಯಳ ಬಗ್ಗೆ ಹಾಗೂ ಆ ಮಗುವಿನ ಬಗ್ಗೆ ಯಾವುದೇ ವಿಧದ ಅನುಕಂಪ ಉಂಟಾಗುವುದಿಲ್ಲ. ಏಕೆಂದರೆ ಪತ್ತೇದಾರಿ ಕಥೆಗಳಲ್ಲಿ ನಾವು ಒಂದು ವಿಧದ 'ಬೌದ್ಧಿಕ ಆಟ'ವನ್ನು ನಿರೀಕ್ಷಿಸುತ್ತೇವೆಯೇ ವಿನಹಃ ಸಾಚಾ ಜೀವನಾನುಭವಗಳನ್ನಲ್ಲ.

೩

ಸ್ವರೂಪ-ವಿಮರ್ಶೆಯಲ್ಲಿ ನಾವು ವಿವಿಧ ಸಾಹಿತ್ಯ-ಪ್ರಕಾರ, ಉಪಪ್ರಕಾರಗಳ ವರ್ಗೀಕರಣವನ್ನು ಯಾವ ಆಧಾರದ ಮೇಲೆ ಮಾಡಬಹುದು? ವರ್ಗೀಕರಣ ಮೂಲತಃ ವಸ್ತುನಿಷ್ಠವಾಗಿರಬಹುದು ಅಥವಾ ಸೈದ್ಧಾಂತಿಕವಾಗಿರಬಹುದು. (Deductive genres ಮತ್ತು theoretical genres). ಅರಿಸ್ಟಾಟಲ್, ಹೊರೆಸ್, ಭರತ, ಧನಂಜಯ ಮುಂತಾದವರುಗಳ ವರ್ಗೀಕರಣ ವಸ್ತುನಿಷ್ಠ; ಎಂದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವರು ಪ್ರತ್ಯಕ್ಷವಾಗಿ ತಮ್ಮ ಮುಂದಿರುವ ಕೃತಿಗಳನ್ನು ಪರೀಕ್ಷಿಸಿ, ಯಾವುದೋ ಒಂದು ಮಾನದಂಡದ ಆಧಾರದ ಮೇಲೆ (ಆ ಮಾನದಂಡ ವಸ್ತು, ಭಾಷೆ, ಪಾತ್ರ-ಸ್ವಭಾವ, ಕೃತಿಶಿಲ್ಪ ಇವುಗಳಲ್ಲಿ ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚು ಇರಬಹುದು). ಅವುಗಳನ್ನು ವರ್ಗೀಕರಿಸಿ ಪ್ರತಿಯೊಂದು ವರ್ಗದ ವರ್ಗಲಕ್ಷಣಗಳನ್ನೂ ನಮೂದಿಸುತ್ತಾರೆ. ಅಥವಾ ಇನ್ನೂ ಮೂಲಕ್ಕೆ ಹೋದರೆ ಅರಿಸ್ಟಾಟಲ್, ಭರತ ಇವರುಗಳು ಸಾಹಿತ್ಯವನ್ನು ಅದು ಓದುಗನನ್ನು ತಲುಪುವ ಬಗೆಯ ಆಧಾರದ ಮೇಲೆ (ಫ್ರೈ ಅವನ ಶಬ್ದಗಳಲ್ಲಿ "Radical of presentation")[10] ವರ್ಗೀಕರಿಸುತ್ತಾರೆ. ಆ ಮಾನದಂಡದ ಆಧಾರದಿಂದ ಭರತನು ಕಾವ್ಯವನ್ನು 'ದೃಶ್ಯ ಕಾವ್ಯ'-'ಶ್ರವ್ಯ ಕಾವ್ಯ'ವೆಂದು ವಿಂಗಡಿಸುತ್ತಾನೆ. ಮತ್ತು ಅರಿಸ್ಟಾಟಲ್ ಸಾಹಿತ್ಯದ ಗುರಿ 'ನಟನೆ', 'ಹಾಡುವುದು' ಮತ್ತು 'ನಿರೂಪಣೆ' ಎಂದು ಮೂರು ಬಗೆಯಾಗಿ ವಿಂಗಡಿತ್ತಾನೆ. (The dramatic, the lyric, and the narrative). ಅನಂತರ ಈ ಪ್ರತಿಯೊಂದು ವರ್ಗದಲ್ಲಿಯೂ ಉಪವರ್ಗಗಳನ್ನು ಗುರುತಿಸಲು ಬೇರೆ ಬೇರೆ ಲಕ್ಷಣಗಳನ್ನು ಉಪಯೋಗಿಸುತ್ತಾರೆ. (ವಸ್ತು-ಪಾತ್ರ-ಶೈಲಿ ಇತ್ಯಾದಿ).

ಆಧುನಿಕ ಅಮೇರಿಕನ್ ವಿಮರ್ಶಕ ನಾರ್ಥ್ರೋಪ್ ಫ್ರೈ ಸ್ವರೂಪ-ವಿಮರ್ಶೆಯನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬೆಳೆಸುತ್ತಾನೆ. ಅವನದು ಮೂಲತಃ ಸೈದ್ಧಾಂತಿಕ ಸಾಹಿತ್ಯ ಪ್ರಭೇದ (Theoretical genres). ಒಟ್ಟಾರೆ ಸಾಹಿತ್ಯವನ್ನು ಅವನು ಒಂದು ನೆಲೆಯಲ್ಲಿ ಕೃತಿಯ ನಾಯಕ, ಅವನ ಪರಿಸರ, ಹಾಗೂ ಇತರ ಮಾನವರು-ಇವರುಗಳ ಮಧ್ಯೆ ಇರುವ ಸಂಬಂಧವನ್ನು ಆಧರಿಸಿ ಐದು ವರ್ಗಗಳಾಗಿ ವಿಂಗಡಿಸುತ್ತಾನೆ. ಒಂದು ಕೃತಿಯ ನಾಯಕನನ್ನು ತನ್ನ ಪರಿಸರ ಮತ್ತು ಇತರ ಮಾನವರೊಡನೆ ಹೋಲಿಸಿದಾಗ (1) ಅವನು ಅವರಿಗಿಂತ ಮೂಲ ಸ್ಥಿತಿಯಲ್ಲಿಯೇ (Kind) ಶ್ರೇಷ್ಠವಾಗಿರಬಹುದು (ಪುರಾಣಗಳಲ್ಲಿ ಬರುವ ದೇವ-ದೇವತೆಗಳಂತೆ); (2) ಅವರಿಗಿಂತ ಆ ಅಂಶಿಕವಾಗಿ ಶ್ರೇಷ್ಠನಾಗಿರಬಹುದು. (ಅದ್ಭುತ-ರಮ್ಯ ಕಥಾನಕಗಳ ನಾಯಕರಂತೆ); (3) ಅವನ ಪರಿಸರಕ್ಕಿಂತ ಅಲ್ಲದೆ ಸಹ ಮಾನವರಿಗಿಂತ ಅಂಶಿಕವಾಗಿ ಶ್ರೇಷ್ಠನಿರಬಹುದು (ಮಹಾಕಾವ್ಯಗಳ ಮತ್ತು ದುರಂತ ನಾಟಕಗಳ ನಾಯಕರಂತೆ-ಈ ಪ್ರಕಾರವನ್ನು ಫ್ರೈ. "High mimetic mode" ಎಂದು ಕರೆಯುತ್ತಾನೆ; (4) ಅವನ ಪರಿಸರಕ್ಕೂ ಮತ್ತು ಸಹಮಾನವರಿಗೂ ಸಹ ಶ್ರೇಷ್ಠನಲ್ಲದಿರಬಹುದು-ಅಂದರೆ ಅವನೂ ನಮ್ಮ ನಿಮ್ಮಂತೆ ಸಾಧಾರಣ ಮಾನವನಿರಬಹುದು (ಸುಖಾಂತ ನಾಟಕಗಳ ಮತ್ತು ವಾಸ್ತವಿಕ ಕಾದಂಬರಿಗಳ ನಾಯಕರಂತೆ "Low mimetic mode" ಎಂದು ಈ ಪ್ರಕಾರವನ್ನು ಫ್ರೈ ಗುರುತಿಸುತ್ತಾನೆ); ಮತ್ತು ಅವನು ಪರಿಸರಕ್ಕಿಂತಲೂ, ಸಹಮಾನವರಿಗಿಂತಲೂ ಗುಣದಲ್ಲಿ ಕೀಳಾಗಿರಬಹುದು (ಅಣಕು ಕೃತಿಗಳ ಹಾಗೂ ವ್ಯಂಗ್ಯಾತ್ಮಕ ಕೃತಿಗಳ ನಾಯಕರಂತೆ-ಫ್ರೈನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಗೀಕರಣದಲ್ಲಿ ಇದು "Ironic mode"[11]. ಈ ರೀತಿ ಸಂಪೂರ್ಣ ಸಾಹಿತ್ಯವನ್ನು ಒಟ್ಟು ಐದು ವರ್ಗಗಳಲ್ಲಿ ವಿಂಗಡಿಸಿ (ಒಂದು ವರ್ಗದಲ್ಲಿ ನಾಟಕ, ಕಾವ್ಯ, ಕಾದಂಬರಿ ಇತ್ಯಾದಿ ಇರಬಹುದು), ಅನಂತರ ಪ್ರತಿಯೊಂದು ವರ್ಗಕ್ಕೆ ಸೇರಬಹುದಾದ ಕೃತಿಗಳ ತುಲನಾತ್ಮಕ ಅಭ್ಯಾಸವನ್ನು ಮಾಡುತ್ತಾನೆ. (ಅಂದರೆ ಬೇರೆ ಬೇರೆ ನೆಲೆಗಳಲ್ಲಿ ಬೇರೆ ಬೇರೆ ವರ್ಗೀಕರಣಗಳನ್ನು ಫ್ರೈ ಮಾಡುತ್ತಾನೆಂಬುದೂ ಮತ್ತು ಅವನ ವಿಮರ್ಶೆ ಯಲ್ಲಿ 'ಚಿರಂತನ-ಪ್ರತೀಕ ವಿಮರ್ಶೆ'(Archetypal criticism)ಯೂ ಸಮ್ಮಿಳಿತ ವಾಗಿದೆಯೆಂಬುದೂ ನಾವು ಗಮನಿಸಬೇಕಾದ ವಿಷಯ.)

ಫರ್ಡಿನೆಂಡ್ ದ ಸೋಸ್ಯೊ ಮತ್ತು ನೋವಮ್ ಚೋಮ್‌ಸ್ಕಿ (Ferdinand de Savssure ಮತ್ತು Noam chomsky) ಇವರುಗಳು ಭಾಷೆಯಲ್ಲಿ 'ಆಂತರಿಕ ಶಿಲ್ಪ' ಮತ್ತು 'ಬಾಹ್ಯ ಶಿಲ್ಪ' (Deep structure ಮತ್ತು surface structure)[12] ಗಳೆಂದು ಗುರುತಿಸುವಂತೆ ಒಂದು ಸಾಹಿತ್ಯ ಕೃತಿಯಲ್ಲಿಯೂ ನಾವು ಎರಡು ವಿಧದ ಶಿಲ್ಪವನ್ನು-ವಿನ್ಯಾಸವನ್ನು-ಗುರುತಿಸಬಹುದು. ಉದಾಹರಣೆಗೆ, ನಾವು ಕನ್ನಡ ಕಾದಂಬರಿ "ಸಂಸ್ಕಾರ"ವನ್ನು ತೆಗೆದುಕೊಳ್ಳೋಣ. ಈ ಕೃತಿಯ 'ಬಾಹ್ಯ ಶಿಲ್ಪ'ವೆಂದರೆ ನಾರಣಪ್ಪನ ಸಾವು, ಚಂದ್ರಿ-ಆಚಾರ್ಯರ ಸಂಗ ಇತ್ಯಾದಿ ಘಟನೆಗಳ, ವಿವರಗಳ ಮೂಲಕ ಗ್ರಹಿಸುವ ವಿನ್ಯಾಸ. ಹಾಗೆಯೇ ಈ ಘಟನೆಗಳು-ವಿವರಗಳು-ಪಾತ್ರ-ವೈವಿಧ್ಯಗಳು-ಇವುಗಳನ್ನೆಲ್ಲಾ ಮರೆತು ಅವುಗಳ ಆಳದಲ್ಲಿರುವ ಮೂಲಭೂತ ವಿನ್ಯಾಸವನ್ನು ನೋಡಿದರೆ ಅದನ್ನು 'ತನ್ನ ಸ್ವಂತಿಕೆಗಾಗಿ ವ್ಯಕ್ತಿ ನಡೆಸುವ ಶೋಧ' ವೆನ್ನಬಹುದು. ಈ ನೆಲೆಯಲ್ಲಿ ಜರ್ಮನ್ ವಿಮರ್ಶಕರು, ಕೃತಿಯ ಆಂತರಿಕ ವಸ್ತು ವಿನ್ಯಾಸದ ಆಧಾರದ ಮೇಲೆ ಅನೇಕ ಸಾಹಿತ್ಯ-ಪ್ರಭೇದಗಳನ್ನು ಗುರುತಿಸುತ್ತಾರೆ; 'ಬಿಲ್ಡುಂಗ್ಸ್ ರೋಮಾನ್' (Bildungs Roman) ಬೆಳವಣಿಗೆಯನ್ನು ಮುಖ್ಯ ವಸ್ತುವನ್ನಾಗುಳ್ಳ, ನಾಯಕನ ಜನ್ಮದಿಂದ ಪ್ರಾರಂಭಿಸಿ ಅವನ ಪ್ರಬುದ್ಧಾವಸ್ಥೆಯಲ್ಲಿ ಕೊನೆಗೊಳ್ಳುವ ಕೃತಿಗಳು-ಲಾರೆನ್ಸ್‌ನ "ಸನ್ಸ್ ಅಂಡ್ ಲವರ್ಸ್; ಡಿಕನ್ಸ್‌ನ" "ಡೇವಿಡ್ ಕಾಪರಫೀಲ್ಡ್", ಇತ್ಯಾದಿ); 'ಕುನ್‌ಸ್ಟ್ಲರ್ ರೋಮಾನ್' (Kunstler Roman); ಕಲಾವಿದನನ್ನು ಮುಖ್ಯವಸ್ತುವನ್ನಾಗುಳ್ಳ ಮತ್ತು ಅವನ ಕಲೆಯ ಬೆಳವಣಿಗೆಯನ್ನು ಚಿತ್ರಿಸುವ ಕೃತಿಗಳು-ಜಾಯ್ಸ್‌ನ "ದ ಪೋರ್ಟ್ರೇಟ್, ಆಫ್ ಆ್ಯನ್ ಆರ್ಟಿಸ್ಟ್", ಕಾರಂತರ "ಮೊಗ ಪಡೆದ ಮನ" ಇತ್ಯಾದಿ); "ರೋಮಾನ್ ಎ ಕ್ಲೇಫ್" (Roman a clef); ನಿಜಜೀವನದ ವ್ಯಕ್ತಿಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯ ವಾಗುವಂತೆ ಚಿತ್ರಿಸಿ ಅವರನ್ನು ವಿಡಂಬಿಸುವ ಕೃತಿಗಳು-ಪೋಪ್ ಕವಿಯ ವಿಡಂಬನ ಚಿತ್ರಗಳು; (ಗ್ರೀಕ್ ನಾಟಕಕಾರ ಅರಿಸ್ಟೋಫನೀಸ್‌ನ"ದ ಕ್ಲೌಡ್ಸ್,); ಇತ್ಯಾದಿ. ಈ ವೈಚಾರಿಕ ಕ್ರಮವನ್ನೇ ಮುಂದುವರಿಸಿ ನಾವು "ರಾಜಕೀಯ ಕಾದಂಬರಿ", "ಸಾಂಸಾ ರಿಕ ಕಾದಂಬರಿ" ಎಂದೆಲ್ಲಾ ವಿಶ್ಲೇಷಿಸುತ್ತಾ ಹೋಗಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಬಗೆಯ ವರ್ಗೀಕರಣದ ಒಂದು ಮುಖ್ಯ ಪ್ರಯೋಜನವೆಂದರೆ ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ಭಾಷೆಗಳಲ್ಲಿ ಬರೆಯಲ್ಪಟ್ಟ ಅನೇಕ ಕೃತಿಗಳನ್ನು ಒಂದೆಡೆ ತಂದು ಅವುಗಳ ತುಲನಾತ್ಮಕ ಅಭ್ಯಾಸ ಮಾಡಬಹುದು. ಮತ್ತು ಇಂತಹ ತುಲನಾತ್ಮಕ ಅಭ್ಯಾಸ ಕೃತಿಗಳಿಗೇ ಸೀಮಿತವಾಗೇನೂ ಇರುವುದಿಲ್ಲ. ಕೃತಿಗಳ ಚೌಕಟ್ಟಿನಲ್ಲಿ ಪ್ರಾರಂಭವಾದ ಅಭ್ಯಾಸ, ಅನಂತರ ಆ ಚೌಕಟ್ಟನ್ನು ಮೀರಿ ಆ ಕೃತಿ ನಿರ್ಮಾಣಕ್ಕೆ ಕಾರಣವಾದ, ಸಾಹಿತ್ಯಿಕ–ಸಾಂಸ್ಕೃತಿಕ ಪರಿಸರದ ಅಧ್ಯಯನಕ್ಕೂ ಎಡೆಮಾಡಿಕೊಡುತ್ತದೆ. ಮತ್ತು ಈ ಸಂದರ್ಭದಲ್ಲಿ ಸ್ವರೂಪ ವಿಮರ್ಶೆ 'ಸಾಂಸ್ಕೃತಿಕ ವಿಮರ್ಶೆ' (Culture criticism) ಮತ್ತು 'ಸಮಾಜ ಶಾಸ್ತ್ರೀಯ ವಿಮರ್ಶೆ' (Sociological criticism) ಇವುಗಳೊಂದಿಗೆ ಬೆರೆಯುತ್ತದೆ.

ಜೋನಥನ್ ಕಲ್ಲರ್ (Jonathan Culler) ಸ್ವರೂಪ ವಿಮರ್ಶೆಗೆ ಮತ್ತೊಂದು ನೂತನ ಆಯಾಮವನ್ನು ಕಲ್ಪಿಸುತ್ತಾನೆ. ಅವನ ದೃಷ್ಟಿಯಲ್ಲಿ ನಾವು ಸ್ವರೂಪ ವಿಮರ್ಶೆಯನ್ನು ಎರಡು ಬಗೆಯಲ್ಲಿ ಕೈಗೊಳ್ಳಬಹುದು: 'ಚಾರಿತ್ರಿಕ ಅಭ್ಯಾಸ' ಮತ್ತು 'ಸದ್ಯ ಸ್ಥಿತಿ ಅಭ್ಯಾಸ' (Diachronic study and synchronic study).[13] ಚಾರಿತ್ರಿಕ ಅಭ್ಯಾಸವೆಂದರೆ ಒಂದು ಸಾಹಿತ್ಯ ಪ್ರಭೇದವು-ಮಹಾಕಾವ್ಯ, ಸಾನೆಟ್, ರಾಜಕೀಯ ಕಾದಂಬರಿ, ಇತ್ಯಾದಿ ಪ್ರಾರಂಭವಾದಾಗಿನಿಂದ ಇಂದಿನವರಿಗೆ ಕಾಲಾನುಕಾಲಕ್ಕೆ ಹೇಗೆ ಹೇಗೆ ಬದಲಾಗುತ್ತಾ ಬಂದಿದೆ ಎಂದು ಗುರುತಿಸುವುದು. ಉದಾಹರಣೆಗೆ, ಪಾಶ್ಚಿಮಾತ್ಯ ಭಾಷೆಗಳಲ್ಲಿ 'ಮಹಾ ಕಾವ್ಯ'ದ ಚಾರಿತ್ರಿಕ ಅಭ್ಯಾಸ ಹೋಮರ್‌ನ ಕೃತಿಗಳಿಂದ ಪ್ರಾರಂಭವಾಗಿ ವರ್ಜಿಲ್, ಡಾಂಟೆ, ಟಾಸೋ, ಎರಿಯೋಸ್ಟೊ, ಸ್ಪೆನ್ಸರ್, ಮತ್ತು ಮಿಲ್ಟನ್ ಇವರುಗಳು 'ಮಹಾ ಕಾವ್ಯ' ಪ್ರಭೇದವನ್ನು ಹೇಗೆ ಉಪಯೋಗಿಸಿಕೊಂಡಿದ್ದಾರೆ ಮತ್ತು ಆ ಪ್ರಭೇದದ 'ಸ್ವರೂಪ' ಮತ್ತು 'ವಿಷಯ' ಇವುಗಳಲ್ಲಿ ಯಾವ ಯಾವ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ ಎಂದು ಗುರುತಿಸುತ್ತದೆ. ಕಲ್ಲರ್‌ನ ಅಭಿಪ್ರಾಯದಲ್ಲಿ ಇಂತಹ ಅಭ್ಯಾಸ ಯಾಂತ್ರಿಕವಾದುದು.

ಚಾರಿತ್ರಿಕ ಅಭ್ಯಾಸಕ್ಕಿಂತ 'ಸದ್ಯ ಸ್ಥಿತಿ ಅಭ್ಯಾಸ' ಹೆಚ್ಚು ಕುತೂಹಲಕಾರಿ ಮತ್ತು ಉಪಯುಕ್ತವೆಂದು ಕಲ್ಲರ್ ಹೇಳುತ್ತಾನೆ. ಈ ಮಾರ್ಗದಲ್ಲಿ ಕಾಲ–ದೇಶ ಭಿನ್ನತೆಗಳನ್ನು ಬದಿಗಿರಿಸಿ ಒಂದು ಸಾಹಿತ್ಯ ಪ್ರಭೇದವೆಂದು ನಾವು ಗುರುತಿಸುವ ಎಲ್ಲಾ ಕೃತಿಗಳನ್ನೂ ಒಟ್ಟಿಗೆ ತಂದು ಅವುಗಳ ಸಮಾನ ಅಂಗಗಳ (constituents) ತುಲನಾತ್ಮಕ ಅಭ್ಯಾಸವನ್ನು ಮಾಡುತ್ತೇವೆ. ಉದಾಹರಣೆಗೆ ನಾವು 'ಕಲಾವಿದ ಕಾದಂಬರಿ' ಪ್ರಭೇದವನ್ನು ತೆಗೆದುಕೊಳ್ಳೋಣ. ಈ ಪ್ರಭೇದದಲ್ಲಿ ನಾವು ನಾಯಕನ ಪರಿಸರ, ತನ್ನಲ್ಲಿ ಕಲೆಯಿದೆಯೆಂಬ ಅರಿವು ನಾಯಕನಿಗೆ ಆಗುವಿಕೆ, ಕಲೆಯ ಸಾಧನೆ ಮತ್ತು ಆ ಸಾಧನೆಯ ಮಾರ್ಗದಲ್ಲಿ ಅವನಿಗೆ ಬರುವ ಎಡರು–

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೊಡರುಗಳು, ವೈಯಕ್ತಿಕ ಜೀವನ-ಕಲೆ ಇವುಗಳ ತಿಕ್ಕಾಟ, ನಾಯಕನ ಅಂತಿಮ ಆಯ್ಕೆ-ಹೀಗೆ ಅನೇಕ ಅಂಗಗಳನ್ನು ಮೊದಲು ಗುರುತಿಸುತ್ತೇವೆ. ಅನಂತರ ಯಾವುದಾದರೂ ಒಂದು ಅಂಗವನ್ನು ತೆಗೆದುಕೊಂಡು ಅದು ವಿವಿಧ ಕೃತಿಗಳಲ್ಲಿ ಹೇಗೆ ಮೂಡಿದೆ? ಆ ಭಿನ್ನತೆಗಳು ನಮಗೆ ಆ ಕೃತಿಯ ಬಗ್ಗೆ, ಲೇಖಕನ ಬಗ್ಗೆ ಮತ್ತು ಸಮಾಜದ ಬಗ್ಗೆ ಏನನ್ನು ಸೂಚಿಸುತ್ತವೆ ಎಂದು ವಿಚಾರ ಮಾಡಬಹುದು.

'ಕಲಾವಿದ ಕಾದಂಬರಿ'ಯ ಒಂದು ಅನಿವಾರ್ಯ ಅಂಗವೆಂದರೆ 'ಸಂಘರ್ಷ' ಮತ್ತು ಆ ಸಂಘರ್ಷದ ಪರಿಹಾರ. ಸೈದ್ಧಾಂತಿಕನಾಗಿ ಚಿಂತಿಸಿದರೆ ಈ ಅಂಗದ ಸಾಧ್ಯತೆಗಳು ಹೀಗೆ ಕಂಡು ಬರುತ್ತವೆ: (1) ಸಂಘರ್ಷದ ತೃಪ್ತಿಕರ ಪರಿಹಾರ, (2) ಪರಿಹಾರವಿಲ್ಲದ ಸಂಘರ್ಷ, (3) ಅನಿರೀಕ್ಷಿತ ಪರಿಹಾರ; ಈ ವಿಚಾರಗಳನ್ನು ಹೀಗೆ ಚಿತ್ರಗಳ ಮೂಲಕ ತೋರಿಸಬಹುದು:

(1) ತೃಪ್ತಿಕರ ಪರಿಹಾರ:



ಅಡ ಮತ್ತು ಅಕ ಸಂಘರ್ಷದ ಎರಡು ಬಾಹುಗಳು. ಅವು ಕೊನೆಗೆ ಬ ದಲ್ಲಿ ಒಂದಾಗಿ ಸಂಘರ್ಷ ಕೊನೆಗೊಳ್ಳುತ್ತದೆ.

(2) ಅಪರಿಹಾರ್ಯ ಸಂಘರ್ಷ:



ಇಲ್ಲಿ ಅಕ ಮತ್ತು ಅಡ ಗಳು ಯಾವತ್ತಿಗೂ ಪರಸ್ಪರ ವಿರೋಧವಾಗಿಯೇ ನಿಲ್ಲುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(3) ಅನಿರೀಕ್ಷಿತ ಪರಿಹಾರ:



ಇಲ್ಲಿ ಅಕ ಮತ್ತು ಅಡ ಗಳು ಒಂದು ಕಡೆ ಸೇರುತ್ತವೆ. ನಿಜ; ಆದರೆ ಅವುಗಳ ಗತಿ ಅನಂತರ ಪರಸ್ಪರ ಬದಲಾಗುತ್ತದೆ.

ಈಗ ಈ ಚೌಕಟ್ಟುಗಳನ್ನು ನಾವು ಕೆಲವು ಕಲಾವಿದ ಕಾದಂಬರಿಗಳಿಗೆ ಹೊಂದಿಸಿದರೆ, ಅ. ನ. ಕೃ. ಅವರ ಕೃತಿಗಳಲ್ಲಿ 'ತೃಪ್ತಿಕರ ಪರಿಹಾರ'ವನ್ನೂ ಜಾಯ್ಸ್‌ನ ಕೃತಿಯಲ್ಲಿ 'ಅನಿರೀಕ್ಷಿತ ಪರಿಹಾರ' ವನ್ನು (ಜಾಯ್ಸ್‌ನ ನಾಯಕ ಕೊನೆಯಲ್ಲಿ ತನ್ನ ಕಲೆಗಾಗಿ ತನ್ನ ಧರ್ಮ ಮತ್ತು ದೇಶಗಳನ್ನು ತ್ಯಾಗ ಮಾಡಿ, ಏಕಾಕಿಯಾಗಿರಲು ನಿಶ್ಚಯಿಸಿ ತನ್ನ ಸಂಘರ್ಷಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತಾನೆ); ಮತ್ತು ಕಾರಂತರ "ಮೊಗ ಪಡೆದ ಮನ"ದಲ್ಲಿ ನಾಯಕನ ಸಂಘರ್ಷ (ಕಲೆ ಮತ್ತು ವ್ಯಾಪಾರೀ ಮನೋಭಾವ, ಮೌಲಿಕ ಕಲೆ ಮತ್ತು ಪರಂಪರಾಗತ ಸಂಕುಚಿತ ದೃಷ್ಟಿಕೋನ) ಅಪರಿಹಾರ್ಯವಾಗಿಯೇ ಉಳಿಯುತ್ತದೆ.

ಒಟ್ಟಿನಲ್ಲಿ, ಸ್ವರೂಪ-ವಿಮರ್ಶೆಯ ಮಾರ್ಗ, ಗೊತ್ತು ಗುರಿಗಳು ಇಂದು ಸಂಪೂರ್ಣ ಬದಲಾಗಿವೆ. ಯಾಂತ್ರಿಕ ವರ್ಗೀಕರಣ ಮತ್ತು ಶಾಸನ-ಧೋರಣೆ ಇವುಗಳ ಬದಲು ನಾವು ಸೃಜನಾತ್ಮಕ ವರ್ಗೀಕರಣ ಮತ್ತು ಶೋಧಕ-ಧೋರಣೆಯನ್ನು ಕಾಣುತ್ತೇವೆ. ಇಷ್ಟಾಗಿಯೂ ಸ್ವರೂಪ ವಿಮರ್ಶೆ-ಇತರ ವಿಮರ್ಶಾ ಮಾರ್ಗಗಳಂತೆ-ಅಲ್ಲಲ್ಲಿ ಎಡವುವ ಸಂಭವವನ್ನು ನಿರಾಕರಿಸಲಾಗುವುದಿಲ್ಲ. ಏಕೆಂದರೆ, ಯಾವುದೇ ಮಾನದಂಡವನ್ನು ನಾವು ಉಪಯೋಗಿಸಿದರೂ ಸಾಹಿತ್ಯ ಕೃತಿಗಳನ್ನು ಅಂಗಡಿಯಲ್ಲಿ ಹೆಸರು ಹಚ್ಚಿ ಕ್ರಮವಾಗಿ ಜೋಡಿಸಲ್ಪಟ್ಟಿರುವ ರಟ್ಟಿನ ಪೆಟ್ಟಿಗೆಗಳಂತೆ ವರ್ಗೀಕರಿಸಿ ಜೋಡಿಸಲಾಗುವುದಿಲ್ಲ. ಆದರೆ ಜೋಡಣೆ ಕೊನೆಗೆ ಹೇಗಾದರೂ ಆಗಲಿ, ಜೋಡಣೆಯ ಮಾರ್ಗ ನಮಗೆ ಮುಖ್ಯವಾಗುತ್ತದೆ. ಅಲಾನ್ ರಾಡ್‌ವೇ ಹೇಳುವಂತೆ "ಈ ಘಟ್ಟದಲ್ಲಿ (ಈ ಕೃತಿಯನ್ನು ಹೇಗೆ ವರ್ಗೀಕರಿಸಬೇಕು? ಯಾವುದರ ಜೊತೆ ಜೋಡಿಸಬೇಕು? ಎಂಬ ಜಿಜ್ಞಾಸೆಯ ಕೊನೆಯಲ್ಲಿ) ನಮಗೆ ಒಂದು ಕವಿತೆಯನ್ನು ಯಾವ ವರ್ಗದಲ್ಲಿ ಜೋಡಿಸಿದೆವು ಎಂಬುದು ಗೌಣವಾಗುತ್ತದೆ. ವರ್ಗೀಕರಣದ ಪ್ರಯತ್ನ-ಅದೆಷ್ಟೇ ಒರಟಾಗಿರಲಿ-ನಮ್ಮನ್ನು ಕೃತಿಯ ಮೌಲಿಕ ಗುಣಗಳ ಹತ್ತಿರ, ಅದರ ವೈಶಿಷ್ಟ್ಯದ ಹತ್ತಿರ ತಂದಿರುತ್ತದೆ ಮತ್ತು ಅಲ್ಲಿಂದ ಮುಂದೆ ಹೆಚ್ಚಿನ ಅರ್ಥವತ್ತಾದ ವಿಶ್ಲೇಷಣೆಗೆ ದಾರಿಯಾಗಿರುತ್ತದೆ."[14]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಟಿಪ್ಪಣಿಗಳು

1. Northrop Frye, **Anatomy of criticism: Four Essays:** (Princeton: Princeton Univ. Press, 1957); P. 2; Zvetan Todorov, **The Fantastic,** tr. by Richard Howard (Cleve land: Case Western Reserve Press, 1973); Jonathan Culler, **Structuralist Poetics,** (Ithaca, N.Y: Cornell Univ. Press, 1975).

2. Alan Rodway, "Generic Criticism: The Approach through Type, Mode and Kind," in **Contemporary Criticism,** ed. Malcolm Bradbury and David Palmer (London: Edward Arnold; 1979, (reprint)] p. 94.

3. ಕಾಳಿದಾಸನ "ಮಾಲವಿಕಾಗ್ನಿಮಿತ್ರ" ಮತ್ತು ಭವಭೂತಿಯ "ಮಾಲತೀ ಮಾಧವ" ಇವುಗಳ ಪ್ರಸ್ತಾವನಾ ಭಾಗ.

4. Benedetto Croce, **Aesthetic,** tr. Douglas Ainslie (New York: Noonday, 1968); as quoted by Heather Dubrow in **Genre** (London and New York: Methuen, 1982), pp. 83–84.

5. E. D. Hirsch, **Validity in Interpretation** (New Haven: Yak Univ. Press, 1967).

6. Alan Rodway, P. 101
7. E. D. Hirsch, p. 8.
8. Wolfgang Iser, **The Act of Reading**.
9. Heather Dubrow, P 1
10. Northrop Frye, PP. 246–247
11. Northrop Frye, pp 33–34.

12. Ferdinand de Saussure ಆಧುನಿಕ ಭಾಷಾ ಶಾಸ್ತ್ರಜ್ಞ. ಅವನು ಭಾಷೆಯ ಎರಡು ನೆಲೆಗಳನ್ನು 'parole' ಮತ್ತು 'langue' ಎಂದು ಗುರುತಿಸುತ್ತಾನೆ. ಹಾಗೆಯೇ Chomsky 1957 ರಲ್ಲಿ ಪ್ರಕಟವಾದ ತನ್ನ Syntactic structures ನಲ್ಲಿ 'deep structure' ಮತ್ತು 'surface structure' ಎಂದು ವಿಶ್ಲೇಷಿಸುತ್ತಾನೆ. ನಾವು ವಾಸ್ತವವಾಗಿ ಉಪಯೋಗಿಸುವ ಶಬ್ದಗಳು ಮತ್ತು ವಾಕ್ಯಗಳು 'parole' ಆದರೆ, ಆ ಶಬ್ದಗಳ, ವಾಕ್ಯಗಳ ಹಿಂದಿರುವ abstract patterns ಗಳನ್ನು 'langue' ಎಂದು ಸೋಸ್ಯೂ ಕರೆಯುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೋಮ್‌ಸ್ಕಿಯ ('Competence' ಮತ್ತು 'ಪರ್‌ಫಾರ್‌ಮನ್ಸ್' ಪರಿಕಲ್ಪನೆಗಳಂತೆ). ಹಾಗೆಯೇ ಚೋಮ್‌ಸ್ಕಿ ವಾಕ್ಯಗಳ ಮೂಲಭೂತ ರೂಪಗಳನ್ನು 'deep structure' ಎಂದೂ ನಾವು ವಾಸ್ತವವಾಗಿ ಉಪಯೋಗಿಸುವ, 'deep structure' ನಿಂದ ಪರಿವರ್ತಿತವಾಗಿರುವ ವಾಕ್ಯಗಳನ್ನು 'surface structure' ಎಂದು ಕರೆಯುತ್ತಾನೆ.

13. ಭಾಷಾಶಾಸ್ತ್ರಜ್ಞ ಸೊಸ್ಯೂರನ ಪರಿಕಲ್ಪನೆಗಳು.
14. Alan Rodway, P. 91.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨. ರಾಜಕೀಯ ಕಾದಂಬರಿ

ಕೆಲವು ಕನ್ನಡ ಕಾದಂಬರಿಗಳ ತೌಲನಿಕ ಅಭ್ಯಾಸ

ಆಂಗ್ಲ ಸಾಹಿತ್ಯದಲ್ಲಿ ರಾಜಕೀಯ ಕಾದಂಬರಿಯ ಜನಕ ಬೆಂಜಮಿನ್ ಡಿಸ್ರೇಲಿ ಯೆಂದು ಸಾಮಾನ್ಯವಾಗಿ ಎಲ್ಲಾ ವಿಮರ್ಶಕರೂ ಒಪ್ಪುತ್ತಾರೆ. ಡಿಸ್ರೇಲಿಯ ಎರಡನೇ ಕಾದಂಬರಿ 'ಸಿಬಿಲ್'ಗೆ 1835ರಲ್ಲಿ ಮುನ್ನುಡಿ ಬರೆಯುತ್ತಾ ಟ್ರೆಲ್ ಎಂಬ ವಿಮರ್ಶಕ ಹೀಗೆ ಹೇಳುತ್ತಾನೆ; "ಡಿಸ್ರೇಲಿ ರಾಜಕೀಯ ಕಾದಂಬರಿಯ ಯಶಸ್ವಿ ಲೇಖಕನೇ ಅಲ್ಲದೆ ಆ ಸಾಹಿತ್ಯ ಪ್ರಕಾರದ ನಿರ್ಮಾತೃವೂ ಹೌದು."

ಮುಂದುವರಿದು ಪಾಶ್ಚಾತ್ಯ ಸಾಹಿತ್ಯದಲ್ಲಿ 'ರೊಮಾನ್ ಎಕ್ಲಫ್' (Roman eclef) ಎಂದು ಕರೆಯಲ್ಪಡುವ ಕಾದಂಬರಿ ಪ್ರಕಾರಕ್ಕೂ ಮತ್ತು ರಾಜಕೀಯ ಕಾದಂಬರಿಗೂ ಇರುವ ವ್ಯತ್ಯಾಸವನ್ನು ಚೆನ್ನಾಗಿ ಗುರುತಿಸುತ್ತಾನೆ. ಅವನ ದೃಷ್ಟಿ ಯಲ್ಲಿ 'ರೊಮಾನ್ ಎಕ್ಲಫ್' ಸಾರ್ವಜನಿಕ ಮುಖಂಡರನ್ನು ಅಷ್ಟೇನೂ ಗುರುತು ಹಚ್ಚಲು ಕಷ್ಟವಾಗದಂಥ ವೇಷದಲ್ಲಿ ಚಿತ್ರಿಸುವ ಕೃತಿಯಾದರೆ 'ರಾಜಕೀಯ ಕಾದಂಬರಿ' ಯಲ್ಲಾದರೋ ವೈಚಾರಿಕ ಪ್ರಣಾಲಿಗಳ, ವಿವಿಧ ವಿಚಾರಗಳ ಘರ್ಷ ಣೆಯ ಚಿತ್ರಣವಿರುತ್ತದೆ. ಡಿಸ್ರೇಲಿಯ ತಲೆಯಲ್ಲಿ ರಾಜಕೀಯ ವಿಚಾರಗಳು ತುಂಬಿ ದ್ದುದರಿಂದಲೇ ಅವನಿಗೆ 'ರೋಮಾನ್ ಎಕ್ಲಫ್' ಗಿಂತಲೂ ಮುಂದೆ ಹೋಗಿ ಮಹತ್ವದ ರಾಜಕೀಯ ಕಾದಂಬರಿಗಳನ್ನು ರಚಿಸಲು ಸಾಧ್ಯವಾಯಿತು. ಅಂದರೆ ರಾಜ ಕೀಯ ಕಾದಂಬರಿಯೆಂದು ಕರೆಯಲ್ಪಡುವ, ಕರೆಯಲು ಯೋಗ್ಯವಾದ ಕೃತಿಯಲ್ಲೇ ಕೇವಲ ರಾಜಕೀಯ ಪ್ರಮುಖರ ಪಾತ್ರಗಳಿದ್ದರೆ ಸಾಲದು. ಅಥವಾ ರಾಜಕೀಯ ದಲ್ಲಿ ತುಂಬಿರುವ ಅನೀತಿ, ಭ್ರಷ್ಟಾಚಾರ ಇವುಗಳ ಚಿತ್ರಣವಿದ್ದರೂ ಸಾಲದು; ಅಂತಹ ಕೃತಿಗಳಲ್ಲಿ ಪ್ರಮುಖವಾಗಿ ರಾಜಕೀಯ ವ್ಯವಸ್ಥೆಯನ್ನು ಕುರಿತಾದ ಗಂಭೀರ ಚಿಂತನೆಯು ಇರಬೇಕು. ಇತ್ತೀಚಿನ ವಿಮರ್ಶಕರು ತಮ್ಮ ರಾಜಕೀಯ ಕಾದಂಬಗಿ' ಯ ವಿಶ್ಲೇಷಣೆಯಲ್ಲಿ ಟ್ರೆಲ್‌ಗಿಂತ ಹೆಚ್ಚು ಮುಂದೇನೂ ಹೋಗಿಲ್ಲ. ಉದಾಹರಣೆಗೆ ತನ್ನ ಪೊಲಿಟಿಕಲ್ ನಾವೆಲ್ (1924) ವಿಮರ್ಶಾ ಗ್ರಂಥದಲ್ಲಿ ಮಾರಿಸ್ ಸ್ಪಿಯರ್ ಹೀಗೆ ಹೇಳುತ್ತಾನೆ:

'ರಾಜಕೀಯ ಕಾದಂಬರಿ ಎಂದರೇನು? ಅದು ಗದ್ಯದಲ್ಲಿ ಬರೆಯಲ್ಪಟ್ಟ ಕಾಲ್ಪ ನಿಕ ಕಥೆ. ಅದರಲ್ಲಿ 'ಭಾವನೆ'ಗಳಿಗಿಂತ ಹೆಚ್ಚಾಗಿ 'ವಿಚಾರ'ಗಳಿಗೆ ಪ್ರಾಧಾನ್ಯತೆ ಯಿದೆ. ಅದು ರಾಜಕೀಯ ಶಾಸನಗಳ ಯಂತ್ರ ಹೀಗೆ ಕೆಲಸಮಾಡುತ್ತದೆ ಎಂಬುದನ್ನು ಕುರಿತು ಅಥವಾ ಪ್ರಜೆಗಳ ನಡತೆಯನ್ನು ಕುರಿತು ಒಂದು ತಾತ್ವಿಕ ನೆಲೆಯಲ್ಲಿ ಚಿಂತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುತ್ತದೆಯೇ ಹೊರತು ಪ್ರತ್ಯೇಕ ಶಾಸನಗಳ ಒಳಿತು -ಕೆಡುಕಿನ ಬಗ್ಗೆ ಅಷ್ಟು ಒತ್ತು ಕೊಡುವುದಿಲ್ಲ.

ಮತ್ತೆ ಈ ಸಾಹಿತ್ಯ ಪ್ರಕಾರದ ಅಗ್ರಮಾನ್ಯ ಚಿಂತಕನೆಂದು ಅನೇಕರು ಮನ್ನಿಸುವ ಅರ್ವಿಂಗ ಹೋ ತನ್ನ 'ಪಾಲಿಟಿಕ್ಸ್ ಆಂಡ್ ದ ನಾವೆಲ್' (1957) ಗ್ರಂಥದಲ್ಲಿ ಈ ಪ್ರಭೇದವನ್ನು ಹೀಗೆ ಗುರುತಿಸುತ್ತಾನೆ:

"ನನ್ನ ದೃಷ್ಟಿಯಲ್ಲಿ ರಾಜಕೀಯ ಕಾದಂಬರಿಯೆಂದರೆ ರಾಜಕೀಯ ವಿಚಾರಗಳು ಪ್ರಧಾನವಾಗಿರುವ ಅಥವಾ ಒಂದು ರಾಜಕೀಯ ಘಟ್ಟವು(epoch) ಪ್ರಧಾನ ಪಾರ್ಶ್ವ ಭೂಮಿಯಾಗಿ ಬರುವ ಒಂದು ಕೃತಿ. ಅಥವಾ ಹೀಗೆ ಹೇಳಿದರ ಸರಿಯಾಗುತ್ತದೆಯೇನೋ....ನಾವು ಯಾವ ಕೃತಿಯಲ್ಲಿ ರಾಜಕೀಯ ವಿಚಾರಗಳನ್ನು ಅಥವಾ ರಾಜಕೀಯ ಘಟ್ಟವನ್ನು ಪ್ರಧಾನವಾಗಿ ಪರಿಗಣಿಸುತ್ತೇವೆಯೋ ಅದು ರಾಜಕೀಯ ಕಾದಂಬರಿ. ಈ ಪರಿಗಣನೆಯಿಂದ ಆ ಕೃತಿಗೆ ತುಂಬಾ ನಷ್ಟವಾಗದಂತಿರಬೇಕು. ಅಲ್ಲದೆ ಆ ಕೃತಿಯು ವಿಶ್ಲೇಷಣೆಗೆ ಯೋಗ್ಯವಾಗಿಯೂ ಇರಬೇಕು"

ತನ್ನ ವ್ಯಾಖ್ಯೆಯಲ್ಲಿ ಅರ್ವಿಂಗ್ ಹೋ 'ರಾಜಕೀಯ ಕಾದಂಬರಿ'ಗಳೆಲ್ಲ ರಾಜಕೀಯ ಪ್ರಣಾಲಿಗಳ ವ್ಯಾಖ್ಯೆಯ ಮಹತ್ವವನ್ನು ಗುರುತಿಸುವಂತೆಯೇ ಮತ್ತೂ ಒಂದು ಮುಖ್ಯ ವಿಚಾರವನ್ನು ನಮ್ಮ ಮುಂದಿಡುತ್ತಾನೆ. ಅದೆಂದರೆ ಅಂತಹ ಕೃತಿಗಳು ಸಾಹಿತ್ಯ ವಿಶ್ಲೇಷಣೆಗೆ ಯೋಗ್ಯವಾಗಿಯೂ ಇರಬೇಕು ಎಂದು.ಇದರರ್ಥ ಕೇವಲ ರಾಜಕೀಯ ವ್ಯವಸ್ಥೆಯ ಜಿಜ್ಞಾಸೆಯಿರುವುದರಿಂದ ಮಾತ್ರ ಒಂದು ಕೃತಿಯನ್ನು ನಾವು ಉತ್ತಮ ರಾಜಕೀಯ ಕಾದಂಬರಿಯೆಂದು ಕರೆಯಲಾಗುವುದಿಲ್ಲ. ಇತರ ಸಾಹಿತ್ಯ ಪ್ರಭೇದಗಳಿಗಿರುವಂತೆಯೇ ಈ ಪ್ರಭೇದಕ್ಕೂ ನಾವು ಉಪಯೋಗಿಸುವುದು ಸಾಹಿತ್ಯಿಕ ಮಾನದಂಡಗಳೇ. 'ರಾಜಕೀಯ ಕಾದಂಬರಿಯೂ ಪ್ರಥಮತ: ಕಾದಂಬರಿ. ಆದ್ದರಿಂದಲೇ ಈ ವಿಧದ ಕೃತಿಗಳ ಬಗ್ಗೆಯೂ ನಾವು ಕೇಳುವ ಮೂಲಭೂತ ಪ್ರಶ್ನೆ ಸಾಹಿತ್ಯಿಕವಾದದ್ದೇ -ಅರ್ವಿಂಗ್ ಹೋ ಹೇಳುವಂತೆ 'ನಮ್ಮ ಬದುಕನ್ನು ಈ ಕೃತಿ ಎಷ್ಟು ಬೆಳಗುತ್ತದೆ? ಇದು ಸೂಚಿಸುವ ನೈತಿಕ ದರ್ಶನ ಎಷ್ಟು ವಿಶಾಲವಾದುದು?' ಎಂದು.

ಆದರೆ ಅರ್ವಿಂಗ್ ಹೋನ ವ್ಯಾಖ್ಯೆಯಲ್ಲಿಯೂ ಒಂದು ಸಮಸ್ಯೆ ಇದೆ. ಅವನು ಹೇಳುವ "ಪೊಲಿಟಿಕಲ್ ಐಡಿಯಾಸ್"-"ರಾಜಕೀಯ ವಿಚಾರಗಳು"- ಎಂದರೇನು? ಯಾವುದು ರಾಜಕೀಯ ವಿಚಾರ? ಯಾವುದು ಅಲ್ಲ? ಹರೀಶ ತ್ರಿವೇದಿಯವರು ತಮ್ಮ 'ರಾಜಕೀಯ ಕಾದಂಬರಿಯ ವ್ಯಾಖ್ಯೆ' ಲೇಖನದಲ್ಲಿ ಈ ವಿಷಯವನ್ನು ಎತ್ತಿ ಕೇಟ್ ಮಿಲೆಟ್ ಬರೆದ 'ಡ ಸೆಕ್ಷುಯಲ್ ಪಾಲಿಟಿಕ್ಸ್'ಗ್ರಂಥದ ನಂತರ 'ರಾಜಕೀಯ' ಶಬ್ದದ ಅರ್ಥವೇ ಹೇಗೆ ಸಂಪೂರ್ಣ ಬದಲಾಗಿದೆಯೆಂದು ಚರ್ಚಿಸುತ್ತಾರೆ. ಸ್ತ್ರೀ ಚಳುವಳಿಯ ಪ್ರಖ್ಯಾತ ನಾಯಕಿಯಾಗಿದ್ದ ಆಕೆ ಹೇಳುವಂತೆ "ಅಧಿಕಾರವನ್ನವಲಂಬಿಸಿದ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮೂಹದ ಮತ್ತು ಈ ಸಮೂಹದ ಮೇಲೆ ಹತೋಟಿ ಹೊಂದಿರುವ ಇನ್ನೊಂದು ಸಮೂಹದ ಮಧ್ಯೆ ಇರುವ ಸಂಬಂಧವನ್ನು ನಾವು 'ರಾಜಕೀಯ' ವೆಂದು ಕರೆಯಬಹುದು" ಎಂದು ಒಪ್ಪಿಕೊಂಡರೆ, ಬಹುತೇಕ ಎಲ್ಲಾ ವಿಧದ ಮಾನವ ಸಂಬಂಧಗಳೂ ಮತ್ತು ಎಲ್ಲಾ ಸಾಹಿತ್ಯ ಪ್ರಕಾರಗಳ ವಸ್ತುವೂ ನೇರವಾಗಿ ರಾಜಕೀಯವೇ ಆಗುತ್ತವೆ. ಈ ವಿಶಾಲಾರ್ಥದಲ್ಲಿ ಇಂದು ನಾವು 'ಕೌಟುಂಬಿಕ ರಾಜಕೀಯ', 'ಅತ್ಯಾಚಾರದ ರಾಜಕೀಯ' 'ಶುದ್ಧ ವಾತಾವರಣದ ರಾಜಕೀಯ' 'ಓಲಂಪಿಕ್ ಕ್ರಿಡೆಗಳ ರಾಜಕೀಯ' ಎಂದೆಲ್ಲಾ ವಿಚಾರ ಮಾಡುತ್ತೇವೆ ಎಂಬ ಜಿಜ್ಞಾಸೆಯನ್ನು ತ್ರಿವೇದಿ ನಮ್ಮ ಮುಂದಿಡುತ್ತಾರೆ.

ಇಲ್ಲಿಯ ತನಕ ನಾವು ಚರ್ಚಿಸಿದ ವಿಷಯವನ್ನು ಹೀಗೆ ಸಂಗ್ರಹಿಸಬಹುದು: 'ರಾಜಕೀಯ ಕಾದಂಬರಿ' ಎಂಬ ಸಾಹಿತ್ಯ ಪ್ರಭೇದದ ಒಂದು ಕೊನೆ ಸಂಕುಚಿತಾರ್ಥದಲ್ಲಿ 'ಸುಲಭವಾಗಿ ಗುರುತಿಸಲು ಸಾಧ್ಯವಾಗುವ ರಾಜಕೀಯ ಪ್ರಮುಖರ ಚಿತ್ರಣ' –ಅಂದರೆ 'ರೋಮಾ ಎ ಕ್ಲೆಫ್. ಆದರೆ ವಿಶಾಲಾರ್ಥದಲ್ಲಿ 'ಅಧಿಕಾರವನ್ನಾಧಾರವಾಗುಳ್ಳ ಯಾವುದೇ ಮಾನವ ಸಂಬಂಧವನ್ನು ಚಿತ್ರಿಸುವ ಕೃತಿ' ರಾಜಕೀಯ ಕಾದಂಬರಿ ಎಂದಾಗುತ್ತದೆ. ಆದ್ದರಿಂದ ಕೃತಿ ವಿಮರ್ಶೆಗೆ ನೆರವಾಗಲು ಈ ಕೆಲವು ವಿಚಾರಗಳನ್ನು ನಾವು ಒಪ್ಪಿಕೊಂಡು ಮುಂದುವರಿಯಬಹುದು.

1. ಒಂದು ಉತ್ತಮ ರಾಜಕೀಯ ಕಾದಂಬರಿಯಲ್ಲಿ ನಾವು ಅಪೇಕ್ಷಿಸುವುದೇನೆಂದರೆ ಮೊತ್ತ ಮೊದಲಾಗಿ ರಾಜಕೀಯ ತತ್ವಗಳ ಗಂಭೀರ ಚಿಂತನೆ. ರಾಜಕೀಯ ತತ್ವಗಳ ಚಿಂತನೆ ಎಂದರೆ ಸತ್ತೆಯ ಆಧಾರದಲ್ಲಿ ನಿಂತಿರುವ ವೈಯಕ್ತಿಕ ಹಾಗೂ ಸಾಮೂಹಿಕ ಮಾನವ ಸಂಬಂಧಗಳನ್ನು ಕುರಿತಾದ ಚಿಂತನೆ.
2. ಅಂತಹ ಗಂಭೀರ ಚಿಂತನೆ ಕೇವಲ ಬೌದ್ಧಿಕ ನೆಲೆಯಲ್ಲಿಯೇ ಇರದೆ ಅದು ಕೃತಿಯಲ್ಲಿ ಸಾಹಿತ್ಯಿಕವಾಗಿ ರೂಪಿಸಲ್ಪಟ್ಟಿರಬೇಕು.
3. 'ರಾಜಕೀಯ ಕಾದಂಬರಿ'ಯೂ ಮೂಲತಃ ಒಂದು ಸಾಹಿತ್ಯಿಕ ಪ್ರಭೇದವಾದ್ದರಿಂದ ಇತರ ಕಾದಂಬರೀ ಪ್ರಕಾರಗಳಿಗೆ ಬಳಸಲ್ಪಡುವ ಸಾಹಿತ್ಯಿಕ ಮಾನದಂಡಗಳೇ ಈ ಪ್ರಕಾರಕ್ಕೂ ಬಳಸಲ್ಪಡುತ್ತವೆ.

ಈ ವೈಚಾರಿಕ ಹಿನ್ನೆಲೆಯನ್ನಿಟ್ಟುಕೊಂಡು ನಾವೀಗ ಕನ್ನಡದ ಕೆಲವು ಪ್ರಮುಖ ರಾಜಕೀಯ ಕಾದಂಬರಿಗಳ ಅಭ್ಯಾಸಕ್ಕೆ ತೊಡಗಬಹುದು.

ಒಂದು ದೃಷ್ಟಿಯಿಂದ ಎಲ್ಲಾ ಪ್ರಗತಿಶೀಲ, ಬಂಡಾಯ, ಹಾಗೂ ದಲಿತ ಸಾಹಿತ್ಯ ಕೃತಿಗಳು ನಮ್ಮ ಸಮಾಜದ ಆಂತರಿಕ ಸಂಘರ್ಷವನ್ನು ಚಿತ್ರಿಸುವ, ಸತ್ತೆಯನ್ನು ವಿರೋಧಿಸುವ 'ರಾಜಕೀಯ ಕೃತಿ'ಗಳಾದರೂ (ವಿಶಾಲಾರ್ಥದಲ್ಲಿ), ಕ್ಷೇತ್ರವನ್ನು ಮಿತಿಗೊಳಿಸುವುದಕ್ಕಾಗಿ ನಾನು ನನ್ನ ಚೌಕಟ್ಟನಲ್ಲಿ 'ರಾಜಕೀಯ ವ್ಯವಸ್ಥೆಯನ್ನು ಕುರಿತಾದ ಚಿಂತನೆ' ಎಂಬ ಅಂಶಕ್ಕೆ ಒತ್ತು ಕೊಟ್ಟಿದ್ದೇನೆ. ಈ ದೃಷ್ಟಿಕೋನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ ನನಗೆ ಅತ್ಯಂತ ಮುಖ್ಯರೆಂದು ಕಂಡು ಬರುವವರು ಶಿವರಾಮ ಕಾರಂತರು, ಅನಂತಮೂರ್ತಿಯವರು, ವ್ಯಾಸರಾಯ ಬಲ್ಲಾಳರು ಮತ್ತು ಪೂರ್ಣಚಂದ್ರತೇಜಸ್ವಿಯವರು.

6856 पुस्तकालय

ಸಾಮಾನ್ಯವಾಗಿ ಕಾರಂತರ ಪ್ರತಿಯೊಂದು ಕಾದಂಬರಿಯಲ್ಲಿಯೂ ಇಂದಿನ ವ್ಯವಸ್ಥೆಯನ್ನು ಕುರಿತಾದ ಪ್ರಖರ ಚಿಂತನೆ ಕಂಡು ಬರುತ್ತದೆಯಾದರೂ, ನೇರವಾಗಿ ಇಂದಿನ ರಾಜಕೀಯ ವ್ಯವಸ್ಥೆಯನ್ನು ವಸ್ತುವಾಗುಳ್ಳ ಕೃತಿಗಳು ಈ ಮೂರು 1955 ರಲ್ಲಿ ಪ್ರಕಟವಾದ 'ಗೊಂಡಾರಣ್ಯ' 1974 ರಲ್ಲಿ ಹೊರಬಂದ 'ಮೂಜನ್ಮ' ಮತ್ತು 1980 ರಲ್ಲಿ ಬಂದ 'ನಾವು ಕಟ್ಟಿದ ಸ್ವರ್ಗ'. ಕಾರಂತರೇ ಗುರುತಿಸಿರುವಂತೆ ಈ ಮೂರು ರಾಜಕೀಯ ಕಾದಂಬರಿಗಳು ಮತ್ತು ಮೂರರಲ್ಲಿಯೂ ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸ ಈ ಲೇಖಕರನ್ನು ಎಷ್ಟು ದುಃಖಕ್ಕೆ ಗುರಿ ಮಾಡಿದೆ, ಎಂಥ ನಿರಾಶೆಯಿಂದ ತುಂಬಿಸಿದೆ ಎಂಬುದರ ಚಿತ್ರ ನಮಗೆ ಕಾಣಬರುತ್ತದೆ.

ಈ ಕಾದಂಬರಿಗಳಲ್ಲಿ ಇಂದಿನ ರಾಜಕೀಯ ವ್ಯವಸ್ಥೆಯನ್ನು ಕುರಿತಾದ ಸಾಮಾನ್ಯ ಚಿಂತನೆಯನ್ನು ನಾವು ಹೀಗೆ ಗ್ರಹಿಸಬಹುದು:

1. ಇಂದಿನ ಪರಿಸ್ಥಿತಿಯಲ್ಲಿ ತತ್ವನಿಷ್ಠ ಹಾಗೂ ನೀತಿವಂತರಿಗೆ ಅಧಿಕಾದಲ್ಲಿರಲು ಅಸಾಧ್ಯ: ಅಕಸ್ಮಾತ್ ಅಧಿಕಾರಕ್ಕೆ ಬಂದರೂ ಭ್ರಷ್ಟ ಹಾಗೂ ಸ್ವಾರ್ಥ ಸಾಧಕರ ಬೇಟೆಯಾಗಬೇಕಾಗುತ್ತದೆ. "ಗೊಂಡಾರಣ್ಯ"ದಲ್ಲಿ ಗಾಂಧಿವಾದಿ ಹಾಗೂ ಪ್ರಾಮಾಣಿಕವ್ಯಕ್ತಿಯಾದ ಅರುಣಾಚಲಯ್ಯನವರ ಕೊಲೆಯಾದರೆ"ಮೂಜನ್ಮ" ದಲ್ಲಿ ಚಂದ್ರಕಾಂತ ಗುಪ್ತರ ಕೊಲೆಯಾಗುತ್ತದೆ."ನಾವುಗಾಂಧಿಜಯಂತಿಯಂದು ಕಟ್ಟಿದ ಸ್ವರ್ಗ"ದಲ್ಲಿ ಹಿರಿಯಸ್ವಾತಂತ್ರ್ಯ ಹೋರಾಟಗಾರ ದೇವೇಂದ್ರಪ್ಪ"ನಾವು ತಂದುದುಹರಾಮು ರಾಜ್ಯ ರಾಮರಾಜ್ಯವಲ್ಲ" ಎಂದು ಕೊನೆಯಲ್ಲಿ ಹತಾಶರಾಗಿ ಸೋಲೊಪ್ಪಿಕೊಳ್ಳುತ್ತಾರೆ.
2. ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಗಳಿಗೆ ಅರ್ಥವಿಲ್ಲ. ಏಕೆಂದರೆ ಚುನಾವಣೆಯ ಜವಾಬ್ದಾರಿ ಹೊತ್ತಿರುವ ಬಹುಮಂದಿ "ನಿರಕ್ಷರ ಕುಕ್ಷಿಗಳು" ಹಾಗೂ ಚುನಾಯಿಸಲ್ಪಡುವ ಪುಢಾರಿಗಳು ನೀತಿಭ್ರಷ್ಟ ಸ್ವಾರ್ಥಿಗಳು. ಇನ್ನೂ ಹೇಳಬೇಕೆಂದರೆ ಸ್ವಾತಂತ್ರ್ಯ ನಮಗೆ ದುಡಿದು ಬಂದದ್ದಲ್ಲ. "ನಮಗೆ ಬಂದ ಸ್ವಾತಂತ್ರ್ಯ ಹಕ್ಕಿನಿಂದ ಬಂದದ್ದು" ಎಂದು "ಮೂಜನ್ಮ"ದಲ್ಲಿ ಒಂದು ಪಾತ್ರ ಹೇಳುತ್ತದೆ.
3. ಮುಖ್ಯವಾಗಿ ರಾಷ್ಟ್ರವನ್ನು ಶ್ರೀಮಂತಗೊಳಿಸುವುದೆಂದರೆ ಶ್ರೀಮಂತರಿಂದ ಕದ್ದು ಬಡವರಿಗೆ ಹಂಚುವುದಲ್ಲ. "ಮೂಜನ್ಮ"ದಲ್ಲಿ ಚಂದ್ರಾದೇವಿ ಹೇಳುತ್ತಾಳೆ:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಹತ್ತು ಜನರ ಉದ್ಧಾರಕ್ಕೆ ಒಬ್ಬಿಬ್ಬರನ್ನು ಉರುಳಿಸಿದರೆ ಬಾಧಕವಿಲ್ಲ- ಎಂಬುದು ಇಂದಿನ ರೀತಿ...ಒಬ್ಬರನ್ನು ಸುಲಿದು ಇನ್ನೊಬ್ಬರಿಗೆ ಮಾಡುವ ದಾನ ಪರೋಪ ಕಾರವಲ್ಲ. ನ್ಯಾಯ ಸಮ್ಮತವಲ್ಲ." ಆದರಿಂದಲೇ ಈ ಮೂರು ಕೃತಿಗಳಲ್ಲಿಯೂ ಜಮೀನು ಮಿತಿ ಶಾಸನದ ಮತ್ತು 'ರಿಸರ್ವೇಶನ್' ಪಾಲಿಸಿಯ ಟೀಕೆ ಕಂಡು ಬರು ತ್ತದೆ. "ನಾವು ಕಟ್ಟಿದ ಸ್ವರ್ಗ"ದ ಮುನ್ನುಡಿಯಲ್ಲಿ ಕಾರಂತರು ಹೀಗೆ ಹೇಳುತ್ತಾರೆ: "ನಮ್ಮ ಸಂಸತ್ತು ಸಂಬಳದ ರೂಪದಲ್ಲಿರಲಿ, ಬ್ಯಾಂಕ್ ಠೇವಣಿಯ ರೂಪದಲ್ಲಿರಲಿ, ಜಮೀನಿನ ರೂಪದಲ್ಲಿರಲಿ-ಅದರ ಮೌಲ್ಯ ಒಂದೇ. ಕೇವಲ ಭೂಮಿ ಒಡೆಯರನ್ನು ಬಿಟ್ಟು ಮಾಡಿ ತೋರಿಸಿ, ಅವರ ಸಂಪತ್ತನ್ನು ಇತರರಿಗೆ ಹಂಚಬೇಕಾದರೆ ಆ ಸೊತ್ತಿನ ಮೌಲ್ಯವನ್ನು ಯಾವತ್ತು ಸಮಾಜ ಸಲ್ಲಿಸಬೇಕು.... ದರೋಡೆ ಸಮಾಜವಾದವಲ್ಲ".

ಒಟ್ಟಿನಲ್ಲಿ ಹೇಳಬೇಕಾದರೆ ಕಾರಂತರ ರಾಜಕೀಯ ಚಿಂತನೆಯನ್ನು ನಾವು ಗಾಂಧಿವಾದ ಮತ್ತು ಪಶ್ಚಿಮದ ಬೆಂಥಮ್—ಮಿಲ್ ಇವರುಗಳಿಂದ ಬೆಳೆಸಲ್ಪಟ್ಟ 'ಲಿಬರಲ್'-ವಾದ ಇವುಗಳ ಮಿಶ್ರ ರೂಪವೆಂದು ಹೇಳಬಹುದು. 'ಲಿಬರಲ್' ಧೋರ ಣೆಯ ವ್ಯಕ್ತಿನಿಷ್ಠ ನೈತಿಕತೆ ಮತ್ತು ತನ್ನ ತನವನ್ನು ಕಳೆದುಕೊಳ್ಳುವ ಭೀತಿ ಮುಕ್ತ ಆರ್ಥಿಕ ಧೋರಣೆ (Laissez faire Policy) ಮತ್ತು ಸತಾರ್ಕಿಕ ಧಾರ್ಮಿಕ ನೀತಿ (Scientific religion)— ಈ ಎಲ್ಲಾ ತತ್ವಗಳನ್ನು ನಾವು ಕಾರಂತರ ಕಾದಂಬರಿಗಳಲ್ಲಿ ಕಾಣಬಹುದು. ಲಿಬರಲ್ ವೈಚಾರಿಕತೆಯ ಆಧಾರದ ಮೇಲೆಯೇ ಮೂರು ಕಾದಂಬರಿಗಳಲ್ಲಿಯೂ ಖಳನಾಯಕರಾಗಿ— ಅಂದರೆ ನೈತಿಕತೆಯ ನೆಲೆಗಟ್ಟಿ ಲ್ಲದ, ಸ್ವಹಿತವನ್ನೇ ಯಾವಾಗಲೂ ಅರಸುವವರಾಗಿ ಹಾಗೂ ಸದಾ ಹಿಂಸೆಯನ್ನು ಪ್ರಚೋದಿಸುವವರಾಗಿ- ಮಾರ್ಕ್ಸಿಸ್ಟ್ ಪಾತ್ರಗಳು ಬರುತ್ತವೆ ("ಮೂಜನ್ಮ"ದಲ್ಲಿ ಯಾದವರಾವ, "ಗೊಂಡಾರಣ್ಯ"ದಲ್ಲಿ ವಾಮನರಾಯ ಮತ್ತು "ನಾವು ಕಟ್ಟಿದ ಸ್ವರ್ಗ" ದಲ್ಲಿ ಕಾಳಪ್ಪ). ಅಲ್ಲದೆ ಪ್ರತಿ ಕಾದಂಬರಿಯಲ್ಲೂ ಕಾರ್ಮಿಕ ನಾಯಕರು, ಅವರ ಸಂಪು-ಚಳುವಳಿಗಳು ಮತ್ತು ಅವರ ವೈಯಕ್ತಿಕ ಜೀವನ ಲೇಖಕರ ಕುಚೋದ್ಯಕ್ಕೆ ಗುರಿಯಾಗುತ್ತವೆ.

ಆದರೆ ಪಶ್ಚಿಮದ 'ಲಿಬರಲ್' ವ್ಯವಸ್ಥೆಯಲ್ಲಿಯೇ ಇರುವ ಆಂತರಿಕ ದ್ವಂದ್ವ, ಮತ್ತು ಅನಕ್ಷರಸ್ಥರೇ ಹಾಗೂ ಬಡವರೇ ತುಂಬಿರುವ ಭಾರತೀಯ ಸಮಾಜದಲ್ಲಿ ಲಿಬರಲ್ ಚಿಂತನೆಯನ್ನು ಹೇರುವಾಗಿನ ಆಭಾಸ ಇವುಗಳನ್ನು ಕಾರಂತರು ಎಲ್ಲೂ ಆಳವಾಗಿ ಗುರುತಿಸುವ ಪ್ರಯತ್ನ ಮಾಡುವುದಿಲ್ಲ. ಆ ಕಾರಣದಿಂದಲೇ ಅವರ ಈ ಮೂರು ಕೃತಿಗಳು ಸಾಹಿತ್ಯಿಕವಾಗಿ ಸೋಲುತ್ತವೆ. "ಗೊಂಡಾರಣ್ಯ"ವಂತೂ ಅತ್ಯಂತ ಸಿನಿಮೀಯವಾಗಿ, ಕಾಂಚನಮಾಲೆಯೊಬ್ಬಳೇ ಸಮಾಜ ದ್ರೋಹಿಗಳನ್ನೆಲ್ಲಾ ಸಿಡಿ ಮದ್ದಿನಿಂದ ನಾಶ ಮಾಡುವುದರೊಂದಿಗೆ ಮುಗಿಯುತ್ತದೆ. 'ಲಿಬರಲ್' ಧೋರಣೆ ಯಲ್ಲಿಯೇ ಅನಿವಾರ್ಯವಾಗಿರುವ ವೈಯಕ್ತಿಕ ಮತ್ತು ಸಾಮಾಜಿಕ ನೈತಿಕತೆಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಸ್ಪರ ದ್ವಂದ್ವವನ್ನುConflict between ptivate and Public morality "ಮೂಜನ್ಮ" ಮಾತ್ರ ಶೋಧಿಸಲು ಪ್ರಯತ್ನಿಸುತ್ತದೆ. ಅದರಲ್ಲಿನ ನಾಯಕ, ಚಂದ್ರ ಕಾಂತ ಗುಪ್ತ ಯಾನೆ ರಮಾಕಾಂತ ಬಾಪಟ ವೈಯಕ್ತಿಕವಾಗಿ ಅನೀತಿವಂತನಾ ಗಿದ್ದರೂ ತನ್ನ ಅಧಿಕಾರ ಬಲದಿಂದ ಸಾರ್ವಜನಿಕ ಹಿತವನ್ನು ಒಂದು ಮಿತಿಯಲ್ಲಿ ಸಾಧಿಸುತ್ತಾನೆ.

ಒಂದು ಬೃಹತ್ ರಾಜಕೀಯ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ವ್ಯಕ್ತಿನಿಷ್ಠ ನೈತಿಕತೆಯ ಮಾನದಂಡದಿಂದ ಅಳೆಯುವುದು ಎಷ್ಟು ಸರಿ? ವ್ಯಕ್ತಿಯ ನ್ಯಾಯ-ಹಕ್ಕುಗಳಂತೆಯೇ ಸಾಮಾಜಿಕ ನ್ಯಾಯ-ಹಕ್ಕುಗಳೂ ಇರುವುದಿಲ್ಲವೆ? ಇದ್ದರೆ ಒಂದು ವ್ಯವಸ್ಥೆಯ ನಾಯಕನಿಗೆ ಯಾವ ನ್ಯಾಯ ಮುಖ್ಯವಾಗುತ್ತದೆ? ಹಿಂಸೆ (Violence)ಯ ಕಾರಣ ಯಾವಾಗಲೂ ಕ್ಷುದ್ರ ಸ್ವಾರ್ಥವೇ ಅಲ್ಲದೆ ವ್ಯವಸ್ಥೆಯನ್ನು ಕುರಿತಾದ ಹೆಪ್ಪುಗಟ್ಟಿದ ನಿರಾಶೆಯೂ (Despair) ಆಗುವು ದಿಲ್ಲವೆ? ಈ ಪ್ರಶ್ನೆಗಳನ್ನು ಕಾರಂತರ ಕೃತಿಗಳು ಎತ್ತುವುದೇ ಇಲ್ಲ.

ಯಾವುದೇ ಒಂದು ಪೂರ್ವ ನಿಶ್ಚಿತಧೋರಣೆಯಿಲ್ಲದೆ ಇಂದಿನ ರಾಜಕೀಯ ವ್ಯವಸ್ಥೆಯನ್ನು ಮತ್ತು ವ್ಯವಸ್ಥೆಯೊಳಗಿನ ಆಂತರಿಕ ಸಂಘರ್ಷವನ್ನು ಅನಂತ ಮೂರ್ತಿಯವರು ತಮ್ಮ 'ಭಾರತೀಪುರ' ಹಾಗೂ 'ಅವಸ್ಥೆ' ಕಾದಂಬರಿಗಳಲ್ಲಿ ಮತ್ತು 'ಬರ' ಮುಂತಾದ ಕಥೆಗಳಲ್ಲಿ ಅತ್ಯಂತ ಯಶಸ್ವಿಯಾಗಿ ಶೋಧಿಸುತ್ತಾರೆ. ಸ್ಥೂಲವಾಗಿ ಇವೆಲ್ಲವುಗಳಲ್ಲಿ ವೈಯಕ್ತಿಕ ನೈತಿಕತೆಯನ್ನು ಮೀರಿದ, ವ್ಯಕ್ತಿಯನ್ನು ನಿಷ್ಕ್ರಿಯನನ್ನಾಗಿಸುವ ಜಟಿಲ ವ್ಯವಸ್ಥೆಯ ಚಿತ್ರಣವಿದೆ. ಈ ದೃಷ್ಟಿಯಲ್ಲಿ "ಅವಸ್ಥೆ" ನನಗೆ ಅತ್ಯಂತ ಮುಖ್ಯ ಕೃತಿ ಎಂದು ತೋರುವುದರಿಂದ ಕೇವಲ ಅದೊಂದನ್ನೇ ವಿವೇಚನೆಗಾಗಿ ತೆಗೆದುಕೊಂಡಿದ್ದೇನೆ. ಹೇಗೆ ಈ ಜಗತ್ತಿನ ಸ್ಥಿತಿಯಲ್ಲಿಯೇ ಅಸ್ಥಿತಿ ಇದೆ. ವ್ಯವಸ್ಥೆಯಲ್ಲಿಯೇ ಅವ್ಯವಸ್ಥೆ ಇದೆ; ಮತ್ತು ಆ ಕಾರಣದಿಂದ ಒಂದು ಇನ್ನೊಂದರ ಬೀಜವಾಗಿ ಒಳಿತು-ಕೆಡಕು, ವ್ಯವಸ್ಥೆ-ಅವ್ಯವಸ್ಥೆ-ಸ್ಥಿತಿ-ಅಸ್ಥಿತಿ-ಇವು ಗಳು ಒಂದು ಮತ್ತೊಂದನ್ನು ಬೆಳೆಸುತ್ತಾ ವಿರೋಧಿಸುತ್ತಾ ಪೋಷಿಸುತ್ತಾ ಈ ದ್ವಂದ್ವ ಜಗತ್ತಿನಲ್ಲಿ ದ್ವಂದ್ವಾತ್ಮಕವಾಗಿಯೇ ಸದಾ ಇರುತ್ತವೆ ಎಂಬುದನ್ನು "ಅವಸ್ಥೆ" ಕಾದಂಬರಿ ಗುರುತಿಸುತ್ತದೆ.

"ಅವಸ್ಥೆ" ವ್ಯವಸ್ಥೆಯ ಬಗ್ಗೆ ಇವರು ಅನೇಕ ಸಮೀಕರಣಗಳನ್ನು ತೀಕ್ಷ್ಣ ವಾಗಿ ಪರೀಕ್ಷಿಸುತ್ತದೆ. ಒಂದು, ಇರುವ ವ್ಯವಸ್ಥೆಯನ್ನು ಒಪ್ಪಿಕೊಂಡು, ಅದನ್ನು ಬಲಪಡಿಸಿ, ಅದರಿಂದ ವೈಯಕ್ತಿಕ ಲಾಭ ಪಡೆಯುವುದು (ಮುಖ್ಯ ಮಂತ್ರಿ, ವೀರಪ್ಪ ಚೆನ್ನವೀರಯ್ಯ, ಮುಂತಾದವರು ಈ ಸಮೀಕರಣಕ್ಕೆ ಸೇರಿದವರು), ಎರಡು, ವ್ಯವಸ್ಥೆ ಯನ್ನು ಉದ್ದೇಶಪೂರ್ವಕ ತ್ಯಜಿಸಿ ಹೊರಗಿನಿಂದ ಅದನ್ನು ಬದಲಾಯಿಸಲು ಯತ್ನಿಸುವುದು (ಮಾರ್ಕ್ಸವಾದಿ ಅಣ್ಣಾಜಿ, ನಾಗರಾಜ, ಇತ್ಯಾದಿ); ಮೂರು, ವ್ಯವಸ್ಥೆ ಯೊಂದಿಗೆ ಒಂದು ಸಾಂದರ್ಭಿಕ ಒಪ್ಪಂದವನ್ನು ಮಾಡಿಕೊಂಡು, ಅದರೊಳಗಿನಿಂದಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದನ್ನು ಉತ್ತಮಗೊಳಿಸಲೆತ್ನಿಸುವುದು (ಕೃಷ್ಣಪ್ಪನ ಧೋರಣೆ); ಕೊನೆಯದಾಗಿ, ವ್ಯವಸ್ಥೆಗೂ ತಮಗೂ ಸಂಬಂಧವೇ ಇಲ್ಲದಂತೆ ಅದರಂಚಿನಲ್ಲಿರುವುದು (ಬೈರಾಗಿ, ಮಹೇಶ್ವರಯ್ಯ, ಹನುಮನಾಯಕ ಇವರುಗಳರೀತಿ).

ಇರುವ ವ್ಯವಸ್ಥೆಯನ್ನು ಇರುವಂತೆಯೇ ಖುಷಿಯಿಂದ ಒಪ್ಪಿಕೊಳ್ಳುವ ಮತ್ತು ವ್ಯವಸ್ಥೆಯ ಹೊರಗಿದ್ದು ಅದನ್ನು ಬುಡಮೇಲು ಮಾಡುವ ಎರಡೂ ಸಮೀಕರಣ ಗಳನ್ನೂ ಕೃತಿ ಸಂಪೂರ್ಣ ನಿರಾಕರಿಸುತ್ತದೆ. 'ಕ್ಯಾಪಿಟಲಿಸ್ಟ್' ಎಂದು ಕರೆಯ ಬಹುದಾದ ಮೊದಲನೆಯ ಸಮೀಕರಣವನ್ನು ಸಂಪೂರ್ಣ ನಿರಾಕರಿಸುವುದರ ಕಾರಣ, ಅದು ಹಿಂಸೆ ಮತ್ತು ಶೋಷಣೆಗಳ ಆಧಾರದ ಮೇಲೆ ನಿಂತಿರುವುದರಿಂದ. ಶ್ರೀಮಂತರ ಹಾಗೂ ಸತ್ತಾರೂಢರ–ಅವರು ಗೋಪಾಲ ಶೆಟ್ಟಿಯಂತೆ ರಸಿಕರಾಗಿರಬಹುದು ಅಥವಾ ಆಂಧ್ರದ ಗೃಹ ಮಂತ್ರಿಯಂತೆ ಕಾವ್ಯಾಸಕ್ತರಾಗಿರಬಹುದು–ಅವರ ಅಸ್ತಿತ್ವ ಇರು ವುದೇ ಸಂಘಟಿತ ಹಿಂಸೆಯಲ್ಲಿ ಮತ್ತು ಶೋಷಣೆಯಲ್ಲೆಂದು ಕೃಷ್ಣಪ್ಪನಿಗೆ ವಾರಂಗಲ್ ಜೈಲಿನಲ್ಲಿ ಅರಿವಾಗುತ್ತದೆ. ವಾರಂಗಲ್ಲಿನ ಜೈಲಿನಲ್ಲಿ ತನ್ನ ಮೇಲಾದ ಮತ್ತು ಒಬ್ಬಳು ಅಸಹಾಯಕ ಹೆಣ್ಣಿನ ಮೇಲಾದ ಅತ್ಯಾಚಾರದಲ್ಲಿ ಕೃಷ್ಣಪ್ಪನಿಗೆ ಕಾಣುವುದು ವ್ಯವಸ್ಥೆಯ ಭಯಂಕರ ಬೆತ್ತಲೆ ರೂಪ. ಹಾಗೆಯೇ ಕೇವಲ ಆರ್ಥಿಕ ಸಮಸ್ಯೆಗಳ ಪರಿಹಾರದಿಂದ ಮಾನವ ಜೀವನ ಹೆಚ್ಚು ಅರ್ಥಪೂರ್ಣವಾಗುವುದಿಲ್ಲವೆಂಬ ಕಾರಣ ದಿಂದ ಕೃತಿ ಅಣ್ಣಾಜಿ ಪ್ರತಿನಿಧಿಸುವ ಮಾರ್ಕ್ಸಿಸ್ಟ್ ಸ್ವರೂಪದ ಸಂಪೂರ್ಣ ಕ್ರಾಂತಿ ಯನ್ನೂ ತಿರಸ್ಕರಿಸುತ್ತದೆ. ಅಲ್ಲದೆ, ಅತಿ ಮುಖ್ಯವಾಗಿ ಮಾರ್ಕ್ಸಿಸ್ಟ್ ವ್ಯವಸ್ಥೆಯನ್ನು ಕೃತಿ ನಿರಾಕರಿಸುತ್ತದೆ ಏಕೆಂದರೆ ಅಂತಹ ವ್ಯವಸ್ಥೆ ತತ್ವದ ಬೆನ್ನುಹತ್ತಿ ವ್ಯಕ್ತಿಯ ಸುಖ ದುಃಖಗಳಿಗೆ ಕುರುಡಾಗುತ್ತದೆಂಬ ಕಾರಣದಿಂದ. ನಿಷ್ಪಾಪದ ಹುಡುಗಿಯೊಬ್ಬಳ ಮೇಲೆ ಅತ್ಯಾಚಾರವಾಗಿ ಅವಳು ಆತ್ಮಹತ್ಯೆ ಮಾಡಿಕೊಂಡಾಗ ನಾಗರಾಜ "ಅದು ಇರ್ರಿಲವೆಂಟ್ ಗೌಡರೆ" ಅನ್ನುತ್ತಾನೆ. ಕೃಷ್ಣಪ್ಪ ಉದ್ವೇಗದಿಂದ "ನನಗೆ ಪ್ರೇಮ ಮುಖ್ಯ, ಅದನ್ನು ಕಳಕೊಂಡು ಎಂಥಾ ಕ್ರಾಂತಿ ಮಾಡೋಕೆ ಸಾಧ್ಯ? ಮಾಡಿ ಯೇನು ಪ್ರಯೋಜನ?" ಎಂದು ತಳಮಳಿಸುತ್ತಾನೆ.

ವ್ಯವಸ್ಥೆಯ ಅಂಚಿನಲ್ಲಿ ಸುಳಿದಾಡುವ ಬೈರಾಗಿ, ಹನುಮನಾಯ್ಕ–ಪರಮೇಶ್ವ ರಯ್ಯ ಇವರುಗಳ ಅನಾಸಕ್ತಿಯ ಬಗ್ಗೆ ಲೇಖಕರಿಗೆ ದ್ವಂದ್ವ ಭಾವನೆಯಿದೆ. "ಅವಸ್ಥೆ"ಯಲ್ಲಿ ಅವರ ಅನಾಸಕ್ತಿಯಿಂದ ಸಾಮೂಹಿಕ ಹಿತವೇನೂ ಸಾಧಿಸುವುದಿಲ್ಲ ವೆಂದು ಸ್ಥಿರಪಡಿಸಲ್ಪಟ್ಟರೂ ಅನಂತ ಮೂರ್ತಿಯವರ ಇತರ ಕಥೆಗಳಲ್ಲಿ ಮುಖ್ಯವಾಗಿ "ಸೂರ್ಯನ ಕುದುರೆ" ಮತ್ತು "ಮೂಲ" ಈ ಕಥೆಗಳಲ್ಲಿ ಬುದ್ಧಿಗೆ—ವೈಚಾರಿಕತೆಗೆ ನಿಲುಕದ ಯಾವುದೋ ಒಂದು ಅನುಭವ ಅನುಭಾವಿಗಳಿಗೆ ಸಾಧ್ಯವಿರಬಹುದೆಂದು ಅವರ ಬಗ್ಗೆ ಗೌರವವಿದೆ. ಅಂತಹ ಅನುಭಾವಿಗಳು ಸಮಾಜದ ಹೊರಗಿರುತ್ತಾರೆಂದು ಅವರ ಬಗ್ಗೆ ಅಸಹನೆಯಿದೆ. ಆದರೆ ಅಂತಹವರೇ— ಶ್ರೀ ರಾಮಕೃಷ್ಣರಂತೆ– ಭಾರತೀಯ ಸಂಸ್ಕೃತಿಯ ಕೇಂದ್ರವಿದ್ದರೂ ಇರಬಹುದೆಂಬ ತೀವ್ರ ಗುಮಾನಿಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಂತಮೂರ್ತಿಯವರಿಗಿದೆ.

ಅಂದರೆ ಉಳಿದ ಸಮೀಕರಣ, ಕೃಷ್ಣಪ್ಪ ಪ್ರತಿನಿಧಿಸುವ ವ್ಯವಸ್ಥೆಯೊಳಗಿದ್ದೇ ಅದನ್ನು ಬದಲಿಸಲು ಪ್ರಯತ್ನಿಸುವುದೊಂದೇ. ಆದರೆ ಈ ಮಾರ್ಗವೂ ಹೇಗೆ "ತೇಪೆ ಹಚ್ಚುವ" ಕೆಲಸವೇ ಆಗುತ್ತದೆಂಬುದನ್ನೂ ಅದಕ್ಕಿಂತ ಮುಖ್ಯವಾಗಿ ವ್ಯವಸ್ಥೆಯನ್ನೇ ಪರ್ಯಾಯವಾಗಿ ಬಲಪಡಿಸುತ್ತದೆಂಬುದನ್ನೂ ಕೃಷ್ಣಪ್ಪನ ಅಧಃಪತನ ಎತ್ತಿ ತೋರಿಸುತ್ತದೆ. ಅವನ ಭೂಸುಧಾರಣೆಗಳಿಂದ ಮೊದಲು ಪ್ರಯೋಜನ ಪಡೆಯುವವನು ಶೋಷಣೆಯ ಏಜಂಟ್ ನರಸಿಂಹಭಟ್ಟ. ತಾನು ಮುಖ್ಯಮಂತ್ರಿಯಾಗಿ ಶೋಷಿತರಿಗೆ ಏನಾದರೂ ದಾರಿತೋರಬಹುದೆಂದು ಯೋಚಿಸಿದರೆ, ಅದಕ್ಕಾಗಿ ವೀರಣ್ಣನು ಲಕ್ಷಾಂತರ ಖರ್ಚು ಮಾಡುವುದನ್ನೂ ಪಕ್ಷಾಂತರವನ್ನೂ ಒಪ್ಪಿಕೊಳ್ಳಬೇಕು. ತನಗಲ್ಲವಾದರೂ ತನ್ನ ಹೆಂಡತಿಗಾಗಿ ಅವನು ಕೊಡಿಸುವ ಸೈಟ್ ಒಪ್ಪಿಕೊಳ್ಳಬೇಕು. ಹೀಗೆ ಒಂದೊಂದಾಗಿ ವ್ಯವಸ್ಥೆಯೊಡನೆ ಒಪ್ಪಂದ ಮಾಡಿಕೊಳ್ಳುತ್ತಾ ಹೋದರೆ ವ್ಯವಸ್ಥೆಯನ್ನು ಸುಧಾರಿಸುವುದು, ಬದಲಾಯಿಸುವುದು ಹೇಗೆ? ಈ ಮಾರ್ಗದಲ್ಲಿನ ಸೋಲನ್ನರಿತು ಕೃಷ್ಣಪ್ಪ ರಾಜಕೀಯ ಜೀವನದಿಂದಲೇ ನಿವೃತ್ತಿ ಹೊಂದುತ್ತಾನೆ.

ಅನಂತಮೂರ್ತಿಯವರ ಇಂತಹ ವೈಚಾರಿಕ ನೆಲೆ ಲೋಹಿಯಾ ಅವರ ಸಮಾಜವಾದದಿಂದ ಪ್ರಭಾವಿತವಾಗಿದೆ ಮತ್ತು ವ್ಯಕ್ತಿನಿಷ್ಠವಾಗಿದೆ ಎಂದು ತೋರಿದರೂ ನಿಜವಾಗಿ ಆ ನೆಲೆಯನ್ನು 'ನಿಹಿಲಿಸಂ' ಎಂದು ಗುರುತಿಸಬಹುದು. ಇಂತಹ ವೈಚಾರಿಕ ನೆಲೆಯನ್ನು ಕೃತಿಯ ಅಸಂಗತ ವಾತಾವರಣ ಮತ್ತು ಕೃಷ್ಣಪ್ಪನ ಪಾರ್ಶ್ವವಾಯು ಸಾಂಕೇತಿಕವಾಗಿ ಬಲಪಡಿಸುತ್ತವೆ. 'ನಿಹಿಲಿಸಂ' ದೃಷ್ಟಿಕೋನದಲ್ಲಿ ಕೊನೆಗೆ ಎರಡೇ ಎರಡು ಮಾರ್ಗಗಳಿವೆ: ಒಂದು ಹಿಂಸೆ ಮತ್ತು ಹಿಂಸೆಯ ಮೂಲಕವೇ ಬದುಕಿಗೊಂದು ಅರ್ಥಕೊಡಲೆತ್ನಿಸುವುದು. ಇದನ್ನು ನಕ್ಸಲೈಟ್ ಮಾದರಿ ಎಂದೂ ಕರೆಯಬಹುದು. ಇನ್ನೊಂದು ಮಾರ್ಗವೆಂದರೆ ವ್ಯವಸ್ಥೆಯಿಂದಲೇ ಸಂಪೂರ್ಣ ಹೊರಬೀಳುವುದು ಮತ್ತು ನಿಸ್ಸಂಗನಾಗುವುದು. ಇದನ್ನು ಅರವಿಂದರ ಮಾದರಿಯೆನ್ನಬಹುದು. ಈ ಎರಡು ಮಾದರಿಗಳು ಅನಂತಮೂರ್ತಿಯವರನ್ನು ಪ್ರಬಲವಾಗಿ ಆಕರ್ಷಿಸಿ ವಿಕರ್ಷಿಸಿ ಅವರ ಎಲ್ಲಾ ಕೃತಿಗಳಲ್ಲಿ ಮುಖ್ಯವಾಗಿ ಕಂಡು ಬರುವ ವೈಚಾರಿಕ ದ್ವಂದ್ವಕ್ಕೆ ಎಡೆ ಮಾಡಿಕೊಡುತ್ತವೆ.

* * * *

1985ರಲ್ಲಿ ಪ್ರಕಟವಾದ ವ್ಯಾಸರಾಯ ಬಲ್ಲಾಳರ "ಬಂಡಾಯ" ಎತ್ತುವ ಮೂಲಭೂತ ಪ್ರಶ್ನೆಯೂ ಇದೇ: ಒಂದು ವ್ಯವಸ್ಥೆಯ ಒಳಗಿದ್ದೂ ವ್ಯವಸ್ಥಾತೀತನಾಗುವುದು ಹೇಗೆ? ಅದು ಸಾಧ್ಯವೆ? ಕೃತಿಯ ನಾಯಕ ರಾಜೀವ ಒಂದು ಕಡೆ ಗಂಭೀರವಾಗಿ ಯೋಚಿಸುತ್ತಾನೆ: "ಎಷ್ಟು ಸಮಯ ಹೀಗೆ? ಸಾಮಾನ್ಯ ಸಂಘಟನೆಗಳಿಗೆ ತೇಪೆ ಹಾಕಿ ಬೆಳೆಸಿ ಅಸಾಮಾನ್ಯವಾದುದೇನನ್ನು ಸಾಧಿಸಬಹುದು?"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ವಿಧದ ತಾತ್ವಿಕ ಪ್ರಶ್ನೆಯನ್ನು "ಬಂಡಾಯ" ವ್ಯವಸ್ಥೆಯ ಅತ್ಯಂತ ಆಸ್ಫೋಟಕ ರೂಪವಾದ ಮಾಲೀಕ-ಕಾರ್ಮಿಕರ ವರ್ಗ-ಸಂಘರ್ಷದ ಮೂಲಕ ಶೋಧಿಸುತ್ತದೆ.

ವ್ಯವಸ್ಥೆಯೊಡನೆ ಯಾವುದೇ ಒಂದು ನೆಲೆಯಲ್ಲಿ ಒಪ್ಪಂದ ಮಾಡಿಕೊಂಡು ಒಳಗಿನಿಂದಲೇ ಅದನ್ನು ಬದಲಾಯಿಸುವ ಮಾರ್ಗ ಮತ್ತು ವ್ಯವಸ್ಥೆಯನ್ನು ಸಂಪೂರ್ಣ ತಿರಸ್ಕರಿಸಿ ಅದರಾಚೆಗೆ ನಿಂತು ಅದನ್ನು ಹಿಂಸೆಯ ಮೂಲಕ ಬದಲಾಯಿಸುವ ಮಾರ್ಗ-ಇವೆರಡು ಮಾರ್ಗಗಳಲ್ಲೂ ಅನಿವಾರ್ಯವಾಗುವ ದ್ವಂದ್ವಕ್ಕೆ ಸಾಕಾರ ರೂಪು ಕೊಡಲು ಲೇಖಕರು ಕೃತಿಯ ನಾಯಕ ರಾಜೀವನನ್ನು ಎರಡು ಸಮಾನಾಂತರ ಸ್ತರಗಳಲ್ಲಿ ಚಿತ್ರಿಸುತ್ತಾರೆ. "ಬಂಡಾಯ"ದ ನಾಯಕ, ನಕ್ಸಲೈಟ್ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ರಾಜಶೇಖರ ಸೋಮಯಾಜುಲೂ ಹೌದು ಮತ್ತು ಮುಂಬಯಿಯ ಹಿರಿಯ ಕಾರ್ಮಿಕ ನಾಯಕ ರಾಜೀವ್ ಭಯ್ಯಾನೂ ಹೌದು. ರಾಜೀವನ ವ್ಯಕ್ತಿತ್ವದ ಈ 'ಸ್ಕಿಟ್ಸೊಸ್ರೀನ್ಯ' ವ್ಯವಸ್ಥೆಯೊಡನಾಗುವ ಎಲ್ಲಾ ವಿಧದ ಹೋರಾಟದ ದ್ವಂದ್ವವನ್ನೂ ಅತ್ಯಂತ ಸಫಲವಾಗಿ ಚಿತ್ರಿಸುತ್ತದೆ.

ದಟ್ಟ ಹಾಗೂ ಸಂಕೀರ್ಣ ವಿವರಗಳೊಂದಿಗೆ ಕೃತಿ ಸಾಕಾರವಾಗಿಸುವ ವೈಚಾರಿಕ ಸಂಘರ್ಷವನ್ನು ಹೀಗೆ ಗ್ರಹಿಸಬಹುದು : ಒಂದು ವ್ಯವಸ್ಥೆಯೊಡನೆ ರಾಜಿ ಮಾಡಿಕೊಂಡು, ಕಾಯದೇಶೀರ ಮಾರ್ಗದಲ್ಲಿಯೇ ವ್ಯವಸ್ಥೆಯಲ್ಲಿ ಅಡಕವಾಗಿರುವ ವರ್ಗ ವೈಷಮ್ಯ ಹಾಗೂ ಆರ್ಥಿಕ ಅಸಮಾನತೆ ಇವುಗಳನ್ನುದೂರ ಮಾಡುವ ಪ್ರಯತ್ನ ಅನಿವಾರ್ಯವಾಗಿಯೇ ಸೋಲುತ್ತದೆ.ಏಕೆಂದರೆ ಅಂತಹ ಪ್ರಯತ್ನಇರುವ ವ್ಯವಸ್ಥೆಯನ್ನು ಬಲಪಡಿಸುತ್ತದಲ್ಲದೇ ಸಾಮಾಜಿಕ ಜೀವನದಲ್ಲಿ ಯಾವುದೇ ಮೂಲಭೂತ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. "ಅವಸ್ಥೆ"ಯಲ್ಲಿನ ಕೃಷ್ಣಪ್ಪನಂತೆ ರಾಜೀವ ಪದೇ ಪದೇ ತನ್ನನ್ನೇ ಕೇಳಿಕೊಳ್ಳುತ್ತಾನೆ : "ಎರಡು ವರ್ಷದ ಮೂರು ವರ್ಷದಎಲ್. ಟಿ. ಎಸ್. ಐದು ವರ್ಷಗಳ ಬೋನಸ್ ಒಪ್ಪಂದ....ಹೆಚ್ಚಿನ ಮಾಗಾಯಿ,ಹೆಚ್ಚಿನ ಸಂಬಳ....ಹೆರಿಗೆ ರಜೆ....ಇವುಗಳಿಂದ ಏನು ಸಾಧಿಸಿದಂತಾಗುತ್ತದೆ ?" ಅಲ್ಲದೆ ನಮ್ಮ ಬಂಡಾಯ,ಜೀವನ ಮೌಲ್ಯಗಳಿಗಲ್ಲದೆ ಹೆಚ್ಚು ಸಂಬಳ-ಹೆಚ್ಚು ಬೋನಸ್ ಇವುಗಳಿಗಾದರೆ ಇವುಗಳನ್ನು ಯಾರು, ಯಾವ ಮಾರ್ಗದಲ್ಲಿ ಹೆಚ್ಚು ಕೊಡಿಸುತ್ತಾರೆಯೋ ಅವರನ್ನು ಕಾರ್ಮಿಕ ಚಳವಳಿ ಒಪ್ಪಿಕೊಳ್ಳುತ್ತದೆ. ಅಂದರೆ ಕಾರ್ಮಿಕ ಚಳವಳಿಯಲ್ಲಿ ನಾಯಕತ್ವಕ್ಕೆ ಸ್ಪರ್ಧೆ-ಸ್ಪರ್ಧೆಯೊಡನೆ ಹಿಂಸೆ ಮತ್ತು ಪಿತೂರಿ-ಕೊನೆಗೆ ಇವುಗಳಲ್ಲಿ ನಿಷ್ಣಾತನಾದ ದೇಶಪಾಂಡೆಯಂತಹವರು ರಾಜೀವನನ್ನು ಮೂಲೆಗೊತ್ತಿ ಮೇಲೆ ಬರುತ್ತಾರೆ.

ಆದ್ದರಿಂದ ಇನ್ನೊಂದು ಆಯ್ಕೆಯಾದ ಹಿಂಸಾತ್ಮಕ ಚಳವಳಿಯಿಂದ ವ್ಯವಸ್ಥೆಯನ್ನು ಸಂಪೂರ್ಣ ನಾಶಮಾಡಲು ಹೊರಟಾಗ ಕೊನೆಗೆ ಸಿಕ್ಕುವುದೂ ಸೋಲೇ. ಏಕೆಂದರೆ "ಶಕ್ತಿ ಪ್ರವಹಿಸುವುದೇ ಬಂದೂಕಿನ ನಳಿಗೆಯ ಮೂಲಕ" ಎಂದು ನಂಬಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯವಸ್ಥೆಯ ವಿರುದ್ಧ ಹೋರಾಡಿದರೆ ಒಂದು ಬಂದೂಕಿನ ನಳಿಗೆಯನ್ನು ಮತ್ತೊಂದು ಬಂದೂಕಿನ ನಳಿಗೆ ಎದುರಿಸುತ್ತದೆ ಮತ್ತು ಗೆಲುವು-ಸೋಲುಗಳನ್ನು ನಿರ್ಧರಿಸುವುದು ಕೇವಲ ಬಂದೂಕಿನ ಸಂಖ್ಯೆಗಳೇ ಹೊರತು ಮೌಲ್ಯಗಳಲ್ಲ. ಅಂದ ಮೇಲೆ ಅದು ಕ್ರಾಂತಿ ಹೇಗಾದೀತು ?

ಎಂದರೆ "ಬಂಡಾಯ"ದ ವೈಚಾರಿಕ ಪಾತಳಿಯೂ "ಅವಸ್ಥೆ"ಯದಂತೆಯೇ "ನಿಹಿಲಿಸಂ" ಎನ್ನಬಹುದು. ಆದರೆ "ನಿಹಿಲಿಸಂ"ವಾದದ ಒಂದು ಆಯ್ಕೆಯನ್ನು— ಅಂದರೆ ವ್ಯವಸ್ಥೆಯಿಂದ ದೂರವಾಗುವುದನ್ನು-"ಅವಸ್ಥೆ" ತೋರಿಸಿದರೆ, ಅದೇ ವಾದದ ಮತ್ತೊಂದು ಅನಿವಾರ್ಯ ಆಯ್ಕೆಯಾದ ಹಿಂಸೆ-ಆ ಯಶಸ್ಸು ಗೊತ್ತಿದ್ದೂ, ಉದ್ದೇಶ ಪೂರ್ವಕವಾಗಿ ಆಯ್ದುಕೊಳ್ಳುವ ಹಿಂಸೆಯಲ್ಲಿ "ಬಂಡಾಯ" ಕೊನೆಗೊಳ್ಳುತ್ತದೆ. ರಾಜೀವ ಕೃತಿಯಲ್ಲಿ ಮತ್ತೆ ಹಿಂಸಾ ಮಾರ್ಗವನ್ನೇ ಆಯ್ದುಕೊಳ್ಳುತ್ತಾನೆ.

* * * *

ನಮ್ಮ ಇಂದಿನ ರಾಜಕೀಯ-ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಅತ್ಯಂತ ಗಾಢವಾಗಿ ಚಿಂತಿಸುವವರು ಮತ್ತು ತಮ್ಮ ಚಿಂತನೆಯನ್ನು ಸಾಹಿತ್ಯಕವಾಗಿ ಅಷ್ಟೇ ಸಫಲವಾಗಿಸುವವರಲ್ಲಿ ತೇಜಸ್ವಿಯವರು ಮುಖ್ಯರು. ಆದರೆ ಅವರು ತಮ್ಮ ಕೃತಿ ಗಳಲ್ಲಿ-ಮುಖ್ಯವಾಗಿ 'ಅಬಚೂರಿನ ಪೋಸ್ಟ್ ಆಫೀಸ್' ಸಂಗ್ರಹದಲ್ಲಿನ ಕಥೆಗಳಲ್ಲಿ ಮತ್ತು "ಚಿದಂಬರ ರಹಸ್ಯ" ಕಾದಂಬರಿಯಲ್ಲಿ ಕಾರಂತರು, ಅನಂತಮೂರ್ತಿಯವರು, ಬಲ್ಲಾಳರು, ಚದುರಂಗರು-ಇವರೆಲ್ಲರಿಗಿಂತ ಬೇರೆಯೇ ಆದ ರೀತಿಯಲ್ಲಿ ವ್ಯವಸ್ಥೆಗೆ ಪ್ರತಿಕ್ರಿಯಿಸುತ್ತಾರೆ.

ಈ ಕೃತಿಗಳಲ್ಲಿ ಧ್ವನಿತವಾಗುವ ತೇಜಸ್ವಿಯವರ ವೈಚಾರಿಕತೆಯನ್ನು ಹೀಗೆ ಸಂಗ್ರಹಿಸಬಹುದು : ವ್ಯವಸ್ಥೆಗೂ ಮತ್ತು ವ್ಯವಸ್ಥೆಯ ವಿರುದ್ಧ ನಡೆಯುವ ಪ್ರತಿಭಟ ನೆಗೂ ಅನೇಕ ಮುಖಗಳಿವೆ-ರಾಜಕೀಯ ಆರ್ಥಿಕ, ಸಾಂಸ್ಕೃತಿಕ, ಇತ್ಯಾದಿ. ತೇಜಸ್ವಿ ಯವರ ದೃಷ್ಟಿಯಲ್ಲಿ ಮಾರ್ಕ್ಸ್‌ವಾದದ ರಾಜಕೀಯ ರೂಪ-ಕಮ್ಯೂನಿಸಂ-ಏಕೆ ಸೋಲುತ್ತದೆಂದರೆ ಅದು ಕೇವಲವ್ಯವಸ್ಥೆಯ ರಾಜಕೀಯ ಹಾಗೂ ಆರ್ಥಿಕಮುಖಗಳಿಗೆ ಒತ್ತು ಕೊಡುತ್ತದೆ. ಆದರೆ, ಯಾವುದೇ ವ್ಯವಸ್ಥೆ ಬದಲಾಗಬೇಕಾದರೂ, ಅದಕ್ಕಿಂತ ಮುಖ್ಯವಾಗಿ ಯಾವುದೇ ರಾಜಕೀಯ ರಚನೆಯಲ್ಲಿ ಜೀವನ ಅರ್ಥಪೂರ್ಣವಾಗಬೇಕಾ ದರೂ ವ್ಯಕ್ತಿಯ ಸಂಸ್ಕೃತಿ-ಅಂದರೆ ಅವನ ಪ್ರಜ್ಞೆಯ ಸ್ತರ ಬದಲಾಗಬೇಕು ಮತ್ತು ಶ್ರೀಮಂತವಾಗಬೇಕು. ಭಾರತೀಯ ಸಮಾಜದ ಹಿನ್ನೆಲೆಯಲ್ಲಿ ಹೇಳಬೇಕಾದರೆ, ವ್ಯಕ್ತಿ ತನ್ನ ಕಂದಾಚಾರ ಮತ್ತು ವಿವಿಧರೂಪದ ಹೆದರಿಕೆಗಳಿಂದ, ಬಡತನ ಮತ್ತು ಅಜ್ಞಾನದ ಸಂಕೋಲೆಗಳಿಂದ ಎಲ್ಲದಕ್ಕಿಂತ ಮುಖ್ಯವಾಗಿ ಭಾರತದ ಶಾಪವಾದ ಜಾತೀಯತೆಯಿಂದ ಮುಕ್ತವಾಗದ ಹೊರತು ಯಾವುದೇ ಪ್ರಕಾರದ ರಾಜಕೀಯ ವ್ಯವಸ್ಥೆಯೂ ಏನನ್ನೂ ಸಾಧಿಸಲಾಗುವುದಿಲ್ಲ. ಯಾವುದೇ ಮೂಲಭೂತ ಬದಲಾವಣೆಯೂ ವೈಯಕ್ತಿಕ ನೆಲೆಯಲ್ಲಿ ವ್ಯಕ್ತಿಯ ಸಾಂಸ್ಕೃತಿಕ ಚೇತನದ ಬದಲಾವಣೆಯ ಆಧಾರದ ಮೇಲೆ ಪ್ರಾರಂಭವಾಗಬೇಕು. ಇಂತಹ ವೈಚಾರಿಕ ನೆಲೆಯನ್ನು ನಾವು 'ಲೋಹಿಯಾವಾದದ'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಂಸ್ಕೃತಿಕ ಮುಖವೆಂದು ಗುರುತಿಸಬಹುದು. ಈ ವಿಧದ ಚಿಂತನೆಯ ಕಾರಣದಿಂದಲೇ ತೇಜಸ್ವಿಯವರು ತಮ್ಮ ಮುಖ್ಯ ಕಥೆಗಳಲ್ಲೆಲ್ಲಾ ಇಂದಿನ ಗ್ರಾಮೀಣ ಜೀವನದ ಶೋಚನೀಯ ಮುಖಗಳನ್ನು ವಿಷಾದದ ರೇಖೆಗಳಲ್ಲಿ ಚಿತ್ರಿಸುತ್ತಾರೆ. ಗಾಣದೆತ್ತಿನ ದಾರಿಯಂತೆ ನೀರಸವಾದ, ಶುಷ್ಕ ಜೀವನ ಅಬಚೂರಿನಲ್ಲಿ ಒಂದು ವ್ಯಕ್ತಿಯನ್ನು ಸಂಸಾರವಿದ್ದೂ ಪರದೇಶಿಯನ್ನಾಗಿಸುವುದನ್ನು "ಅಬಚೂರಿನ ಪೋಸ್ಟ್ ಆಫೀಸು" ಸೆರೆ ಹಿಡಿದರೆ, "ಅವನತಿ", ತನಗೆ ಹುಟ್ಟಿದ ಮಕ್ಕಳೆಲ್ಲಾ ಕೆಲವು ವಾರಗಳಲ್ಲೇ ಸಾಯುವು ದಕ್ಕೂ ತನ್ನ ಮಾವ ಮಂಗನ ಮಾಂಸ ತಿನ್ನುವುದಕ್ಕೂ ಏನೋ ಸಂಬಂಧವಿದೆಯೆಂದು ಕೊರಗುವ ಗೌರಿ, ಮತ್ತು ತನ್ನ ಜೀವನವೆಲ್ಲಾ ಎತ್ತಿನ ವ್ಯಾಪಾರದ ಚೌಕಶಿಯಲ್ಲಿಯೇ ಕಳೆಯುವ ಸೂರಾಚಾರಿ–ಇವರುಗಳನ್ನು ನಮ್ಮೆದುರು ಇಡುತ್ತದೆ. "ಕುಬಿ ಮತ್ತು ಇಯಾಲ"ದಲ್ಲಿ ಮಹಾ ವೈದ್ಯನೆಂದು ಹೆಸರುವಾಸಿಯಾಗುವ ಬದಲು ಭಾರೀ ವರ್ಚಸ್ವಿ ಯಾದ ಪಂಜುರ್ಲಿಯೋ ಜಟ್ಟಿಗನೋ ಎಂಬ ಹಾಗೆ ಮೂಢನಂಬುಗೆಗಳಿಗೂ ಕುರುಡು ಬುದ್ಧಿಗೂ ಆಸರೆಯಾಗುವ ಡಾ. ಕುಬೇರ, ದೊಡ್ಡ ದೊಡ್ಡ ಪಾರ್ಟಿಗಳು ಕಂಪ್ಲೆಂಟ್ ಮಾಡಿದ್ದಾರೆಂದು "ಪ್ರೋಗ್ರೆಸ್" ತೋರಿಸಲು ಬಡ ಹಮಾಲಿಗಳ ಚರ್ಮ ಸುಲಿಯುವ ಪೋಲೀಸ್ ಅಧಿಕಾರಿಗಳು, ಮತ್ತು ಮೈನೆರೆಯದ ಕನ್ಯೆಯನ್ನು ಸಂಭೋಗಿಸಿದರೆ ಮೇಹ ರೋಗ ಹೋಗುತ್ತದೆಂಬ ನಂಬಿಕೆಯಿಂದ ಮುಗ್ಧ ಇಯಾಲಳ ಮೇಲೆ ಅತ್ಯಾ ಚಾರ ಮಾಡಿ ಅವಳ ಸಾವಿಗೆ ಕಾರಣವಾಗುವ ಲೋರಿ–ಇವರುಗಳನ್ನು ನಾವು ಕಾಣು ತ್ತೇವೆ. ಅಂತೆಯೇ ನಗರೀಕರಣದಿಂದ ಪರೋಕ್ಷವಾಗಿ ತನ್ನ ಕಸುಬಿನ ನೈಪುಣ್ಯವನ್ನೂ ಗೃಹ ಜೀವನವನ್ನು ಹಾಳು ಮಾಡಿಕೊಳ್ಳುವ ತುಕ್ಕೋಜಿ–ತನಗರ್ಥವಾಗದ, ತನ್ನ ಶಕ್ತಿಯನ್ನು ಮೀರಿದ ಬ್ಯೂರಾಕ್ರಸಿಯ ಕಬಂಧ ಬಾಹುಗಳಲ್ಲಿ ಸಿಕ್ಕಿ ಜರ್ಝರಿತ ವಾಗುವ ತಬರ–ಇವರುಗಳನ್ನು ಕಂಡಾಗ ನಮಗೆನ್ನಿಸುತ್ತದೆ : ಇಂತಹ ಭಾರತೀಯ ಸಂದರ್ಭದಲ್ಲಿ ವಿವಿಧ ರಾಜಕೀಯ ವ್ಯವಸ್ಥೆಗಳನ್ನು ಕುರಿತು ಬೌದ್ಧಿಕವಾಗಿ ತರ್ಕಿಸು ವುದು ಎಷ್ಟು ಉಚಿತ ?

ಪ್ರಾಯಶಃ ಈ ಕಾರಣದಿಂದಲೇ–ಅಂದರೆ ಅಜ್ಞಾನ, ನಾನಾ ಬಗೆಯ ಭೀತಿ ಹಾಗೂ ಮೂಢ ನಂಬಿಕೆಗಳು ಮತ್ತು ಜಾತೀಯತೆ ತುಂಬಿರುವ ಇಂದಿನ ಭಾರತೀಯ ಸಾಂಸ್ಕೃತಿಕ ಚೌಕಟ್ಟಿನಲ್ಲಿ ರಾಜಕೀಯ ವ್ಯವಸ್ಥೆಗಳು ಮತ್ತು ಸಿದ್ಧಾಂತಗಳು ಇರ್ರೆಲ ವೆಂಟ್ ಆಗುತ್ತವೆ ಎಂಬ ಕಾರಣದಿಂದಲೆಂದು ತೋರುತ್ತದೆ. ತೇಜಸ್ವಿಯವರ "ಚಿದಂಬರ ರಹಸ್ಯ" ಕ್ರಾಂತಿಯನ್ನು ಮತ್ತು ಕ್ರಾಂತಿ ಮಾಡಲೆಳಸುವ ಯುವಕರನ್ನು ಚೇಷ್ಟೆಯ, ನವಿರಾದ ಹಾಸ್ಯದ ಶೈಲಿಯಲ್ಲಿ ಚಿತ್ರಿಸುತ್ತದೆ. ಇಳಿಮುಖವಾಗುತ್ತಿರುವ ಕೆಸರೂರಿನ ಏಲಕ್ಕಿ ಬೆಳೆಯ ಅಭ್ಯಾಸ ನಿಧಾನವಾಗಿ ನಮಗರಿವಿಲ್ಲದಂತೆಯೇ ಡಾ. ಜೋಗಿಹಾಳರ ಸಾವನ್ನು ಬಳಸಿಕೊಂಡು ಕೆಸರೂರಿನ ರಾಜಕೀಯ ಮತ್ತು ಮತಧರ್ಮಗಳ ಒಳಜಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳ ಸುತ್ತಲೂ ಬೆಳೆಯುತ್ತಾ ಉಸಿರು ಕಟ್ಟಿಸುತ್ತದೆ-ಕಡಿದ ಕಾಡಿನ ಜಾಗದಲ್ಲಿ ತಾನೇ ತಾನಾಗಿ ಹುಚ್ಚುಹುಚ್ಚಾಗಿ ಬೆಳೆಯುವ ಲಾಂಟಾನಾ ಪೊದೆಯಂತೆ. ಕೊನೆಯಲ್ಲಿ ಸಂಪೂರ್ಣ ಕೆಸರೂರನ್ನೇ ಬಲಿತೆಗೆದುಕೊಳ್ಳುವ ಲಾಂಟಾನಾ ಪೊದೆಗೆ ಹಚ್ಚಿದ ಬೆಂಕಿ, ನಮ್ಮ ಸಮಾಜದ ಜಾತೀಯತೆ, ಅಂಧಮತೀಯತೆ ಹಾಗೂ ಅಧಿಕಾರ ಶಾಹಿಯ ಸ್ವಾರ್ಥ ಇವುಗಳ ಸಫಲ ಸಂಕೇತವಾಗುತ್ತದೆ. ಕೆಸರೂರಿನ ಜನ-ಅಂದರೆ ನಾವುಗಳು-ಈಗಲೂ ಓಡಿ ಈ ಬೆಂಕಿಯಿಂದ ತಪ್ಪಿಸಿಕೊಳ್ಳಬಹುದು. ಆದರೆ ರಫಿ ಹೇಳುವಂತೆ "ಆ ದಾರಿ ಕಾಣಿಸುತ್ತಾ ಸುತ್ತಾ ಇರುವ ಹೊಗೇಲಿ ?"

* * * *

ಇಲ್ಲಿಯವರೆಗೆ ಸ್ಥೂಲವಾಗಿ ಮಾಡಿದ ಕೃತಿಗಳ ವ್ಯಾಖ್ಯಾನವನ್ನು ಹೀಗೆ ಸಂಗ್ರಹಿಸಬಹುದು:

1. ಕಾರಂತರು, ಅನಂತಮೂರ್ತಿಯವರು, ಬಲ್ಲಾಳರು ಮತ್ತು ತೇಜಸ್ವಿಯವರು— ಇವರೆಲ್ಲರ ದೃಷ್ಟಿಯಲ್ಲೂ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ವ್ಯವಸ್ಥೆ ಸಂಪೂರ್ಣ ಸೋತಿದೆ. ಚುನಾವಣೆಗಳು ಅರ್ಥಹೀನವಾಗಿ, ರಾಜಕೀಯ ನಾಯಕರು ಕೇವಲ ಸ್ವಾರ್ಥ ಸಾಧಕರಾಗಿರುವುದರಿಂದ ಜನಸಾಮಾನ್ಯನ ಹಿತ ಏನೇನೂ ಸಾಧಿಸಲಾಗಿಲ್ಲ. ಅಲ್ಲದೆ ಪರಾಧೀನ ಭಾರತಕ್ಕಿಂತ ಸ್ವತಂತ್ರ ಭಾರತದಲ್ಲೇ ಜಾತೀಯತೆ, ಪ್ರಾಂತೀಯಂತೆ, ಮತಧರ್ಮಗಳ ಸಂಘರ್ಷ ಹಾಗೂ ಜನಸಾಮಾನ್ಯನ ಶೋಷಣೆ ಹೆಚ್ಚಾಗಿದೆ.

ಸಾಧಾರಣವಾಗಿ ಇದೇ ಧ್ವನಿಯನ್ನು ಕನ್ನಡದ ಇತರ ಪ್ರಮುಖ ಕೃತಿಗಳಲ್ಲೂ ನಾವು ಕಾಣಬಹುದು. ಫ್ಯೂಡಲಿಸ್ಟಿಕ್ ಸಮಾಜ ತನ್ನ ಅಂತರ್ಗತ ಅನೈತಿಕತೆಯಿಂದಲೇ ಛಿದ್ರವಾಗುವುದನ್ನು ರಾವ್ ಬಹದ್ದೂರರ "ಗ್ರಾಮಾಯಣ" ಎತ್ತಿ ತೋರಿಸಿದರೆ, ಜಾತೀಯತೆ ಮತ್ತು ಕೆಳವರ್ಗದ ಶೋಷಣೆ ಇವುಗಳ ಆಧಾರದ ಮೇಲೆ ನಿಂತಿರುವ ನಮ್ಮ ಇಂದಿನ ಸಾಮಾಜಿಕ ವ್ಯವಸ್ಥೆ ಅನಿವಾರ್ಯ, ಆಂತರಿಕ ಸಂಘರ್ಷದಿಂದ ಅರ್ಥಹೀನವಾಗಿ ವ್ಯಕ್ತಿಯನ್ನು ತಬ್ಬಲಿಯನ್ನಾಗಿಸುವುದನ್ನು ಚದುರಂಗರ "ವೈಶಾಖ", ಮತ್ತು ದೇವನೂರರ ಕಥೆಗಳು ಗುರುತಿಸುತ್ತವೆ. ಒಟ್ಟನಲ್ಲಿ, ಸ್ವಾತಂತ್ರ್ಯೋತ್ತರ ಕನ್ನಡ ಕಥಾ ಸಾಹಿತ್ಯ ಹೆಚ್ಚು ಕಮ್ಮಿ ಒಂದೇ ನಿರ್ಣಯವನ್ನು ಕೊಡುತ್ತದೆ : ಸ್ವಾತಂತ್ರ್ಯ ಲಭಿಸಿದ ನಂತರ ನಾವು ಕಟ್ಟಬೇಕೆಂದಿದ್ದ ಸ್ವರ್ಗ ಈ ನಲವತ್ತು ವರ್ಷಗಳಲ್ಲಿ ಗೊಂಡಾರಣ್ಯವಾಗಿದೆ

ಇಂತಹ ದುಃಸ್ಥಿತಿಗೆ ಪರಿಹಾರ ಮತ್ತು ಪರ್ಯಾಯ ವ್ಯವಸ್ಥೆಗಳನ್ನು ಸೂಚಿಸುವಾಗ ಮಾತ್ರ, ನಾವು ಗೊಂದಲವನ್ನು ಕಾಣುತ್ತೇವೆ. ಆದರೆ ಒಂದು ಪರ್ಯಾಯ ವ್ಯವಸ್ಥೆಯನ್ನು ಹಿಂಸೆಯನ್ನಾಧರಿಸಿದ ಮಾರ್ಕಿಸ್ಟ್ ರಾಜಕೀಯ ವ್ಯವಸ್ಥೆಯನ್ನು ಮಾತ್ರ-ಎಲ್ಲರೂ ನಿರಾಕರಿಸುತ್ತಾರೆ, ಪ್ರಾಯಶಃ ಗಾಂಧಿ ಮತ್ತು ಲೋಹಿಯಾ ಇವರ ಪ್ರಭಾವದಿಂದೆಂದು ಕಾಣುತ್ತದೆ. ಉಳಿದ ಇತರ ಪರ್ಯಾಯಗಳಲ್ಲಿ ಕಾರಂತರು ಧ್ವನಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವ ವ್ಯಕ್ತಿನಿಷ್ಠ ಲಬರಲ್ ವ್ಯವಸ್ಥೆ ಅಥವಾ ತೇಜಸ್ವಿಯವರು ಧ್ವನಿಸುವ ಲೋಹಿಯಾ ಅವರ ವೈಚಾರಿಕ ಚೌಕಟ್ಟು–ಇವೆರಡರಲ್ಲಿ ಒಂದನ್ನು ಇಂದು ನಮ್ಮ ರಾಷ್ಟ್ರ ಆರಿಸ ಬೇಕಾಗಿದೆ. ಇವೆರಡೇ ಪರ್ಯಾಯಗಳೆಂದು ಏಕೆ ಹೇಳುತ್ತೇನೆಂದರೆ ಅನಂತಮೂರ್ತಿ ಯವರ ವಿಚಾರದಲ್ಲಿ ಯಾವುದೇ ವ್ಯವಸ್ಥೆಯು ಗರ್ಭದಲ್ಲಿಯೇ ಅವ್ಯವಸ್ಥೆ ಹುದುಗಿರು ತ್ತದೆ. ಆದ್ದರಿಂದ ಈಗಿರುವ ವ್ಯವಸ್ಥೆಯಾಗಲೀ ಮತ್ತೊಂದಾಗಲೀ ನನಗೆ ಸಾಧ್ಯ ವಾಗುವುದು ಕೇವಲ ಪ್ಯಾಚ್ ವರ್ಕ್–ತೇಪೆ ಹಚ್ಚುವ ಪ್ರಯತ್ನ ಅಷ್ಟೆ.

ಅಂದರೆ, ಈ ಸಂದರ್ಭದಲ್ಲಿ ಒಂದು ಸಂದೇಹವೇಳುತ್ತದೆ: ಸ್ವಾತಂತ್ರ್ಯೋತ್ತರ ಭಾರತೀಯ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಅಳೆಯಲು ನಾವು ತುಂಬಾ ಹತ್ತಿರದಲ್ಲಿದ್ದೇವೆಯೆ ? ಮುಂದೆ ನೂರಿನ್ನೂರು ವರ್ಷಗಳ ನಂತರ ಬರುವ ಸಾಹಿತಿ ಅಥವಾ ಇತಿಹಾಸಕಾರನಿಗೆ ಇಂದಿನ ವ್ಯವಸ್ಥೆ ಇಷ್ಟು ನಿರಾಶಾದಾಯಕವಾಗಿ ಕಾಣದೇ ಇರುವ ಸಾಧ್ಯತೆ ಇದೆಯೇ ? ಈ ಸಂದೇಹಕ್ಕೆ ಕಾರಣವೆಂದರೆ ಇತರ ರಾಷ್ಟ್ರ ಗಳ ಇತಿಹಾಸವನ್ನುನೋಡಿದರೆ ಪರಿವರ್ತನಶೀಲಕಾಲಗಳಲ್ಲೆಲ್ಲಾ ಅಂದಿನ ಸಾಹಿತಿಗಳಿಗೆ ಮತ್ತು ವಿಚಾರವಂತರಿಗೆ ಜಗತ್ತೇ ಬಿರುಕು ಬಿಡುತ್ತಿರುವಂತೆ ಮತ್ತು ಭವಿಷ್ಯವೇ ಇಲ್ಲ ದಂತೆ ಕಂಡು ಬಂದಿರುವುದಿದೆ. ಇಂಗ್ಲಂಡಿನ ರಾಜಕೀಯ–ಸಾಮಾಜಿಕ ವ್ಯವಸ್ಥೆ ಬಗ್ಗೆ 17ನೆಯ ಶತಮಾನದ ಆದಿಯಲ್ಲಿ, ಮುಖ್ಯವಾಗಿ 18ನೆಯ ಶತಮಾನದ ಆದಿಯಲ್ಲಿ ಮತ್ತೆ 19ನೆಯ ಶತಮಾನದ ಉತ್ತರ ಭಾಗದಲ್ಲಿ ನಿರಾಶೆ ಹಾಗೂ ಕತ್ತಲೆಯು ಹೊರತು ಬೇರೇನೂ ಸಮಕಾಲೀನ ಸಾಹಿತಿಗಳಿಗೆ ಕಂಡು ಬಂದದ್ದಿಲ್ಲ. 18ನೆಯ ಶತಮಾನದ ಪೋಪ್‌ಮತ್ತು ಸ್ವಿಫ್ಟ್ ಮುಂತಾದ ಲೇಖಕರಂತೂ ಅಂದಿನ ರಾಜಕೀಯ–ಸಾಮಾಜಿಕ ವ್ಯವಸ್ಥೆ ತಮ್ಮ ಕಣ್ಣ ಮುಂದೆಯೇ ಕುಸಿದು ಬೀಳುತ್ತದೆಂದು ನಂಬಿ ಕೊರಗಿದ್ದರು. ಅಂದರೆ ಇಂದಿನ ವ್ಯವಸ್ಥೆಯನ್ನು ಕುರಿತಾದ ಅಗಾಧ ನಿರಾಶೆ ಹಾಗೂ ಅಸಮಾಧಾನಕ್ಕೆ ನಮ್ಮ ಸಮಾಜ ಬದಲಾಗುತ್ತಿರುವ ತೀವ್ರಗತಿಯೇ ಕಾರಣವೆ ? ಮತ್ತು ಪಶ್ಚಿಮ ದಿಂದ ನಾವು ಎರವಲು ಪಡೆದ ವ್ಯಕ್ತಿಕೇಂದ್ರಿತ 'ಲಿಬರಲ್' ವೈಚಾರಿಕತೆಯನ್ನು ಮರೆತು ಸಾಧರಣವಾಗಿ ಭಾರತೀಯವೆನ್ನಬಹುದಾದ 'ಸಮಷ್ಟಿ ಕೇಂದ್ರಿತ' ಧೋರಣೆ ಯನ್ನು ನಮ್ಮದನ್ನಾಗಿಸಿದರೆ ಇಷ್ಟು ನಿರಾಶೆ, ಹತಾಶಪ್ರಜ್ಞೆ ಕಾಣಿಸದಿರಲು ಸಾಧ್ಯವೆ ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩ 'ಕಲಾವಿದ ಕಾದಂಬರಿ'

'ಮೊಗ ಪಡೆದ ಮನ' ಮತ್ತಿತರ ಕೃತಿಗಳು

ಈ ಲೇಖನದಲ್ಲಿ ಮೂರು ಭಾಗಗಳಿವೆ. ಮೊದಲನೆಯಭಾಗದಲ್ಲಿ 'ಕುನ್‌ಸ್ಟ್ಲರ್ ರೋಮಾನ್' (ಕಲಾವಿದ ಕಾದಂಬರಿ) ಎಂಬ ಕಾದಂಬರೀ ಪ್ರಭೇದವನ್ನು ಕುರಿತಾದ ವೈಚಾರಿಕ ಚರ್ಚೆ ಇದ್ದು, ಎರಡನೆಯ ಭಾಗದಲ್ಲಿ ಕನ್ನಡದಲ್ಲಿ ಬಂದಿರುವ ಮುಖ್ಯ 'ಕಲಾವಿದ ಕಾದಂಬರಿ'ಗಳನ್ನು ಸ್ಥೂಲವಾಗಿ ಮತ್ತು ಶಿವರಾಮ ಕಾರಂತರ "ಮೊಗ ಪಡೆದ ಮನ"ವನ್ನು ದೀರ್ಘವಾಗಿ ವಿಶ್ಲೇಷಿಸಿದ್ದೇನೆ. ಕೊನೆಯ ಭಾಗದಲ್ಲಿ ಈ ಸಾಹಿತ್ಯ ಪ್ರಭೇದಕ್ಕೆ ಸಂಬಂಧಿಸಿದ ಸಾಮಾಜಿಕ-ಸಾಂಸ್ಕೃತಿಕ ಪ್ರಶ್ನೆಗಳನ್ನೆತ್ತಿದ್ದೇನೆ.

*   *   *   *

ತಮ್ಮ ಪ್ರತಿಭೆಯಿಂದ ಮತ್ತು ಸಮಾಜದ ಕಟ್ಟು ಪಾಡುಗಳನ್ನು ತಿರಸ್ಕರಿಸುವ ವಿಕ್ಷಿಪ್ತ ವ್ಯಕ್ತಿತ್ವದಿಂದ ಕಲಾವಿದರು ಸಾಮಾನ್ಯ ಜನರಿಗೆ ಯಾವಾಗಲೂ ಆಕರ್ಷಕ ಹಾಗೂ ಆರಾಧನೀಯ ವಸ್ತುವಾಗಿದ್ದಾರೆ. ಹಾಗೆಯೇ ಮತ್ತೆ ಕೆಲವರಲ್ಲಿ ಭೀತಿ ಮತ್ತು ಜಿಗುಪ್ಸೆಗೂ ಕಾರಣರಾಗಿದ್ದಾರೆ. ಪ್ರಾಚೀನ ಭಾರತೀಯರು ಕಲಾವಿದನನ್ನು 'ಋಷಿ' ಎಂದು ಕರೆದು ವಂದಿಸಿದರೂ "ಕಾವ್ಯಾಲಾಪಾಂಶ್ಚ ವರ್ಜಯೇತ್" ಎಂದೂ ಹೇಳಿದರು. ಪ್ಲೆಟೋ ಅವನನ್ನು 'ಸ್ಫೂರ್ತಿ ಹೊಂದಿದ ಹುಚ್ಚ'ನೆಂದು ಕರೆದು (Inspired Frenzy) ಅವನನ್ನು ತನ್ನ 'ಆದರ್ಶ ರಾಜ್ಯ'ದಿಂದ ಹೊರಗಿಟ್ಟ. ಕವಿ ಶೆಲೆಯ ದೃಷ್ಟಿಯಲ್ಲಿ ಕಲಾವಿದ 'ಜನತೆಯ ಅಘೋಷಿತ ಶಾಸಕ'. ಕಾರ್ಲೈಲ್‌ನ 'ನಾಯಕರು'ಗಳಲ್ಲಿ (Heroes) ಕವಿ ಒಬ್ಬನಾದರೆ, ಎಮರ್ಸನ್‌ನ 'ಪ್ರಾತಿನಿಧಿಕ ವ್ಯಕ್ತಿ'ಗಳಲ್ಲಿ (Representative Men) ಮೂರು ಜನ ಲೇಖಕರಿದ್ದಾರೆ: ಶೇಕ್ಸ್‌ಪಿಯರ್, ಮಾಂತೇನ್ ಮತ್ತು ಗಟೆ. ಕಲಾವಿದನಿಗಿರುವ ಈ ಮಹತ್ವದಿಂದಾಗಿ ಸಾಮಾನ್ಯ ಜನರಿಗೆ ಯಾವಾಗಲೂ ಅವನ ಬಗ್ಗೆ ಅವನ ಜೀವನದ ರೀತಿ-ನೀತಿಗಳ ಬಗ್ಗೆ ಹಾಗೂ ಕಲಾನಿರ್ಮಾಣದ ಬಗ್ಗೆ; ಕುತೂಹಲವಿರುವುದು ಸಹಜ ಮತ್ತು ಈ ಕುತೂಹಲವನ್ನು ತಣಿಸುವ ಕಲಾವಿದರ ಜೀವನ ಚರಿತ್ರೆ, ಮತ್ತು ಕಲಾವಿದರ ಸುತ್ತ ಹೆಣೆದಿರುವ ಕಥೆ-ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿವೆ. ಈ ಜನ ಜನಪ್ರಿಯತೆಯ ನಿದರ್ಶನಾರ್ಥವಾಗಿ 20ನೆಯ ಶತಮಾನದ ಆಂಗ್ಲ ಸಾಹಿತ್ಯವನ್ನೇ ತೆಗೆದುಕೊಂಡರೆ ನಮಗೆ ಅನೇಕ ಪ್ರಖ್ಯಾತ 'ಕಲಾವಿದ ಕಾದಂಬರಿ'ಗಳು ಕಾಣುತ್ತವೆ ಸಾಮರ್ಸೆಟ್ ಮಾಮ್‌ನ "ದ ಮೂನ್ ಆ್ಯಂಡ್ ಸಿಕ್ಸ್ ಪೆನ್ಸ್", ಅರ್ವಿಂಗ್ ಸ್ಟೋನ್‌ನ "ಲಸ್ಟ್ ಫಾರ್ ಲೈಫ್" ಮತ್ತು "ದಿ ಆ್ಯಗೊನಿ ಆ್ಯಂಡ್ ದಿ ಎಕ್ಸ್‌ಟಸಿ" ಜೇಮ್ಸ್ ಜಾಯ್ಸ್‌ನ ಸುಪ್ರಸಿದ್ಧ "ದ ಪೋರ್ಟ್ರೆಟ್ ಆಫ್ ಆ್ಯನ್ ಆರ್ಟಿಸ್ಟ್,"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತ್ಯಾದಿ. ಮತ್ತೆ ಫ್ರೆಂಚ್ ಕಾದಂಬರಿ "ಜೀನ್ ಕ್ರಿಸ್ಟೋಫಿ" (Jean Christrophe) ಕೂಡ ಈ ವರ್ಗದ ಮತ್ತೊಂದು ಪ್ರಖ್ಯಾತ ಕಾದಂಬರಿ.

ಈ ಕಾದಂಬರೀ ಪ್ರಭೇದವನ್ನು ಜರ್ಮನ್ ಸಾಹಿತ್ಯ ವಿಮರ್ಶಕರು "ಕುನ್ ಸ್ಟ್ಲರ್ ರೋಮಾನ್" (Kunstler Roman) ಎಂದು ಗುರುತಿಸುತ್ತಾರೆ. ಈ ಪ್ರಭೇದದ ಮುಖ್ಯ ಲಕ್ಷಣವೆಂದರೆ ಕಾದಂಬರಿ ಕಲಾವಿದನ ಬಾಲ್ಯದಿಂದ ಪ್ರಾರಂಭ ವಾಗಿ, ಅವನ ಕಲಾತ್ಮಕ ಬೆಳವಣಿಗೆಯನ್ನು ಚಿತ್ರಿಸುತ್ತಾ, ಅವನು ತನ್ನ ಕಲೆಯಲ್ಲಿ ಪ್ರಬುದ್ಧತೆಯನ್ನು ಪಡೆಯುವ ಘಟ್ಟದೊಂದಿಗೆ ಮುಗಿಯುತ್ತದೆ. ಇದನ್ನು 'ಬಿಲ್ಡುಂಗ್ಸ್ ರೋಮಾನ್' (Buildungs Roman) ಪ್ರಭೇದದ ಒಂದು ಆಂತರಿಕ ಪ್ರಕಾರವೆಂದು ಕರೆಯಬಹುದು. 'ಬಿಲ್ಡುಂಗ್ಸ್ ರೋಮಾನ್'ದಲ್ಲಿ ಯಾವುದೇ ವ್ಯಕ್ತಿಯ ಬಾಲ್ಯದಿಂದ ಪ್ರೌಢಾವಸ್ಥೆಯವರೆಗಿನ ಚಿತ್ರಣವಿದ್ದರೆ 'ಕುನ್‌ಸ್ಟ್ಲರ್ ರೋಮಾನ್'ದಲ್ಲಿ ಆ ವ್ಯಕ್ತಿ ಕಲಾವಿದನಾಗಿರುತ್ತಾನೆ ಮತ್ತು ಅವನ ಕಲೆಯ ಪ್ರೌಢಿಮೆಯೊಂದಿಗೆ ಕೃತಿ ಕೊನೆಗೊಳ್ಳುತ್ತದೆ. ಆದರೆ ಈ ವಿಧದ ಕಾದಂಬರೀ ಪ್ರಭೇದ ವನ್ನು ಸಂಪೂರ್ಣ ಪ್ರತಿನಿಧಿಸುವ ಕೃತಿ ಜಾಯ್ಸ್‌ನ "ದ ಪೋರ್‌ಟ್ರೆಟ್" ಒಂದೇ ಆದು ದರಿಂದ ಈಗೀಗ ವಿಮರ್ಶಕರು ಈ ವರ್ಗದ ಕೃತಿಗಳನ್ನು 'ಕಲಾವಿದ ಕಾದಂಬರಿ' ಗಳೆಂದು ಗುರುತಿಸುತ್ತಾರೆ.

'ಓದುಗರ ಕುತೂಹಲವನ್ನು ತಣಿಸುವುದರ ಹೊರತಾಗಿ 'ಕಲಾವಿದ ಕಾದಂಬರಿ' ಗಳ ವೈಶಿಷ್ಟ್ಯವೇನು? ಅವು 'ಓದುಗರಿಗೆ ಯಾವ ರೀತಿ ಪ್ರಸ್ತುತ? ಈ ಸಾಹಿತ್ಯ ಪ್ರಭೇದವನ್ನು ವಿಸ್ತಾರವಾಗಿ ವಿಶ್ಲೇಷಿಸಿರುವ ಮಾರಿಸ್ ಬೀಬ್ ತನ್ನ "ಐವರಿ ಟವರ್ಸ್ ಆ್ಯಂಡ್ ಸೇಕ್ರೆಡ್ ಫೌಂಟ್ಸ್" ಗ್ರಂಥದಲ್ಲಿ ಹೀಗೆ ಹೇಳುತ್ತಾನೆ: (1) ಈ ಪ್ರಕಾರದ ಕಾದಂಬರಿಗಳು ಕಲಾವಿದನ ವ್ಯಕ್ತಿತ್ವದ ಬಗ್ಗೆ ಬೆಳಕು ಚೆಲ್ಲುತ್ತವೆ. (2) ಇವು ಕಲಾಕೃತಿ-ನಿರ್ಮಾಣದ ರೀತಿಯನ್ನು ಶೋಧಿಸುತ್ತವೆ. ಮತ್ತು (3) ಇವುಗಳಲ್ಲಿ ಕಲೆ-ಕಲಾವಿದ ಮತ್ತು ಸಮಾಜ-ಇವರ ಮಧ್ಯೆ ಇರುವ, ಇರಬೇಕಾದ ಜಟಿಲಸಂಬಂಧ ಗಳನ್ನು ಕುರಿತಾದ ಚಿಂತನೆ ಇರುತ್ತದೆ. ಈ ಕಾರಣಗಳಿಂದಾಗಿ 'ಕಲಾವಿದ ಕಾದಂಬರಿ' ಗಳು ಸಾಹಿತ್ಯಾಸಕ್ತರಿಗೇ ಅಲ್ಲದೆ ಇತರರಿಗೂ ಅತ್ಯಂತ ಪ್ರಸ್ತುತವೆಂದು ಮಾರಿಸ್ ಬೀಬ್ ವಾದಿಸುತ್ತಾನೆ. ಮೇಲೆ ಹೇಳಿದ ಮೂರು ವಿಷಯುಗಳನ್ನು ಸ್ಪಷ್ಟ ಪಡಿಸಲು ಬೀಬ್ ಅವುಗಳಿಗೆ ಮೂರು ರೂಪಕಗಳನ್ನು ಬಳಸುತ್ತಾನೆ: (1) ವಿಭಜಿತ ವ್ಯಕ್ತಿತ್ವ (2) ದಂತದ ಗೋಪುರ (3) ಪವಿತ್ರ ಕಾರಂಜಿ (Divided self, Ivory Tower, Sacred Fountain). ಈ ಪರಿಕಲ್ಪನೆಗಳನ್ನು ಈಗ ವಿಸ್ತಾರವಾಗಿ ನೋಡೋಣ.

(1) ವಿಭಜಿತ ವ್ಯಕ್ತಿತ್ವ-ಈ ಪರಿಕಲ್ಪನೆ ಕಲಾವಿದನಲ್ಲಾಗುವ ಸಂಘರ್ಷ ವನ್ನು ಸೂಚಿಸುತ್ತದೆ. ಕಲಾವಿದನೂ ಓರ್ವ ರಕ್ತ-ಮಾಂಸಗಳಿಂದ ಕೂಡಿದ ಮನುಷ್ಯ ಮತ್ತು ಇತರರಂತೆಯೇ ಸಮಾಜದ ಒಂದು ಅಂಗ. ಆದ್ದರಿಂದ ಇತರರಿಗಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನವ ಸಹಜ ವೈಯಕ್ತಿಕ ಹಾಗೂ ಸಾಮೂಹಿಕ ಬೇಡಿಕೆಗಳನ್ನು-ಅಂದರೆ ವೈಯಕ್ತಿಕವಾಗಿ ಆಹಾರ, ನಿದ್ರಾ, ಭಯ, ಮೈಥುನಗಳ ಅವಶ್ಯಕತೆಗಳನ್ನೂ ಸಾಮೂಹಿಕವಾಗಿ ಧಾರ್ಮಿಕ ಹಾಗೂ ಮತೀಯ ಕಟ್ಟುಕಟ್ಟಳೆಗಳನ್ನೂ-ಅವನು ಪೂರೈಸ ಬೇಕಾಗುತ್ತದೆ. ಆದರೆ ಅವನೊಬ್ಬ ಕಲಾವಿದನಾದ ಕಾರಣ ಅವನಲ್ಲಿರುವ ಕಲಾ ಸೃಷ್ಟಿಯ ಕ್ರಿಯೆ-ಪ್ರೇರಣೆ-ನಿಬಂಧನೆ ಇವುಗಳು ಅವನನ್ನು ಬೇರೆಯೇ ದಿಕ್ಕಿನಲ್ಲಿ ಎಳೆಯುತ್ತವೆ. ಈ ರೀತಿ ಪರಸ್ಪರ ವಿಭಿನ್ನ ಸೆಳೆತಗಳು ಮತ್ತು ತುಡಿತಗಳು ಕಲಾವಿದನ ವ್ಯಕ್ತಿತ್ವವನ್ನು ವಿಭಜಿಸುತ್ತವೆ. ಮತ್ತು ಆ ಕಾರಣದಿಂದಲೇ ಸಾಧಾರಣವಾಗಿ ಒಬ್ಬ ಮಹಾ ಕಲಾವಿದ ಸಮಾಜದ ದೃಷ್ಟಿಯಲ್ಲಿ ಉಚ್ಛೃಂಖಲನೂ ಕಲಾವಿದರಲ್ಲದವರ ದೃಷ್ಟಿಯಲ್ಲಿ ವಿಕ್ಷಿಪ್ತನೂ ಆಗಿ ಕಂಡು ಬರುತ್ತಾನೆ.

ಅಲ್ಲದೆ ಕಲಾವಿದನ ವ್ಯಕ್ತಿತ್ವ ಮತ್ತೂ ಒಂದು ರೀತಿಯ ದ್ವಂದ್ವಕ್ಕೆ ಸಿಕ್ಕಿ ವಿಭಜಿತವಾಗುತ್ತದೆ. ಈ ದ್ವಂದ್ವ, ಕಲಾವಿದ-ಸ್ತ್ರೀ ಇವರೊಳಗಿನ ನಿಗೂಢ ಸಂಬಂಧದ ಆಳದಲ್ಲಿದೆ. ಪ್ರತಿಯೊಬ್ಬ ಕಲಾವಿದನೂ ಅನಿವಾರ್ಯವಾಗಿ ಸ್ತ್ರೀ ಸಹವಾಸವನ್ನು ಬೇಡುತ್ತಾನೆ; ಆ ಸಹವಾಸದಿಂದ, ಅವಳ ಪ್ರೇಮ-ಪೋಷಣೆಗಳಿಂದ ಅವನಿಂದ ಕಲಾ ಸೃಷ್ಟಿ ಸಾಧ್ಯವಾಗುತ್ತದೆ. ಆದರೆ ಸ್ತ್ರೀ ಅವನ ಕಲಾ ಸೃಷ್ಟಿಯನ್ನು ಪೋಷಿಸುವಂತೆಯೇ ಅವನನ್ನು ಕಲೆಯಿಂದ ದೂರ ಮಾಡುತ್ತಾಳೆ. ಏಕೆಂದರೆ ಸ್ತ್ರೀ 'ತಾಯಿ' ಯೂ ಹೌದು ಮತ್ತು 'ಮಾಯಾವಿನಿ'ಯೂ ಹೌದು. ಆದ್ದರಿಂದ ತನ್ನ ಇಡೀ ಜೀವನ ಪರ್ಯಂತ ಕಲಾವಿದ ಬಿಡಿಸಲಾಗದ, ಪರಿಹರಿಸಲಾಗದ, ದ್ವಂದ್ವದಲ್ಲಿ ಸಿಕ್ಕಿ ನರಳುತ್ತಾನೆ: ಸ್ತ್ರೀಯ ಮೂಲಕವಲ್ಲದೆ ಸೃಷ್ಟಿ ಸಾಧ್ಯವಿಲ್ಲ ಮತ್ತು ಅದೇ ಸ್ತ್ರೀ ಸೃಷ್ಟಿ ಕ್ರಿಯೆಗೆ ತಡೆಯನ್ನೊಡ್ಡಬಹುದು. ಈ ವಿಧದ ಕಲಾವಿದ-ಸ್ತ್ರೀ ಪರಸ್ಪರ ಸಂಬಂಧ ಅತ್ಯಂತ ಕುತೂಹಲಕರ, ಜಟಿಲ ಮತ್ತು ರಹಸ್ಯಪೂರ್ಣ ಮಾನವ ಸಂಬಂಧ.

ಮತ್ತೆ 'ವಿಭಜಿತ ವ್ಯಕ್ತಿತ್ವ'ದ ಪರಿಕಲ್ಪನೆ ತನ್ನ ಕೃತಿಯಲ್ಲಿ ಕಲಾವಿದನನ್ನು ಸೃಷ್ಟಿಸುವ ಲೇಖಕನಿಗೂ ಅನ್ವಯಿಸುತ್ತದೆ. ಈ ದೃಷ್ಟಿಯಿಂದ 'ಕಲಾವಿದ ಕಾದಂಬರಿ' ಗಳನ್ನು 'ಸ್ವಾಭಿಮುಖ ಸಾಹಿತ್ಯ'ದ ಭಾಗವೆಂದೂ ನಾವು ಪರಿಗಣಿಸಬಹುದು. ತನ್ನ ಕೃತಿಯಲ್ಲಿ ಲೇಖಕ ತನ್ನ ವ್ಯಕ್ತಿತ್ವವನ್ನೇ ವಿಭಜಿಸಿ, ತಾನು ಸೃಷ್ಟಿಸಿದ ಕಲಾವಿದನ ಮೂಲಕ ತನ್ನನ್ನೇ ತಾನು ಪರೀಕ್ಷಿಸಿಕೊಳ್ಳಬಹುದು, ಸಮರ್ಥಿಸಿಕೊಳ್ಳಬಹುದು ಅಥವಾ ಆದರ್ಶೀಕರಿಸಿಕೊಳ್ಳಬಹುದು. ಅಲ್ಲದೆ, ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ಕಲೆಯ ಸ್ವರೂಪದ ಬಗ್ಗೆ ಮತ್ತು ಕಲೆ ಹಾಗೂ ಸಮಾಜ ಇವುಗಳ ಸಂಬಂಧದ ಬಗ್ಗೆ ಕೃತಿಯ ಮೂಲಕ ತನ್ನ ಮೀಮಾಂಸೆಯನ್ನು ಓದುಗರ ಮುಂದಿಡಬಹುದು. (2) (3) 'ದಂತದ ಗೋಪುರ' ಮತ್ತು 'ಪವಿತ್ರ ಕಾರಂಜಿ'-ಈ ಎರಡು ಪರಿಕಲ್ಪನೆಗಳು ಆದಿಯಿಂದಲೂ ಕಲೆ ಮತ್ತು ಸಮಾಜ ಇವುಗಳ ಪರಸ್ಪರ ಸಂಬಂಧವನ್ನು ಕುರಿತಾದ ಎರಡು ವಿಭಿನ್ನ ಪರಂಪರೆಗಳನ್ನು ಸೂಚಿಸುತ್ತವೆ. ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಂಪರೆ–ಇದನ್ನು ಅಭಿಜಾತ ಪರಂಪರೆ ಎನ್ನಬಹುದು–ಕಲಾವಿದ ದೈನಂದಿನ ಬದುಕಿನ ಜಂಜಾಟದಿಂದ ದೂರವಾಗಿ ತನ್ನದೇ ಆದ ಕಲ್ಪನಾ ಲೋಕದಲ್ಲಿ ಇರದ ಹೊರತು ಅವನಿಂದ ಕಲಾ ನಿರ್ಮಾಣ ಸಾಧ್ಯವಿಲ್ಲವೆಂದು ನಂಬುತ್ತದೆ. ಈ ದೃಷ್ಟಿಕೋನವನ್ನು 'ದಂತದ ಗೋಪುರ' ಎಂದು ಮಾರಿಸ್‌ಬೀಬ್ ಕರೆಯುತ್ತಾನೆ. ಮತ್ತೊಂದು ಪರಂಪರೆಯ ಪ್ರಕಾರ ಕಲಾವಿದನಲ್ಲಿ ಬದುಕಿನ ಬಗ್ಗೆ ಎಷ್ಟು ತೀವ್ರವಾದ ತುಡಿತವಿರುತ್ತದೆಯೋ ಮತ್ತು ಅವನು ತನ್ನ ಸುತ್ತಲಿನ ಜನಜೀವನದಲ್ಲಿ ಎಷ್ಟು ಆಳವಾಗಿ ಮುಳುಗಬಲ್ಲನೋ ಅಷ್ಟೇ ಉತ್ತಮ ಮಟ್ಟದ ಕಲಾಕೃತಿ ಅವನಿಂದ ನಿರ್ಮಾಣವಾಗುತ್ತದೆಂದು ನಂಬುತ್ತದೆ. ಈ ವಿಚಾರ ಕ್ರಮವನ್ನು ನಾವು "ರಮ್ಯ". (ರೋಮ್ಯಾಂಟಿಕ್) ಎಂದು ಗುರುತಿಸಬಹುದು. ಈ ಎರಡೂ ಪರಂಪರೆಗಳು ಎಲ್ಲಾ ಸಮಾಜಗಳಲ್ಲಿಯೂ ಯಾವಾಗಲೂ ಇರುತ್ತವೆ, ಮತ್ತು ಎರಡು ಪರಂಪರೆಗಳಲ್ಲಿಯೂ ನಾವು ಉತ್ತಮ ಕಲಾ ಸೃಷ್ಟಿಯಾಗಿರುವುದನ್ನು ಕಾಣಬಹುದು.

ಈಗ 'ಕಲಾವಿದ ಕಾದಂಬರಿ' ಪ್ರಕಾರದ ಅತ್ಯುತ್ತಮ ಪ್ರಾತಿನಿಧಿಕ ಕೃತಿಯಾಗಿರುವ ಆಂಗ್ಲ ಭಾಷೆಯ ಜಾಯ್ಸ್‌ನ ಕೃತಿಯನ್ನು ಈ ಪ್ರಭೇದದ ಸಾಧ್ಯತೆಗಳನ್ನು ತಿಳಿಯಲು ಸ್ವಲ್ಪ ವಿವರವಾಗಿ ನೋಡೋಣ.

ಐರಿಶ್ ಲೇಖಕ ಜೇಮ್ಸ್ ಜಾಯ್ಸ್‌ನಿಂದ 1916 ರಲ್ಲಿ ರಚಿಸಲ್ಪಟ್ಟ "ದ ಪೋರ ಟ್ರೆಟ್ ಆಫ್ ಆನ್ ಆರ್ಟಿಸ್ಟ್" ಕಾದಂಬರಿ ಸ್ಟೀಫನ್ ಡೆಡಲಸ್‌ನ ಪಾತ್ರವನ್ನು ಅವನ ಬಾಲ್ಯ ಮತ್ತು ವಿದ್ಯಾಭ್ಯಾಸದ ವಿವಿಧ ಹಂತಗಳನ್ನೂ ಸೇರಿದಂತೆ ಚಿತ್ರಿಸುತ್ತಾ ಅವನ ಪ್ರಥಮ ಕವಿತಾ ರಚನೆಯೊಂದಿಗೆ ಮುಕ್ತಾಯವಾಗುತ್ತದೆ. ಬಡ ಸಂಸಾರದಲ್ಲಿ ಹುಟ್ಟಿದ ಸ್ಟೀಫನ್ ಬುದ್ಧಿವಂತನಾದರೂ ತನ್ನ ಶಾಲೆಯ ದಿನಗಳಲ್ಲಿ ತನ್ನ ಉಪಾಧ್ಯಾಯರಾದ ಪಾದ್ರಿಗಳ ಕೈಯಲ್ಲಿ ಅವಹೇಳನ ಮತ್ತು ದೈಹಿಕ ಶಿಕ್ಷೆಗೆ ಗುರಿಯಾಗುತ್ತಾನೆ. ಆದರೆ ಅವನ ವಿದ್ಯಾಭ್ಯಾಸ ಮುಂದುವರಿದಂತೆ ಅವನ ಮೇಧಾ ಶಕ್ತಿಯನ್ನು ಗುರುತಿಸಿದ ಶಿಕ್ಷಕರು ಅವನನ್ನು 'ಜೆಸ್‌ವೀಟ್' ಮತೀಯ ಸಂಸ್ಥೆಗೆ ಸೇರುವಂತೆ ಪ್ರೇರೇಪಿಸುತ್ತಾರೆ. ಇಲ್ಲಿಂದ ಸ್ಟೀಫನ್‌ನ ಬೆಳವಣಿಗೆಯ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ಧಾರ್ಮಿಕ ಆಚರಣೆಗಳಲ್ಲಿ ಮತ್ತು ವಿಧಿನಿಯಮಗಳಲ್ಲಿ ಮುಳುಗಿರುವ ಸ್ಟೀಫನ್ ಒಂದು ಸಲ ವೇಶ್ಯಾಸಂಗವನ್ನು ಮಾಡುತ್ತಾನೆ. ಈ ಅನುಭವದಿಂದ ಅವನ ಪಾಪ ಪ್ರಜ್ಞೆ ಜಾಗೃತವಾಗಿ ಹಗಲೂ ರಾತ್ರಿ ಈ ಪಾಪ ಪ್ರಾಯಶ್ಚಿತ್ತಕ್ಕಾಗಿ ಪ್ರಾರ್ಥನೆ–ಪೂಜೆ ಇವುಗಳಲ್ಲಿ ತೊಡಗುತ್ತಾನೆ. ಆದರೆ ಈ ಪ್ರಾಯಶ್ಚಿತ್ತ ಕ್ರಮವೇ ಮತ್ತು 'ಪಾಪ'ದ ಧಾರ್ಮಿಕ ಕಲ್ಪನೆಯೇ ಕ್ರಮೇಣ ಅವನನ್ನು ಮತ ಮತ್ತು ಧರ್ಮಗಳಿಂದ ದೂರ ಮಾಡುತ್ತವೆ. ಇಲ್ಲಿಂದ ಅವನ ಬೆಳವಣಿಗೆ ಕೊನೆಯ ನಿರ್ಣಾಯಕ ಘಟ್ಟವನ್ನು ಮುಟ್ಟುತ್ತದೆ. ಅನೇಕ ದಿನಗಳ ಚಿಂತನೆಯ ಫಲವಾಗಿ ಸ್ಟೀಫನ್‌ಗೆ ಒಂದು ಸಲ ತನ್ನ ಬದುಕಿನ ಗುರಿ ಮತ್ತು ಉದ್ದೇಶ 'ಕಲೋಪಾಸನೆ'ಯಲ್ಲದೆ ಮತ–ಧರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲವೆಂದು ಅರಿವಾಗುತ್ತದೆ. "ಅನಂತ ಅನಾದಿ ಕಲ್ಪನಾ ಶಕ್ತಿಯ ಉಪಾಸಕ ನಾಗಲು" ನಿರ್ಧರಿಸಿ ತನ್ನ ಜೀವನದ ಪ್ರಥಮ ಕವಿತೆಯನ್ನು ರಚಿಸುತ್ತಾನೆ. ಅಲ್ಲದೆ ತನ್ನ ರಸ–ಸಿದ್ಧಾಂತಕ್ಕನುಗುಣವಾಗಿ ತನ್ನ ನಾಡನ್ನು ತ್ಯಜಿಸಿ ಆ ಕಾಲದಲ್ಲಿ ದೇಶ ಭ್ರಷ್ಟ ಕಲಾವಿದರೆಲ್ಲರ ಆಯ್ಕೆಯಾಗಿದ್ದ ಪ್ಯಾರಿಸ್‌ನಲ್ಲಿ ವಾಸಿಸಲು ನಿರ್ಧರಿಸುತ್ತಾನೆ. ಸ್ಟೀಫನ್‌ನ ಘೇಶತ್ಯಾಗ ನಿರ್ಧಾರ ಮತ್ತು ಧರ್ಮದ ಸ್ಥಾನದಲ್ಲಿ ಕಲೆಯ ಆಯ್ಕೆ– ಇವುಗಳಿಂದ ಕಾದಂಬರಿ ಮುಗಿಯುತ್ತದೆ.

ಈ ಕೃತಿಯಲ್ಲಿ ಜಾಯ್ಸ್ ಚಿತ್ರಿಸುವ ಕಲಾವಿದ ಏಕಾಕಿ ಮತ್ತು ಅಂತರ್ಮುಖಿ. ಪ್ರಾರಂಭದಿಂದಲೂ ಪರಂಪರೆಗೆ ವಿರುದ್ಧವಾದ ತನ್ನ ಸ್ವತಂತ್ರ ವೈಚಾರಿಕತೆಯಿಂದ ತನ್ನ ಸುತ್ತಲಿನ ಜನಗಳೊಡನೆ ಮತ್ತು ಧಾರ್ಮಿಕ ನಾಯಕರೊಡನೆ ವಿರೋಧವನ್ನು ಬೆಳೆಸಿಕೊಳ್ಳುತ್ತಾನೆ. ಅಂದರೆ ಸ್ಟೀಫನ್ ಧಾರ್ಮಿಕತೆಯನ್ನು ತ್ಯಜಿಸುತ್ತಾನೆಂದು ಅರ್ಥವಲ್ಲ;ಅವನಿಗೆ ಕಲೋಪಾರ್ಜನೆ ಮತ್ತು ಕಲೋಪಾಸನೆಗಳೇ 'ಧರ್ಮ'ವಾಗುತ್ತವೆ. ಜಾಯ್ಸ್‌ನ ದೃಷ್ಟಿಯಲ್ಲಿ ಕಲಾಸೃಷ್ಟಿಯ ತೀವ್ರತೆ ಎಷ್ಟು ಅಗಾಧವೆಂದರೆ ಅದಕ್ಕಾಗಿ ಕಲಾವಿದ ತನ್ನೆಲ್ಲವನ್ನೂ–ತನ್ನ ಕುಟುಂಬ, ಧರ್ಮ ದೇಶ, ಇವೆಲ್ಲವನ್ನೂ–ತ್ಯಜಿಸ ಬೇಕಾಗುತ್ತದೆ. ಜಾಯ್ಸ್‌ನ ಕಲಾವಿದ ಯಾವಾಗಲೂ ಪರದೇಶಿ, ಏಕಾಕಿ ಮತ್ತು ನಿರ್ಲಿಪ್ತ.

ಕಲಾವಿದ ಮತ್ತು ಅವನಿಂದ ನಿರ್ಮಾಣಗೊಂಡ ಕಲಾಕೃತಿ ಇವುಗಳ ನಡುವಣ ಸಂಬಂಧವನು ಕುರಿತು ಜಾಯ್ಸ್‌ನ ಕೃತಿ ತನ್ನದೇ ಆದ ಜಟಿಲ ಸೌಂದರ್ಯ— ಮೀಮಾಂಸೆಯನ್ನು ಒಳಗೊಂಡಿದೆ. ಸಂಕ್ಷೇಪವಾಗಿ ಹೇಳಬೇಕೆಂದರೆ, ಜಾಯ್ಸ್ 'ಸತ್ಯ' 'ಸೌಂದರ್ಯ' ಮತ್ತು 'ಕಲೆ' ಇವು ಮೂರನ್ನೂ ಒಂದುಗೂಡಿಸುತ್ತಾನೆ. ಮತ್ತು ಕಲಾಕೃತಿ ಕೊಡುವ ಅನುಭವ (Aestheticce experience) ಒಳ್ಳೆಯದು ಹಾಗೂ ಕೆಟ್ಟದು ಎಂಬ ನೈತಿಕ ಮಾನದಂಡದಿಂದ ಮುಕ್ತವಾಗಿರುತ್ತದೆ ಎಂದು ಘೋಷಿಸುತ್ತಾನೆ. ಏಕೆಂದರೆ ಅವನ ಚಿಂತನಾ ಕ್ರಮದಲ್ಲಿ ಕಲಾನುಭೂತಿ ಒಂದು 'ಸ್ಥಾಯೀ' (static) ಅನುಭವವಾದರೆ, ನೈತಿಕ ಮಾನದಂಡಗಳು ನಮ್ಮಲ್ಲಿ ಒಂದರ ಬಗ್ಗೆ ಅಪೇಕ್ಷೆ ಮತ್ತು ಮತ್ತೊಂದರ ಬಗ್ಗೆ ಜಿಗುಪ್ಸೆ ಉಂಟು ಮಾಡುವುದ ರಿಂದ ಅವು 'ಅಸ್ಥಾಯೀ' ಅಥವಾ 'ಗತಿಶೀಲ' (kinetic) ಅನುಭವಗಳು. ಆದ್ದರಿಂದ ಕಲಾಕೃತಿಯ ಅನುಭವ–ಅದರ ರಸಾನಂದ–ನೈತಿಕವೂ ಅಲ್ಲ, ಅನೈತಿಕವೂ ಅಲ್ಲ. ಅಂತೆಯೇ ಜಾಯ್ಸ್‌ನ ಕಲಾವಿದ ತನ್ನ ಕಲಾಕೃತಿಯಿಂದ ಸಂಪೂರ್ಣ ಹೊರಗು ಯುತ್ತಾನೆ. ಜಾಯ್ಸ್‌ನ ಶಬ್ದಗಳಲ್ಲಿ ಕಲಾವಿದ "ಸೃಷ್ಟಿಕರ್ತ ಪರಮಾತ್ಮನಂತೆ ತನ್ನ ಸೃಷ್ಟಿಯ ಹಿಂದೆ ಅಥವಾ ಅದರಿಂದ ದೂರದಲ್ಲಿ ಅಥವಾ ಅದರ ಹೊರಗೆ, ಅದೃಶ ವಾಗಿ, ಅಸ್ತಿತ್ವವಿಲ್ಲದೆ, ಇರುತ್ತಾನೆ. ಮತ್ತು ತನ್ನ ಸೃಷ್ಟಿಯನ್ನು ಕುರಿತು ನಿರಾಸಕ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಗಿ ತನ್ನ ಕೈಯುಗುರುಗಳನ್ನು ಚೂಪು ಮಾಡುತ್ತಾ (ಅಂದರೆ ದಿವ್ಯ ನಿರ್ಲಕ್ಷ್ಯ ದಿಂದ) ಇರುತ್ತಾನೆ."

ಜಾಯ್ಸ್‌ನ ಕಾದಂಬರಿಯನ್ನು ಇತರ ಆಂಗ್ಲ ಮತ್ತು ಫ್ರೆಂಚ್ ಕಲಾವಿದ ಕಾದಂಬರಿಗಳಿಗೆ ಹೋಲಿಸಿ ನೋಡಿದರೆ ಅವುಗಳ ನಿಲವುವಿಗಿಂತ ಜಾಯ್ಸ್‌ನ ನಿಲವು ಅಷ್ಟೇನೂ ಭಿನ್ನವಾಗಿಲ್ಲವೆಂದು ನಮಗರಿವಾಗುತ್ತದೆ. (ಇತರ ಕಾದಂಬರಿಗಳಿಗಿಂತ ಜಾಯ್ಸ್‌ನದು ಜಟಿಲ ಮತ್ತು ಪ್ರೌಢ ಕೃತಿ ಎನ್ನುವುದು ಬೇರೆಯ ವಿಷಯ). "ದ ಮೂನ್ & ಸಿಕ್ಸ್ ಪೆನ್ಸ್" ಮತ್ತು "ಲಸ್ಟ್ ಫಾರ್ ಲೈಫ್" ಕೃತಿಗಳ ಚಿತ್ರಕಾರರು, "ದಿ ಆ್ಯಗೊನಿ ಅಂಡ್ ದಿ ಎಕ್ಸ್‌ಟಸಿ"ಯ ಶಿಲ್ಪಿ "ಜೀನ್‌ಕ್ರಿಸ್ಟೋಫಿ"ಯ ಸಂಗೀತಕಾರ ಇವರೆಲ್ಲರೂ ಸ್ಟೀಫನ್ ಡೆಡಲಸ್‌ನಂತೆಯೇ ಏಕಾಕಿಗಳು ಮತ್ತು ಅಂತರ್ಮುಖಿಗಳು. ಆದರೆ ಸಮಾಜದೊಡನಿರುವ ಕಲಾವಿದನ ಸಂಬಂಧದಲ್ಲಿ ಮಾತ್ರ ನಾವು ಎರಡು ಪರ ಸ್ಪರ ವಿರುದ್ಧ ಧೋರಣೆಗಳನ್ನು ಕಾಣುತ್ತೇವೆ. ಸ್ಟ್ರಿಕ್‌ಲ್ಯಾಂಡ್ (ಪಾಲ್‌ಗಾಗಿನ್ ಕಲ್ಪಿತ ಪಾತ್ರ) ಸ್ಟೀಫನ್‌ನಂತೆಯೇ ಇದ್ದಕ್ಕಿದ್ದಂತೆಯೇ ಒಂದು ದಿನ ತನ್ನ ಕೆಲಸ, ಸಂಸಾರ, ಸಮಾಜ–ಇವೆಲ್ಲವನ್ನೂ ತ್ಯಜಿಸಿ ತಾಹಿತಿ ದ್ವೀಪಗಳಿಗೆ ಹೋಗುತ್ತಾನೆ. ಮತ್ತು ವ್ಯಾನ್‌ಗೋ (Van Gogh) ಜೀವನದುದ್ದಕ್ಕೂ ಸಮಾಜದಲ್ಲಿ ಹೊಂದಿ ಕೊಳ್ಳಲಾಗದೆ ನರಳುತ್ತಾನೆ. ಆದರೆ ಶಿಲ್ಪಿ ಮೈಕಲ್ ಎಂಜೆಲೊ ಮತ್ತು ಸಂಗೀತ ಕಾರ ಕ್ರಿಸ್ಟೋಫಿ ತಮ್ಮ ಸುತ್ತಲಿನ ಜನಜೀವನದಲ್ಲಿಯೇ ಹೆಚ್ಚು ಹೆಚ್ಚು ಬೆರೆತು ತಮ್ಮ ಬದುಕು ಮತ್ತು ಕಲೆ ಇವುಗಳನ್ನು ಒಂದಾಗಿ ಬೆಸೆಯುತ್ತಾರೆ.

* * * *

ಕನ್ನಡದಲ್ಲಿ 'ಕಲಾವಿದ ಕಾದಂಬರಿ' ಪ್ರಭೇದ ಕೇವಲ ಇಪ್ಪತ್ತನೆಯ ಶತ ಮಾನದ ಆವಿಷ್ಕಾರ. (ಈ ಸಂಗತಿಯ ಸಾಮಾಜಿಕ–ಸಾಂಸ್ಕೃತಿಕ ಒಳಧ್ವನಿಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸಿದ್ದೇನೆ.) ಅ. ನ. ಕೃಷ್ಣರಾಯರು 1934 ರಲ್ಲಿ ತಮ್ಮ "ಉದಯರಾಗ" ಕಾದಂಬರಿಯಿಂದ ಈ ಪ್ರಭೇದವನ್ನು ಕನ್ನಡಕ್ಕೆ ತಂದರು. ಮತ್ತು ಕೂಡಲೇ ಇಂತಹ ಕಾದಂಬರಿಗಳು ಅತ್ಯಂತ ಜನಪ್ರಿಯವಾದುವು. ಕುವೆಂಪುರವರನ್ನು ಬಿಟ್ಟರೆ ಉಳಿದ ಎಲ್ಲಾ ಹಿರಿಯ–ಕಿರಿಯ ಕನ್ನಡ ಕಾದಂಬರಿಕಾರರು ಒಂದಾದರೂ ಇಂತಹ ಕಾದಂಬರಿಯನ್ನು ರಚಿಸಿದ್ದಾರೆ. ಉದಾಹರಣೆಗೆ, ಈ ವರ್ಗದಲ್ಲಿ ಅ.ನ.ಕೃ.ಅವರ ಏಳೆಂಟು ಕಾದಂಬರಿಗಳಲ್ಲದೆ, ತರಾಸು ಅವರ "ಹಂಸಗೀತೆ", ಮಾಸ್ತಿಯವರ "ಸುಬ್ಬಣ್ಣ" ಕಾರಂತರ "ಮೊಗ ಪಡೆದ ಮನ", ಕೃಷ್ಣಮೂರ್ತಿ ಪುರಾಣಿಕರ "ಸನಾದಿ ಅಪ್ಪಣ್ಣ", ಕುಮಾರ ವೆಂಕಣ್ಣನವರ "ಬಣ್ಣದ ಮಾಲಿಂಗ", ಬೈರಪ್ಪನವರ "ಜಲಪಾತ", ನಾಗೇಗೌಡರ "ಧರೆಗಿಳಿದು ಬಂದ ಗಂಧರ್ವ" ಇತ್ಯಾದಿ ಕೃತಿಗಳು ಕಾಣ ಸಿಗುತ್ತವೆ. ನವೋದಯ ಕಾಲದಲ್ಲಿ ಈ ಪ್ರಕಾರ ಎಷ್ಟು ಬೇಗ ಜನಪ್ರಿಯವಾಯಿತೋ ಅಷ್ಟೇ ಬೇಗ ನವ್ಯ ಯುಗದಲ್ಲಿ ಕಣ್ಮರೆಯಾಯಿತು.

ನೂರಾರು ಕಾದಂಬರಿಗಳ ಲೇಖಕ ಅನಕೃ ಅವರು ಕಲಾವಿದರ ಜೀವನವನ್ನಾಧರಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ. "ಉದಯ ರಾಗ" ಚಿತ್ರಕಾರನ ಬದುಕನ್ನು ಚಿತ್ರಿಸಿದರೆ, "ಸಂಧ್ಯಾರಾಗ" ಮತ್ತು "ಮಿಯಾ ಮಲ್ಹಾರ್" ಸಂಗೀತಕಾರರನ್ನು, "ಸಾಹಿತ್ಯ ರತ್ನ" ಮತ್ತು ಅದರ ಮುಂದಿನ ನಾಲ್ಕು ಭಾಗಗಳು ಸಾಹಿತಿಯನ್ನು, "ಸಂಗ್ರಾಮ" ಶಿಲ್ಪಿಯನ್ನು ಮತ್ತು ಮಹತ್ವಾಕಾಂಕ್ಷೆಯ ಕೃತಿ "ನಟಸಾರ್ವಭೌಮ" ನಟನನ್ನು ಚಿತ್ರಿಸುತ್ತವೆ. ಈ ಕಾದಂಬರಿಗಳು ಬೇರೆ ಬೇರೆ ಕಲೆಗಳಿಗೆ ಸಂಬಂಧಿಸಿದ ಕಾರಣ ವೈವಿಧ್ಯಮಯವಾಗಿ ಕಂಡರೂ ಕಲೆಯ ಮತ್ತು ಕಲಾವಿದರ ಹೆಸರುಗಳು ಬೇರೆ ಬೇರೆಯಾಗುತ್ತವೆಯೇ ಹೊರತು ಪ್ರತಿಯೊಂದು ಕಾದಂಬರಿಯ ಹಂದರವೂ ಒಂದೇ ಆಗಿದೆ. ಪ್ರತಿಯೊಂದು ಕೃತಿಯ ನಾಯಕನೂ ಜನ್ಮತಃ ಸಿದ್ಧ ಕಲಾವಿದ. ಆದ್ದರಿಂದ ಕೃತಿಯು ಬೆಳೆಯುತ್ತಾ ಹೋದಂತೆ ಕಲಾವಿದ ಬೆಳೆಯುವ ಸಾಧ್ಯತೆಯೆ ಇರುವುದಿಲ್ಲ. ಮತ್ತೆ ಆ ಕಲಾ ಮಾಧ್ಯಮದ ಇತಿಮಿತಿಗಳನ್ನು ಕುರಿತೂ ಜಿಜ್ಞಾಸೆ ಇರುವುದಿಲ್ಲ. ಎಲ್ಲಾ ಕಾದಂಬರಿಗಳಲ್ಲಿಯೂ ನಾವು ಕಾಣುವುದೇನೆಂದರೆ ಹುಟ್ಟು ಕಲಾವಿದನಾದ ನಾಯಕ ಹೆಣ್ಣಿನ ಮೋಹಕ್ಕೆ ಸಿಕ್ಕಿ ತನ್ನ ಕಲೆಯನ್ನು ಮರೆಯುತ್ತಾನೆ. ಕೊನೆಗೆ ಇಲ್ಲವೆ ಆ ಹೆಣ್ಣಿನ ಮೋಹವನ್ನು ಗೆದ್ದು ಕಲೆಯಲ್ಲಿ ಸಿದ್ಧಿ ಪಡೆಯುತ್ತಾನೆ. ಇಲ್ಲಾ ಆ ಮೋಹದಿಂದ ಹೊರಬರಲಾಗದೆ ತನ್ನ ಕಲಾಪ್ರತಿಭೆಯನ್ನು ಸ್ಪಷ್ಟಪಡಿಸಿಕೊಂಡು ಸೋಲುತ್ತಾನೆ. "ಸಂಧ್ಯಾರಾಗ" ದಲ್ಲಿ ಹೆಣ್ಣಿನ ಮೋಹದ ಪ್ರಶ್ನೆ ಇಲ್ಲ ನಿಜ. ಆದರೆ ಕಥೆಯ ಬೆಳವಣಿಗೆಗೆ ನಾಯಕ ಸಂಗೀತಕಾರನೇ ಆಗ ಬೇಕೆಂದಿಲ್ಲ. ಅಥವಾ ಕಲಾವಿದನೂ ಆಗಬೇಕೆಂದಿಲ್ಲ. ಕರ್ನಾಟಕದ ವರನಟ ಶ್ರೀ ವರದಾಚಾರ್ಯರ ನಿಜ ಜೀವನವನ್ನಾಧರಿಸಿದ "ನಟಸಾರ್ವಭೌಮ" ಮಾತ್ರ ಮೇಲೆ ಹೇಳಿದ ಮಾತುಗಳಿಗೆ ಸ್ವಲ್ಪ ಹೊರತಾಗುತ್ತದೆ. ಅದರಲ್ಲಿ ರಾಜಾಚಾರ್ಯನ ಕಥೆಯೊಡನೆ ಕನ್ನಡ ರಂಗಭೂಮಿಯ ಬೆಳವಣಿಗೆಯ ಚಿತ್ರಣವೂ ಸ್ವಲ್ಪ ಮಟ್ಟಿಗೆ ಕಂಡು ಬರುತ್ತದೆ. ಅಲ್ಲದೆ ನಾಟಕ–ಮಾಧ್ಯಮದ ಸಾಧ್ಯತೆಗಳನ್ನು ಕುರಿತೂ ಕೃತಿ ಅಲ್ಲಲ್ಲಿ ಬೆಳಕು ಚೆಲ್ಲುತ್ತದೆ. ಇಷ್ಟಾದರೂ ಕಾದಂಬರಿಯ ಮೂಲ ಮಾತ್ರ ಬದಲಾಗುವುದಿಲ್ಲ: ವರನಟ–"ಮಾಯಾವಿ" ಹೆಣ್ಣಿನ ಮೋಹ–ಕಲಾವಿದನ ಅವನತಿ–ಮತ್ತೋರ್ವಳ ತ್ಯಾಗ ಮತ್ತು ಪ್ರೇಮದ ಕಾರಣ ಅವನ ಪುನರುತ್ಥಾನ–ಇದೇ ಜನಪ್ರಿಯ ಸೂತ್ರದ ಪುನರಾವೃತ್ತಿ.

ತರಾಸು ಅವರ "ಹಂಸಗೀತೆ" ಯಲ್ಲಿ ಕಲಾವಿದನ ಬೆಳವಣಿಗೆಯ ಚಿತ್ರವಿದ್ದರೂ ತರಾಸು ಅವರ ಅತಿ ಭಾವುಕತೆಯ ಕಾರಣದಿಂದ ಕಾದಂಬರಿ ಕಲೆಯನ್ನು ಕುರಿತು ಗಂಭೀರ ಪ್ರಶ್ನೆಗಳನ್ನೆತ್ತುವುದೇ ಇಲ್ಲ. ಇನ್ನಿತರ ಈ ವರ್ಗದ ಕಾದಂಬರಿಗಳೆಲ್ಲಾ ಹೆಚ್ಚು ಕಮ್ಮಿ ಅ.ನ.ಕೃ. ಅಚ್ಚಿನಲ್ಲಿ ಸಿದ್ಧವಾಗಿರುವವೇ. ಮಾಸ್ತಿಯವರ "ಸುಬ್ಬಣ್ಣ" ಒಂದು ಉತ್ತಮ ನೀಳ್ಗತೆಯಾದರೂ ಅದರಲ್ಲಿ ಒತ್ತು ಸುಬ್ಬಣ್ಣನ ವೈಯಕ್ತಿಕ ಜೀವನಕ್ಕೆ ಇದೆಯೇ. ಹೊರತು ಅವನ ಕಲಾಪ್ರಪಂಚಕ್ಕಲ್ಲ, ಈ ಪಾರ್ಶ್ವ ಭೂಮಿಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೋಡಿದಾಗಲೇ ನಮಗೆ ಕಾರಂತರ "ಮೊಗ ಪಡೆದ ಮನ" ಕೃತಿಯ ಸಾಧನೆ ಮತ್ತು ವೈಶಿಷ್ಟ್ಯಗಳ ಅರಿವಾಗುವುದು. ಕಾರಂತರ ಅನೇಕ ಕಾದಂಬರಿಗಳಲ್ಲಿ ವಿವಿಧ ಕಲಾವಿದರು ಕಾಣಬಂದರೂ ಕಲಾವಿದನನ್ನೇ ಮುಖ್ಯ ಪಾತ್ರವನ್ನಾಗಿ ಹೊಂದಿರುವ ಕಾದಂಬರಿ "ಮೊಗ ಪಡೆದ ಮನ." ಈ ಕೃತಿ ಒಬ್ಬ ನರ್ತಕನ ಬದುಕನ್ನು ಯಶಸ್ವಿಯಾಗಿ ಚಿತ್ರಿಸುತ್ತದಲ್ಲದೆ ತನ್ನದೇ ಆದ ಕಲಾವಿಮರ್ಶೆ ಮತ್ತು ರಸಮೀಮಾಂಸೆಯನ್ನು ನಮ್ಮ ಮುಂದಿಡುತ್ತದೆ.

"ಮೊಗ ಪಡೆದ ಮನ" ಕಾದಂಬರಿಯ ಕಥಾವಸ್ತು ಹೀಗಿದೆ: ಬಡಕುಟುಂಬದಲ್ಲಿ ಹುಟ್ಟಿದ ವ್ಯಾಸ ವಕೀಲನಾಗಬೇಕೆಂಬುದು ಅವನ ತಂದೆಯ ಇಚ್ಛೆ. ಆದರೆ ತಂದೆಯ ಅಕಾಲ ಮರಣದ ನಂತರ ವ್ಯಾಸ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೇ ಚಿಕ್ಕ-ಪುಟ್ಟ ಕೆಲಸಗಳಿಗೆ ಸೇರುತ್ತಾನೆ. ಆದರೆ ಮೊದಲಿನಿಂದಲೂ ಅವನಿಗೆ ರಂಗಭೂಮಿಯನ್ನು ಮತ್ತು ನೃತ್ಯ ಮಾಧ್ಯಮವನ್ನು ಕುರಿತು ಅತ್ಯಂತ ಆಸಕ್ತಿ ಮತ್ತು ಆಕರ್ಷಣೆಗಳಿರುತ್ತವೆ. ಅನಿರೀಕ್ಷಿತವಾಗಿ ಒಂದು ಸಲ ಪ್ರಸಿದ್ಧ "ಇಂದುಮತಿ ಮತ್ತು ಪಾರ್ಟಿ"ಯವರ ಪರಿಚಯವಾಗಿ ವ್ಯಾಸ ಆವರ ಗುಂಪನ್ನು ಸೇರಿ ನೃತ್ಯವನ್ನು ಶಾಸ್ತ್ರೀಯವಾಗಿ ಕಲಿಯುತ್ತಾನೆ. ಬಹುಬೇಗ ಅವನಲ್ಲಿ ಹುದುಗಿದ್ದ ನೃತ್ಯ ಪ್ರತಿಭೆ ಬೆಳಕಿಗೆ ಬಂದು ಅವನು 'ಇಂದುಮತಿ ಸಂಸ್ಥೆ'ಯ ಪ್ರಮುಖ ನರ್ತಕನಾಗುತ್ತಾನೆ. ಇಂದುಮತಿ ತನ್ನ ಸಂಸ್ಥೆಯನ್ನು ಒಡೆದು ಸಿನಿಮಾ ಪ್ರಪಂಚವನ್ನು ಸೇರಿದ ಮೇಲೆ ಫ್ರೆಂಚ್ ಕಲಾವಿದೆ ಮ್ಯಾಡಮ್ ಟುಬಾಳೊಡನೆ ತನ್ನದೇ ಆದ ನೃತ್ಯ ಶಾಲೆಯನ್ನು ಮುಂಬಯಿಯಲ್ಲಿ ವ್ಯಾಸ ತೆಗೆಯುತ್ತಾನೆ ಆದರೆ ಬಹುಬೇಗ ಪ್ರೇಕ್ಷಕರ ಕೀಳು ಅಭಿರುಚಿಯಿಂದಾಗಿ ತನ್ನ ಆದರ್ಶಗಳಿಗೆ ಒಂದು ರೂಪು ಕೊಡಲಾಗದೆ, ಸೋತು, ಆ ನೃತ್ಯ ಶಾಲೆಯನ್ನು ಮುಚ್ಚಿ ಉಡುಪಿಗೆ ಮರಳುತ್ತಾನೆ. ಅಲ್ಲಿ "ಮರಳಿ ಮಣ್ಣಿಗೆ"ಯ ಪಿಟೀಲು ಕಲಾವಿದ ರಾಮುನ ಪರಿಚಯವಾಗಿ ಅವನ ಸಹಕಾರದಿಂದ ಒಂದು ಚಿಕ್ಕ ಶಾಲೆಯನ್ನು ತೆಗೆದು ಮಕ್ಕಳಿಗೆ ನೃತ್ಯ ಕಲೆಯನ್ನು ಹೇಳಿಕೊಡುತ್ತಾ ತನ್ನ ಬದುಕನ್ನು ಮುಂದುವರಿಸುತ್ತಾನೆ.

ಕಾದಂಬರಿಯುದ್ದಕ್ಕೂ ಕಾರಂತರು ಶೋಧಿಸುವ ಪ್ರಶ್ನೆಗಳಲ್ಲಿ ಮುಖ್ಯವಾದುವು ಇವು: (1) ಕಲಾವಿದನೆಂದರೆ ಯಾರು? (2) ಕಲಾಸೃಷ್ಟಿ ಹೇಗಾಗುತ್ತದೆ? (3) ಮತ್ತು ಕಲೆ ಹಾಗೂ ಸಮಾಜ ಇವುಗಳ ಪರಸ್ಪರ ಕೊಡುಕೊಳ್ಳುವಿಕೆ ಹೇಗೆ ಇರಬೇಕು?

(1) ಕಾರಂತರ ದೃಷ್ಟಿಯಲ್ಲಿ ಜನ್ಮಸಿದ್ಧ ಪ್ರತಿಭೆಯಿಲ್ಲದಿದ್ದರೆ ಬರೀ ಪಾಂಡಿತ್ಯ ಹಾಗೂ ವ್ಯಾಸಂಗಗಳು ಒಬ್ಬನನ್ನು ಕಲಾವಿದನನ್ನಾಗಿ ಮಾಡಲಾರವು. ಕ್ರಮವಾದ ಅಭ್ಯಾಸ ಕಲಾವಿದನಿಗೆ ಅವಶ್ಯಕ ನಿಜ-ಆದರೆ ಅಭ್ಯಾಸದಿಂದಲೇ ಯಾರೂ ಶ್ರೇಷ್ಠ ಕಲಾವಿದನಾಗಲು ಸಾಧ್ಯವಿಲ್ಲ. ಕಾದಂಬರಿಯ ಪ್ರಾರಂಭದಲ್ಲಿ ಬರುವ ವ್ಯಾಸನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನಸುಗಳ ಮೂಲಕ ಕಾರಂತರು ಈ ಅಂಶವನ್ನು ನಮಗೆ ಮನಗಾಣಿಸುತ್ತಾರೆ. ಮುಂದೆ 'ಹ್ಯಾಮ್ಲೆಟ್' "ಒಥೆಲೊ" ಮುಂತಾದ ನಾಟಕಗಳು ವ್ಯಾಸನನ್ನು ತೀವ್ರವಾಗಿ ಪ್ರಚೋದಿಸುತ್ತವೆ. ನಾಟಕಗಳನ್ನು ನೋಡುತ್ತಿರುವಾಗಲೂ ವ್ಯಾಸನೂ ಅವುಗಳ ಚೌಕಟ್ಟಿನಿಂದ ಹೊರಹೋಗಿ ಆ ಮಾಧ್ಯಮದ -ರಂಗಭೂಮಿಯ -ಅಭಿವ್ಯಕ್ತಿಯ ಸಾಧ್ಯತೆಗಳನ್ನು ಕುರಿತು ಆಳವಾಗಿ ಚಿಂತಿಸುತ್ತಿರುತ್ತಾನೆ. ಚಾರ್ಲಿ ಚಾಪ್ಲಿನ್ ನನ್ನು ಆದರ್ಶವಾಗಿಟ್ಟುಕೊಂಡ ವ್ಯಾಸನಿಗೆ ನರ್ತನ ಕಲೆಯನ್ನು ತನ್ನ ಬದುಕಿನ ಗುರಿಯಾಗಿ ಆರಿಸುವುದರ ಮೊದಲೇ "ಮನುಷ್ಯ ಜಗತ್ತಿನ ಕೊರಗನ್ನು ಕಂಡು ತನಗಾಗುವ ನೋವನ್ನು ತಾನೂಸಹ ಚಾರ್ಲಿಯಂತೆ ಬಡಜಗತ್ತಿನ ಎದೆಯ ಮೇಲೆ ಚುಚ್ಚಿ ಬರೆಯ ದಿದ್ದರೆ ಪ್ರಯೋಜನವೇನು?" ಎನಿಸುತ್ತಿರುತ್ತದೆ.

ಅಲ್ಲದೆ, ಕಾರಂತರ ದೃಷ್ಟಿಯಲ್ಲಿ, ಕಲಾವಿದ ಇತರರಿಗಿಂತ ಭಿನ್ನನಾದ ವ್ಯಕ್ತಿ. ತನ್ನ ಗೆಳೆಯರೆಲ್ಲಾ ಆಟಪಾಟಗಳಲ್ಲಿ ಮಗ್ನರಾಗಿರುವಾಗ ವ್ಯಾಸ ಒಬ್ಬನೇ ಪುಸ್ತಕ ಗಳನ್ನು ಓದುತ್ತಾ ಗ್ರಂಥಾಲಯದಲ್ಲಿರುತ್ತಾನೆ, ಅಥವಾ ಸಮುದ್ರ ತೀರಕ್ಕೆ ಹೋಗಿ ಬಹುಕಾಲ ಸಮುದ್ರದ ಅಲೆಗಳನ್ನು ನೋಡುತ್ತಾ ಸೃಷ್ಟಿಯ ರಹಸ್ಯ ಮತ್ತು ಅರ್ಥ ಇವುಗಳನ್ನು ಕುರಿತು ಗಂಭೀರವಾಗಿ ಚಿಂತಿಸುತ್ತಾನೆ. ಮತ್ತೆ ಅವನ ಕಲಾಭಿರುಚಿಯೂ ಶ್ರೇಷ್ಠ ರೀತಿಯದು. ಇಂದುಮತಿಯ ನೃತ್ಯವನ್ನು ಮೊದಲನೆಯ ಬಾರಿ ಮುಂಬಯಿ ಯಲ್ಲಿ ನೋಡುವಾಗ ಇತರ ಸಭಿಕರೆಲ್ಲರೂ ಅವಳ ದೇಹಸೌಂದರ್ಯ, ಒನಪು-ವಯ್ಯಾರ ಗಳಿಗೆ ಮರುಳು ಹೋದರೆ ವ್ಯಾಸನ ಮನಸ್ಸು ಅವರ ಕೀಳು ಅಭಿರುಚಿಗೆ ಜಿಗುಪ್ಸೆ ತಾಳುತ್ತದೆ. ಕಲಾಭಿವ್ಯಕ್ತಿಯೆಂದರೆ ಲೈಂಗಿಕ ಪ್ರಚೋದನೆಯೇ ಎಂದು ಅವನು ಆಲೋ ಚಿಸುತ್ತಾನೆ.

ಕಾರಂತರು ಮಾರಿಸ್ ಬೀಬ್ ಹೇಳುವ ಕಲಾವಿದನ 'ವಿಭಜಿತ ವ್ಯಕ್ತಿತ್ವ' ವನ್ನು ಅತ್ಯಂತ ಸಫಲವಾಗಿ ಗುರುತಿಸುತ್ತಾರೆ. ಕಲಾವಿದನೂ ಮನುಷ್ಯನೇ ಆದ್ದರಿಂದ ಮಾನವ ಸಹಜ ಸೆಳೆತಗಳು ಅವನಿಗೂ ಇರುತ್ತವೆ. ಕಾರಂತರು ಕಲಾವಿದನ ಇಡೀ ಬದುಕನ್ನು 'ಅಸಿಧಾರಾವ್ರತವೆನ್ನುತ್ತಾರೆ. ಕೃತಿಯಲ್ಲಿ ಮ್ಯಾಡಮ್‌ಟುಬಾ ಒಂದು ಕಡೆ ಹೀಗೆ ಹೇಳುತ್ತಾಳೆ: "ನಮ್ಮ ಜಾತಿ ದುರ್ಬಲ ಮನಸ್ಸಿನ ಜಾತಿ ಈ ಜೀವನದ ಬೆಳ ವಣಿಗೆ ಭಾವನಾಲೋಕದ್ದು. ಭಾವನೆ ಹೆಚ್ಚದೆ, ಅತಿಯಾಗದೇ ಕಲಾವಿದ ಬದುಕಲಾರ. ಆದರೆ ಅದೇ ಶಕ್ತಿಯೆ ನಮ್ಮೆಲ್ಲರ ಮನಸ್ಸಿನ ದೌರ್ಬಲ್ಯಕ್ಕೂ ಕಾರಣವಾಗಿದೆ. ನಾವು ಕ್ಷಣದಲ್ಲಿ ಮೋಹಪರವಶರಾಗುತ್ತೇವೆ. ಭಾವ ಭ್ರಮಿಷ್ಠರಾಗುತ್ತೇವೆ. ಇದರಿಂದ ವಿವೇಕ,ಸತ್ಯ ಎರಡೂ ದೂರಸರಿಯುತ್ತವೆ."ಈ ಅರಿವಿರುವ ಮ್ಯಾಡಮ್ ಟುಬಾ ಸ್ವತಃ ತನ್ನ ದುರ್ಬಲ ಮನಸ್ಸಿನ ಕಾರಣದಿಂದ ಬದುಕಿನಲ್ಲಿ ತುಂಬಾ ದುಃಖ ಪಡುತ್ತಾಳೆ. ವ್ಯಾಸನೂ ಒಂದು ಸಲ "ಮೋಹ ಪರವಶತೆ"ಯಲ್ಲಿ ದಾರಿ ತಪ್ಪುತ್ತಾನೆ. ಆದರೆ ಕೂಡಲೆ ಎಚ್ಚರಗೊಂಡು ಇಂದು ಮತಿಯ ಮೋಹದಿಂದ ಮುಕ್ತನಾಗುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲೆ–ಕಲಾಭಿವ್ಯಕ್ತಿ ಇವುಗಳನ್ನು ಕುರಿತಾದ ಭಾರತೀಯರ ಪರಂಪರಾಗತ ಹಾಗೂ ಸಾಂಪ್ರದಾಯಿಕ ಧೋರಣೆಗಳ ವಿರುದ್ಧ ಕಾರಂತರು ಯಾವಾಗಲೂ ಸಿಡಿದೇಳುತ್ತಾರೆ. ಕಾದಂಬರಿಯಲ್ಲಿ ಮೊದಲಿನಿಂದ ಕೊನೆಯವರೆಗೂ ವ್ಯಾಸ ಭಾರತೀಯರ ಸಾಂಪ್ರದಾಯಿಕತೆಯವಿರುದ್ಧ-ಕಾರಂತರಂತೆ-ಬಂಡಾಯವನ್ನೇ ನಡೆಸುತ್ತಾನೆ. ಪರಂಪರಾಗತ ನೃತ್ಯ ಪ್ರಕಾರಗಳಿಂದ ಬೇಸತ್ತ ಅವನು ಭಾರತೀಯ ನೃತ್ಯ ಕಲೆ ಎಂದಾದರೂ ಆನಾ ಪಾವ್ಲೋವಾಳ (pavlova) ಸಾಧನೆಯನ್ನು ಮುಟ್ಟಲು ಸಾಧ್ಯವೆ? ಎಂದು ಕೊರಗುತ್ತಾನೆ, "ನಿಮ್ಮ ಮಾರ್ಗಪದ್ಧತಿಯ ನೃತ್ಯಗಳಲ್ಲಿ ಅದು (Rhythm) ಪ್ರಧಾನ ಸಾಧನವಲ್ಲ. ಇದ್ದುದೂ ಮೂಲೆ ಪಾಲಾಗಿದೆ. ಪ್ರತಿಯೊಂದನ್ನೂ ಹಾವ ಭಾವಗಳಾಗಿ ವಿಂಗಡಿಸಿ, ಮಾತನಾಡುವ ಭಾಷೆಯಂತೆ ಎರಕ ಹೊಯ್ಯುತ್ತಾರೆ. ಈ ಎರಕದಿಂದಾಗಿ ಸೃಷ್ಟಿಕಾರನಿಗೆ ಅಧಿಕ ಸ್ವಾತಂತ್ರ್ಯ ಸಿಕ್ಕುವುದಿಲ್ಲ" ಎಂದು ಒಂದು ಕಡೆ ವ್ಯಾಸನೊಡನೆ ಫ್ರೆಂಚ ನರ್ತಕಿ ಮ್ಯಾಡಮ್ ಟುಬಾ ಹೇಳುತ್ತಾಳೆ. ಅವಳೇ ಮತ್ತೊಂದು ಕಡೆ ಕಾರಂತರ ಧ್ವನಿಯಾಗಿ ಹೀಗೆ ಹೇಳುತ್ತಾಳೆ. "ನಿಮ್ಮ ದೇಶದಲ್ಲಿ ಕಸಬುಗಾರಿಕೆಯೇ ಕಲೆಯಾಗಿದೆ. ಶಾಸ್ತ್ರವೇ ದೇವರಾಗಿದೆ." ಹಲವು ಬಾರಿ ಸಂಪ್ರದಾಯದಿಂದ ಬಂದ ಶೈಲಿ ಆತ್ಮವಿಕಾಸಕ್ಕೊಂದು ಬಂಧನವಾಗಿ ಬಿಡುತ್ತದೆ. "ಕಲಾವಿದ ಯಾವಾಗಲೂ ಅನ್ವೇಷಕನಾಗಿರಬೇಕು–ಹೊಸ ಹೊಸ ಪ ಯೋಗಗಳನ್ನು ಮಾಡುತ್ತಲೇ ಇರಬೇಕು. ಅಂತೆಯೇ ವ್ಯಾಸ, ಕೃತಿಯ ಕೊನೆಯಲ್ಲಿ ನೃತ್ಯ ಕಲೆಯನ್ನು ವೈಯಕ್ತಿಕ ನೆಲೆಯಿಂದ ಸಾಮೂಹಿಕ ನೆಲೆಗೆ ಒಯ್ಯುವ ಪ್ರಯತ್ನದಲ್ಲಿ ಪಾಶ್ಚಿಮಾತ್ಯ ಬ್ಯಾಲೆಯಂತೆ "ಸಾಗರ ಮಿಲನ" ವೆಂಬ ಸಾಮೂಹಿಕ ನೃತ್ಯ ಪ್ರಕಾರವನ್ನು ಸಿದ್ಧಗೊಳಿಸುತ್ತಾನೆ

ಇಲ್ಲಿಯತನಕ ವಿವರಿಸಿದ ವಿಚಾರಗಳು'ರೊಮ್ಯಾಂಟಿಕ್' ಎಂದು ನಮಗನಿಸಿದರೆ. ಕಾರಂತರ ಕಲಾಸೃಷ್ಟಿಯನ್ನು ಕುರಿತಿರುವ ಅಭಿಪ್ರಾಯವನ್ನು ಗಮನಿಸಿದಾಗ ಈ ಅನಿಸಿಕೆ (ಅಂದರೆ ಅವರು ಅಭಿಜಾತ ಮಾರ್ಗವನ್ನು ವಿರೋಧಿಸುತ್ತಾರೆಂಬ ಅನಿಸಿಕೆ) ಇನ್ನೂ ಖಚಿತವಾಗುತ್ತದೆ. ಈ ಸಂದರ್ಭದಲ್ಲಿ ಕಾರಂತರು ವರ್ಡ್ಸ್‌ವರ್ತ್‌ನ ವಿಚಾರ ಕ್ರಮವನ್ನು ಸಂಪೂರ್ಣ ಒಪ್ಪಿಕೊಂಡಿದ್ದಾರೆಯೇ ಎಂಬ ಸಂದೇಹ ನಮ್ಮಲ್ಲೇಳುತ್ತದೆ. ವ್ಯಾಸನ ಸಫಲ 'ಮಯೂರ ನೃತ್ಯ'ದ ಸೃಷ್ಟಿ ಹೀಗಾಗುತ್ತದೆ: ಮೊದಲು ಅವನು ಹಲಸಂಗಿಯಲ್ಲಿ ಮಯೂರಿಗಳ ನೃತ್ಯವನ್ನು ಪ್ರತ್ಯೇಕವಾಗಿ ನೋಡುತ್ತಾನೆ. ಆ ಅನುಭವ ಎಷ್ಟು ತೀವ್ರವಾಗಿ ಅವನನ್ನು ತಟ್ಟುತ್ತದೆಯೆಂದರೆ ಆ ಪ್ರತ್ಯಕ್ಷ ಅನುಭವದ ಕಾವಿನಲ್ಲಿ ಅವನು ಕರಗಿ ಹೋಗುತ್ತಾನೆ. ಕೆಲವು ದಿನಗಳಾದ ಮೇಲೆ ಆ ಅನುಭವವನ್ನು ಮತ್ತೆ ಮತ್ತೆ ಮೆಲಕುಹಾಕುವಾಗ ವ್ಯಾಸನಿಗೆ ನೃತ್ಯ ಮಾಧ್ಯಮದ ಮೂಲಕ ರಂಗಮಂಚದ ಮೇಲೆ ಪ್ರೇಕ್ಷಕರಿಗೆ ತನ್ನ ಅನುಭವವನ್ನು ತಲಪಿಸುವುದರ ಬಗ್ಗೆ ಚಿಂತನೆ ಶುರುವಾಗುತ್ತದೆ. ಈ ಸಂದರ್ಭದಲ್ಲಿ ಇಡೀ ನೃತ್ಯವನ್ನು ಒಂದೊಂದೇ ಭಾಗಗಳಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಂಗಡಿಸಿ ಅದಕ್ಕೆ ತಕ್ಕಂತೆ ಅಭಿವ್ಯಕ್ತಿ ಕ್ರಮವನ್ನು ಶೋಧಿಸುತ್ತಾ ಹೋಗುತ್ತಾನೆ. ಕೊನೆಗೆ ಸತತ ಚಿಂತನೆ –ಅಭ್ಯಾಸ ಇವುಗಳ ಮೂಲಕ ಅವನ 'ಮಯೂರ ನೃತ್ಯ' ಸಿದ್ಧವಾಗುತ್ತದೆ. ವರ್ಡ್ಸ್‌ವರ್ತ್ ಕವಿಯುಕಾವ್ಯದ ಬಗ್ಗೆ ಕೊಡುವ ವ್ಯಾಖ್ಯೆಯೂ ಈ ಕ್ರಮವನ್ನೇ ವಿಶದ ಪಡಿಸುತ್ತದೆ: "Poetry takes its origin in emotion recollected in tranquility."—ಅಂದರೆ ಪ್ರಾರಂಭದಲ್ಲಿ ತೀವ್ರವಾದ ಪ್ರತ್ಯಕ್ಷ ಅನುಭವ– ಅನಂತರ ಅದರ ನೆನಪು –ಆ ನೆಪಿನನ ಮೂಲಕ ಅನುಭವದ ಪುನಃಸೃಷ್ಟಿ –ಮತ್ತೆ ಕಲಾಕೃತಿಯ ಸೃಷ್ಟಿ(Experience–recollection–recrudescence creation).

ಕೊನೆಯದಾಗಿ ಕಲೆ ಮತ್ತು ಕಲಾವಿದ ಹಾಗೂ ಸಮಾಜ– ಇವುಗಳನ್ನು ಕುರಿತು ಕಾರಂತರು ಏನು ಹೇಳುತ್ತಾರೆದು ನೋಡೋಣ. ಇಲ್ಲಿಯೂ ಕಾರಂತರ ವಿಚಾರಗಳಿಗೂ ವರ್ಡ್ಸ್‌ವರ್ತನ ವಿಚಾರಗಳಿಗೂ ಬಹಳಷ್ಟು ಸಾಮ್ಯತೆ ಇದೆ. (ಇಲ್ಲಿ ನಾನು 'ಸಾಮ್ಯತೆ'ಯನ್ನು ಗುರುತಿಸುತ್ತಿದ್ದೇನೇ ಹೊರತು 'ಪ್ರಭಾವ' ಅಥವಾ 'ಅನುಕರಣ'ವನ್ನು ಕುರಿತಲ್ಲ). ವ್ಯಾಸನು ಅನೇಕ ಬಾರಿ ಆಲೋಚಿಸುವಂತೆ ಕಲಾ ವಿದನು ದೇವದೇವತೆಗಳನ್ನಲ್ಲದೆ ಜನಸಾಮಾನ್ಯರನ್ನು ತನ್ನ ಮಾಧ್ಯಮದ ಕೇಂದ್ರವನ್ನಾ ಗಿಟ್ಟುಕೊಳ್ಳಬೇಕು –ಮೂಕ ಜನತೆಯ ಮುಖವಾಗಬೇಕು. ವ್ಯಾಸನೇ ಒಂದು ಕಡೆ ಕಾರಂತರ ವಿಚಾರಗಳನ್ನು ಹೀಗೆ ಮಂಡಿಸುತ್ತಾನೆ.: "ಕಾವ್ಯವಿರಲಿ, ಕಲೆಯಿರಲಿ, ದಿನ ಬೆಳಗು ಕಾಣಿಸುವ ಈ ಮಾನವತೆಯ ನೋವು, ನಲಿವುಗಳನ್ನು ಚಿತ್ರಿಸುವ ಕೆಲಸ ಮಾಡಬೇಡವೇ? ಕೃಷ್ಣ ರಾಧೆಯರ ಪ್ರಸಂಗವೇ ಕಲಾಸೇವೆಗೆ ಬೇಕೇ?....ದೇವರೇ ಜನತೆ ಯಾದರೆ ಜನತಾ ಸೇವೆಯೇ ಕಲಾ ಸೇವೆಯಾದರೆ ಆಗ ತನ್ನಂತೆಯೇ ದೇವರ ಸೇವೆ ಕಲಾಸೇವೆಯಾಗುತ್ತದೆ." ಈ ಕಾರಣದಿಂದಲೇ ವ್ಯಾಸ ಭರ್ಜರಿ ಉಡುಗೆ–ತೊಡುಗೆ ಗಳನ್ನೂ ಇತರ ನರ್ತನ ಪರಿಕರಗಳನ್ನೂ ನಿರರ್ಥಕವೆಂದು ಭಾವಿಸುತ್ತಾನೆ. "ಇಸಾ ಡೋರಾ ಡಂಕನ್ ದೊಡ್ಡ ಕಲಾವಿದೆ. ಅವಳ ಕಲೆಗೆ ಕೃತಕ ಸಹಾಯ ಬೇಕೆನಿಸಲಿಲ್ಲ" –ಎಂದು ಮತ್ತೊಂದು ಸಲ ವಿಚಾರ ಮಾಡುತ್ತಾನೆ. ಸಾಮಾನ್ಯ ಜನತೆಯನ್ನು ಕುರಿತು ಸಾಮಾನ್ಯ ಜನತೆಗೆ ಅವರ ಅನುಭವಗಳ ಮೂಲಕ ಅರಿವನ್ನು ಕೊಡುವುದೇ ಕಾರಂತರ ದೃಷ್ಟಿಯಲ್ಲಿ ಕಲೆ. ಅಂದರೆ, ಮಾರಿಸ್ ಬೀಬ್ ಹೇಳುವ 'ದಂತದ ಗೋಪುರ' ಮತ್ತು 'ಪವಿತ್ರ ಕಾರಂಜಿ' ಇವುಗಳಲ್ಲಿ ಖಂಡಿತವಾಗಿಯೂ ಕಾರಂತರು 'ದಂತದ ಗೋಪುರ' ದಲ್ಲಿರಲು ಇಚ್ಛಿಸುವುದಿಲ್ಲ.

ಇಲ್ಲಿ ಗಮನಿಸಬೇಕಾದ ಒಂದು ವಿಷಯವೆಂದರೆ ಸಾಂಪ್ರದಾಯಿಕತೆಯ ಮತ್ತು ಪರಂಪರೆಯ ವಿರುದ್ಧ ಸದಾಹೋರಾಡುತ್ತಾ ಕಲಾಭಿವ್ಯಕ್ತಿಯಲ್ಲಿ ಯಾವಾಗಲೂ ನೂತನ ಹಾಗೂ ಸ್ವತಂತ್ರ ಮಾರ್ಗಗಳನ್ನು ಅರಸಬೇಕೆನ್ನುವ ಕಾರಂತರು ತಮ್ಮ ವೈಚಾರಿಕತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಲ್ಲಿರುವ ಪರಸ್ಪರ ವಿರೋಧೀ ನಿಲುವುಗಳಿಗೆ ಲಕ್ಷ್ಯ ಕೊಟ್ಟಂತೆ ತೋರುವದಿಲ್ಲ– ಇಲ್ಲಿಯೂವರ್ಡ್ಸ್‌ವರ್ತ್ ಮತ್ತು ಇತರ ರೊಮ್ಯಾಂಟಿಕ್ ಸಾಹಿತಿಗಳಂತೆ ರಾಧಾಕೃಷ್ಣರ ಅಥವಾ ರಾಮರಾವಣರ ಕಥೆಗಳು ತುಂಬಾ ಹಳತಾಗಿರಬಹುದು–ಆದರೆ ಅವು ಚಿರಂತನ ಸಂಕೇತಗಳಂತೆ ಅತ್ಯಂತ ನೇರವಾಗಿ ಸಾಮಾನ್ಯ ಜನತೆಗೆ ಅನೇಕ ಮುಖ್ಯ ಭಾವನೆ— ಅನುಭವಗಳನ್ನು ತಲುಪಿಸುತ್ತವೆ. ಕಲಾವಿದ ಅವನ್ನು ಪರಂಪರಾಗತವೆಂದು ಕೈ ಬಿಟ್ಟರೆ ಅವುಗಳ ಸ್ಥಾನದಲ್ಲಿ ತನ್ನದೇ ಆದ ನೂತನ ಸಂಕೇತಗಳನ್ನು –ಅಂದರೆ ಅಭಿ ವ್ಯಕ್ತಿ ಸಾಧನಗಳನ್ನು –ನಿರ್ಮಿಸಿಕೊಳ್ಳಬೇಕಾಗುತ್ತದೆ. ಹಾಗೆ ನಿರ್ಮಿಸಿಕೊಂಡಾಗ ಅವನು ಸಾಮಾನ್ಯ ಜನತೆಯಿಂದ ದೂರವಾಗಿ, ಅವನ ಕಲೆ ಕೇವಲ "ಶಿಷ್ಟ ಜನರ" ಸೊತ್ತಾಗುತ್ತದೆ. ಮತ್ತೆ ಕಲಾವಿದ ಸಾಮಾನ್ಯ ಜನತೆಯನ್ನು ಮುಟ್ಟುವುದು ಹೇಗೆ? ಕಾದಂಬರಿಯಲ್ಲಿ 'ರಾಧಾಕೃಷ್ಣ'ರ ನೃತ್ಯಕ್ಕೆ ಪ್ರೇಕ್ಷಕರು ಸ್ಪಂದಿಸುವಷ್ಟು ವ್ಯಾಸನ 'ಸಾಗರ ಮಿಲನ'ಕ್ಕೆ ಸ್ಪಂದಿಸುವುದಿಲ್ಲ; ಮತ್ತು ಇದಕ್ಕೆಕಾರಣ ಕೇವಲ ಪ್ರೇಕ್ಷಕರ ಕೀಳು ಅಭಿರುಚಿಯಲ್ಲ.ಪ್ರತಿಯೊಬ್ಬ ಕಲಾವಿದನೂ ಎದುರಿಸುವ ಪ್ರಶ್ನೆ ಇದು: "ತನ್ನ ಸ್ವಂತಿಕೆ ಯನ್ನು ಉಳಿಸಿಕೊಂಡೂ ಸಂಪ್ರದಾಯಬದ್ಧ ಸಾಮಾನ್ಯ ಜನತೆಯನ್ನು ತಲುಪುವುದು ಹೇಗೆ?" ಕಾರಂತರು ಈ ಪ್ರಶ್ನೆಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಉತ್ತರ ಕೊಡುತ್ತಾರೆ. ಕೆಲವು ಸಲ ಅವರು ಪ್ರೇಕ್ಷಕರ ರುಚಿಯನ್ನು ತಿದ್ದಬೇಕೆಂದರೆ ಮತ್ತೆ ಕೆಲವು ಸಲ ಸಾಮಾನ್ಯ ಜನತೆಗೆ ಎಂದೂ ಉತ್ತಮ ಅಭಿರುಚಿ ಬರಲು ಸಾಧ್ಯವಿಲ್ಲ ವೆಂದು ನಿರಾಶರಾಗುತ್ತಾರೆ.

೩

ಸಾಹಿತ್ಯ ಪ್ರಭೇಧಗಳು ಕಾಲ ವಿಶಿಷ್ಟವೆ? ಅಂದರೆ ಕೆಲವು ಪ್ರಭೇದಗಳು ಕೇವಲ ಕೆಲವು ನಿರ್ದಿಷ್ಟ ಕಾಲ ಮತ್ತು ಸಮಾಜದಲ್ಲಿ ಬೆಳೆಯುತ್ತವೆಯೆ? ಹೌದೆಂದು 'ಸ್ವರೂಪ ವಿಮರ್ಶಕ' ರು (Genre critics) ವಾದಿಸುತ್ತಾರೆ. ಉದಾಹರಣೆಗೆ, ತನ್ನ "ಡೆತ್ ಆಫ್ ಟ್ರಾಜಿಡಿ" ಗ್ರಂಥದಲ್ಲಿ ಜಾರ್ಜ್ ಸ್ಟೇನರ್ "ಯಾವ ಸಮಾಜದಲ್ಲಿ ಸೃಷ್ಟಿ ಎಲ್ಲಾ ವ್ಯಾಖ್ಯೆಗಳನ್ನೂ ಮೀರಿದ, ಎಂದಿಗೂ ನಮ್ಮ ಅರಿವಿಗೆ ಬರಲಾಗದ 'ನಿಗೂಢತೆ' (mystery) ಯನ್ನು ಹೊಂದಿರುತ್ತದೆಯೋ ಆ ಸಮಾಜದಲ್ಲಿ ಮಾತ್ರ ಶ್ರೇಷ್ಠ ದುರಂತ ನಾಟಕಗಳು ಬರಲು ಸಾಧ್ಯ; ಮತ್ತು ಇಂದು ಮಾನವಸೃಷ್ಟಿ–ರಹಸ್ಯವನ್ನು ಸಂಪೂರ್ಣ ಅರಿತುಕೊಂಡಿರುವ ಕಾರಣದಿಂದ ಇಂದಿನಸಮಾಜದಲ್ಲಿ ದುರಂತನಾಟಕವಾಗಲೀ ಮಹಾ ಕಾವ್ಯವಾಗಲೀ ನಿರ್ಮಾಣವಾಗಲು ಸಾಧ್ಯವಿಲ್ಲ"ಎಂದು ಹೇಳುತ್ತಾನೆ. ಇಯನ್‌ವಾಟ್ (Ian watt)ಇಂಗ್ಲಂಡನಲ್ಲಿ 18 ನೇ ಶತಮಾನದಲ್ಲಿ ಮಧ್ಯಮ ವರ್ಗ ತಲೆಎತ್ತಿದುದೇ ಆಗ ಕಾದಂಬರಿ ಪ್ರಭೇದವು ಬೆಳೆಯಲು ಒಂದು ಮುಖ್ಯ ಕಾರಣವೆಂದು ಹೇಳುತ್ತಾನೆ. ಈ ವಾದದ ತಳಹದಿಯನ್ನು ನಾವು ಒಪ್ಪುವುದಾದರೆ, 'ಕಲಾವಿದ ಕಾದಂಬರಿ' ಕೇವಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಜಾತಂತ್ರಾತ್ಮಕ ಸಮಾಜದಲ್ಲಿ ಮಾತ್ರ 'ಕಲಾವಿದ–ನಾಯಕ' 'ರಾಜ-ನಾಯಕ' ಅಥವಾ 'ದೇವ ಪುರುಷ–ನಾಯಕ'ನ ಸ್ಥಾನಕ್ಕೆ ಬರಬಲ್ಲ.

ಈ ವಿಚಾರ ಕ್ರಮವು ಕನ್ನಡ ಸಾಹಿತ್ಯದ ಬಗ್ಗೆ ಮತ್ತೊಂದು ಪ್ರಶ್ನೆಯನ್ನೆತ್ತುತ್ತದೆ. ಮಾಸ್ತಿಯವರ "ಸುಬ್ಬಣ್ಣ"ನನ್ನು ಬಿಟ್ಟರೆ ಕನ್ನಡದಲ್ಲಿ ಬಂದಿರುವ ಇತರ 'ಕಲಾವಿದ–ಕಾದಂಬರಿ' ಗಳೆಲ್ಲಾ 'ಪ್ರಗತಿಶೀಲ' ಚಳವಳಿಯ ಕಾಲದಲ್ಲಿ 'ಪ್ರಗತಿಶೀಲ' ಲೇಖಕರಿಂದ ರಚಿಸಲ್ಪಟ್ಟುವು. ಆದರೆ ಯೂರೋಪಿಯನ್ ಭಾಷೆಗಳಲ್ಲಿ 'ವಾಸ್ತವ ವಾದ'ದ (Naturalism) ಯುಗದಲ್ಲಿ ಒಂದೂ 'ಕಲಾವಿದ–ಕಾದಂಬರಿ' ಬರಲಿಲ್ಲ. ಎಲ್ಲವೂ 'ವಾಸ್ತವ ವಾದ'ಕ್ಕೆ ವಿರುದ್ಧವಾಗಿ ಬಂದ 'ನವ–ಅಭಿಜಾತ' (Neo-Classical) ಪರಂಪರೆಗೆ ಸೇರಿದುವು. ಈ ಕಾರಣದಿಂದಾಗಿ ಕನ್ನಡದಲ್ಲಿ ಬಂದಿರುವ ಹೆಚ್ಚು 'ಕಲಾವಿದ–ಕಾದಂಬರಿ'ಗಳು ಪೇಲವವಾಗಿ ತೀಕ್ಷ್ಣ 'ಸ್ವಾಭಿಮುಖತೆ'ಯಿಂದ ((Self-Consciousness) ದೂರವಾದುವೇ? ಏಕೆಂದರೆ ಅಭಿಜಾತ ಪರಂಪರೆಗೂ ಸ್ವಾಭಿಮುಖ ಸಾಹಿತ್ಯಕ್ಕೂ ಅನ್ಯೋನ್ಯ ಸಂಬಂಧವಿದೆ. ಇಲ್ಲಿ ಇನ್ನೊಂದು ಕುತೂಹಲಕರ ಸಂಗತಿಯೂ ನಮಗೆ ಕಾಣಿಸುತ್ತದೆ. ಕನ್ನಡದಲ್ಲಿ ಬಂದಿರುವ 'ಕಲಾವಿದ–ಕಾದಂಬರಿ' ಗಳೆಲ್ಲಾ ಲೇಖಕನನ್ನು ಬಿಟ್ಟು ಮತ್ತೆಲ್ಲಾ ವಿಧದ ಕಲಾವಿದರನ್ನು, ಹೆಚ್ಚಾಗಿ ಸಂಗೀತ ಕಾರರನ್ನು, ಚಿತ್ರಕಾರರನ್ನು,ನಟರನ್ನು ಚಿತ್ರಿಸುತ್ತವೆ. ನಿಜ, ಅನಕೃ ಅವರ "ಸಾಹಿತ್ಯ ರತ್ನ"ದಿಂದ ಪ್ರಾರಂಭವಾದ ("ಗಾಜಿನ ಮನೆ" ಇತ್ಯಾದಿ) ನಾಲ್ಕು ಕಾದಂಬರಿಗಳು ಸಾಹಿತಿಯ ಮತ್ತು ಸಾಹಿತ್ಯ ಪ್ರಪಂಚದ ಸುತ್ತಲೂ ಹೆಣೆಯಲ್ಪಟ್ಟವೆ. ಆದರೆ ಮೊದಲೇ ವಿವರಿಸಿದಂತೆ ಅನಕೃ ಅವರ ಯಾವುದೇ ಕೃತಿಯು ಕಲೆಗೆ ಸಂಬಂಧಿಸಿದಂತೆ ಆಳಕ್ಕೆ ಹೋಗಿ ಗಂಭೀರ ಸಮಸ್ಯೆಗಳನ್ನು ಎತ್ತುವುದಿಲ್ಲ. ಈ ಸಂಗತಿಯ ವಿವರಣೆಯನ್ನು ಹೀಗೆ ಕೊಡಬಹುದೆ?–(1) ಕರ್ನಾಟಕದ ಪ್ರಸಿದ್ಧ ಸಂಗೀತ ಸಂಪ್ರದಾಯ ಕಲಾವಿದರಲ್ಲಿ ಸಂಗೀತಕಾರನನ್ನು ಎಲ್ಲರಿಗಿಂತ ಹೆಚ್ಚು 'ರೋಚಕ' (glamorous) ವ್ಯಕ್ತಿಯನ್ನಾಗಿ ನಿರ್ಮಿಸಿದೆಯೆ? (2) ಅಥವಾ ಸಾಹಿತ್ಯ ಸಂಗೀತ ಮತ್ತು ನೃತ್ಯದಂತೆ 'ಶಾಸ್ತ್ರ'ವಾಗಿ, ಅಂದರೆ ಖಚಿತ 'ಕಸಬುಗಾರಿಕೆ' (professionalism)ಯಾಗಿ ಕನ್ನಡದಲ್ಲಿ ಬೆಳೆಯದಿರುವುದು ಒಂದು ಕಾರಣವೇ? (3) ಅಥವಾ, ಒಬ್ಬ ಲೇಖಕನಿಗೆ ಇನ್ನೊಬ್ಬ ಲೇಖಕನನ್ನು ಕುರಿತು ಬರೆಯಲು ಅವಶ್ಯಕವಾದ 'ದೂರ' ಕನ್ನಡದ ಪ್ರಗತಿಶೀಲ ಲೇಖಕರಿಗೆ ಸಾಧ್ಯವಾಗದೆ ಹೋಯಿತೆ? ಈ ಪ್ರಶ್ನೆಗಳು ಮುಖ್ಯವೆಂದು ನನಗೆ ಏಕೆ ಕಾಣಿಸುತ್ತದೆ ಎಂದರೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಬಂದಿರುವ ಸುಪ್ರಸಿದ್ಧ 'ಸ್ವಾಭಿಮುಖ' ಕಾದಂಬರಿಗಳೆಲ್ಲಾ ಸಾಹಿತಿಯನ್ನು ತಮ್ಮ ಕೇಂದ್ರದಲ್ಲಿ ಇಟ್ಟುಕೊಂಡಂತಹುಗಳು. ಈ ವಿಧದ ಸ್ವಾಭಿಮುಖತೆ ಎಷ್ಟು ತೀವ್ರವಾಗಿರಬಹುದೆಂಬುದಕ್ಕೆ ನಾವು ಆಂಡ್ರೆ ಜೇಡ್‌ನ (Andre Gide) "Journal des faux-monnayeurs" ಕೃತಿಯನ್ನು ಉದಾಹರಿಸಬಹುದು. ಈ ಕೃತಿ ಕಾದಂಬರಿಕಾರನೊಬ್ಬನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಗ್ಗೆ ಕಾದಂಬರಿ ರಚಿಸುತ್ತಿರುವ, ಮತ್ತು ಅದರ ಬಗ್ಗೆ ದಿನಚರಿ ಬರೆಯುತ್ತಿರುವ ಇನ್ನೊಬ್ಬ ಲೇಖಕನನ್ನು ಕುರಿತು ಕಾದಂಬರಿ ಬರೆಯುತ್ತಿರುವ ಮತ್ತೊಬ್ಬ ಕಾದಂಬರಿಕಾರನ ದಿನಚರಿ.

ಕೊನೆಯದಾಗಿ ನಾವು ಕಾರಂತರ ಮತ್ತು ಜಾಯ್ಸ್‌ನ ಕಾದಂಬರಿಗಳಲ್ಲಿ ಕಂಡು ಬರುವ 'ಕಲಾವಿದನ ಬೆಳವಣಿಗೆ'ಯನ್ನು ನೋಡೋಣ. ಈ ಇಬ್ಬರು ಲೇಖಕರನ್ನು ತಮ್ಮ ತಮ್ಮ ಸಂಸ್ಕೃತಿಗಳ-ಭಾರತೀಯ ಮತ್ತು ಆಂಗ್ಲ ಸಂಸ್ಕೃತಿಗಳ-ಪ್ರತಿನಿಧಿಗಳೆಂದು ಗಣಿಸಿದರೆ (ಜಾಯ್ಸ್ ಐರಿಷ್ ಲೇಖಕನೆಂಬುದನ್ನು ಇಲ್ಲಿ ಅಗಣ್ಯಮಾಡಿ) ಇವರಿಬ್ಬರೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ವಿಚಾರ ಮಾಡುವುದು ಕಂಡುಬರುತ್ತದೆ. ಕಲಾ ಸೃಷ್ಟಿಗೆ ಜಾಯ್ಸ್ ಕೊಡುವ ರೂಪಕ 'ಕುಲುಮೆಯಲ್ಲಿ ಸಿದ್ಧ ಪಡಿಸುವ ವಸ್ತು'ವಾದರೆ ("forging in a Smithy), ಕಾರಂತರು ಕೊಡುವ ರೂಪಕ 'ವರ್ಷಾಕಾಲದ ಮಯೂರ ನರ್ತನ' ಅಂದರೆ, ಮೊದಲನೆಯ ರೂಪಕ 'ಕಸಬುಗಾರಿಕೆ' ಮತ್ತು 'ಸತತ ಪರಿಶ್ರಮ'ಗಳನ್ನು ಎತ್ತಿ ಹಿಡಿದರೆ, ಎರಡನೆಯ ರೂಪಕ ಸಹಜ ಪ್ರತಿಭೆ' ಮತ್ತು 'ತೀವ್ರ ಜೀವನೋಲ್ಲಾಸ'ಗಳಿಗೆ ಒತ್ತುಕೊಡುತ್ತದೆ. ಜಾಯ್ಸ್ ಸೃಷ್ಟಿಸಿದ ಸ್ಟೀಫನ್‌ಗೆ ಕಲಾವಿದನ ಪ್ರಗತಿಯೆಂದರೆ ಸ್ವಂತ ವ್ಯಕ್ತಿತ್ವದ ಸತತ ನಾಶ; ಕಾರಂತರ ವ್ಯಾಸನಿಗೆ ಪರಂಪರೆಯ ಶೃಂಖಲೆಗಳಿಂದ ಮುಕ್ತವಾದ 'ತನ್ನ ಸ್ವಂತಿಕೆ'ಯ ಬೆಳವಣಿಗೆ. ಪ್ರಾಯಶಃ ರೊಮ್ಯಾಂಟಿಕ್ ಆಂದೋಳನದ ಕೊನೆಯಲ್ಲಿ ಬರುವ ಮತ್ತು ನಾನೂರು ವರ್ಷಗಳ ಕಾಲ ಪ್ರಜಾತಂತ್ರವನ್ನು ಅನುಭವಿಸಿರುವ ಸಮಾಜದಲ್ಲಿ ಬರುವ ಜಾಯ್ಸ್‌ನ ದೃಷ್ಟಿಯಲ್ಲಿ ಕಲಾವಿದನಿಗೆ ಮುಖ್ಯವಾಗಿ ಇರಬೇಕಾದ ಗುಣಗಳು 'ಸಾಮೂಹಿಕತೆ', 'ಕಸಬುಗಾರಿಕೆ' ಮತ್ತು 'ಸಮತೋಲನ' ಎಂದು ಕಂಡು ಬರುತ್ತವೆ. ಪರಂಪರಾಗತ ಹಾಗೂ ಆಗತಾನೇ ಸ್ವತಂತ್ರವಾದ ಸಮಾಜದಿಂದ ಬರುವ ಕಾರಂತರಿಗೆ ಕಲಾವಿದನಲ್ಲಿ 'ಸ್ವಂತಿಕೆಯ ವಿಕಾಸ' ಮತ್ತು 'ಸಾಂಪ್ರದಾಯಿಕತೆ'ಯಿಂದ ಮುಕ್ತಿ ಅತ್ಯಂತ ಮಹತ್ವದ ಲಕ್ಷಣಗಳಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪ 'ಪರಿಭ್ರಮಣ' ಮತ್ತು 'ಶೋಧ';

ಕನ್ನಡ ಜೈಮಿನಿ ಭಾರತದ ಒಂದು ಅಭ್ಯಾಸ

'ಅರ್ಕಿಟೈಪ್' ಶಬ್ದವನ್ನು ಮೊತ್ತ ಮೊದಲಿಗೆ ಚಲಾವಣೆಗೆ ತಂದು ಅದರ ಅರ್ಥ–ವ್ಯಾಪ್ತಿ ಇವುಗಳನ್ನು ವಿವರಿಸಿ ಪ್ರಮುಖ 'ಅರ್ಕಿಟೈಪ್'ಗಳನ್ನು ವಿಶ್ಲೇಷಿಸಿ ಕೇವಲ ಸಾಹಿತ್ಯ ವಿಮರ್ಶೆಗೇ ಅಲ್ಲದೆ ಮನೋ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರವೇ ಮುಂತಾದ ಶಿಸ್ತುಗಳಿಗೆ (discipline) ಒಂದು ನೂತನ ರಚನಾತ್ಮಕ ತಿರುವನ್ನು ಕೊಟ್ಟವನು ಮಹಾನ್ ಮನೋವಿಜ್ಞಾನಿ ಕಾರ್ಲ್‌ಯೂಂಗ್. ಇವನ ಶಬ್ದ ಗಳಲ್ಲಿಯೇ ಹೇಳುವುದಾದರೆ "In reality they belong to the activities of the ınstincts and in that Sense they repesent inherited forms of Psyctıc behaviour." ಯಾವುದೇ ಒಂದು ಪ್ರತಿಮೆ, ಒಂದು ವಿಷಯ (motif), ಅಥವಾ ಕಥಾ ವಿನ್ಯಾಸ (Thematic Pattern) ಇತಿಹಾಸದಲ್ಲಿ, ಸಾಹಿತ್ಯದಲ್ಲಿ, ಮತ–ಧರ್ಮಾಚರಣೆಗಳಲ್ಲಿ ಹಾಗೂ ಜಾನಪದದಲ್ಲಿ ಮಾನವನ ಆದಿಮ ಕಾಲದಿಂದ ಪದೇ ಪದೇ ಕಂಡು ಬಂದು, ಆ ಕಾರಣದಿಂದ ಒಂದು ವಿಧದ ಕಾಲಾತೀತ ಸಾಂಕೇತಿಕತೆಯನ್ನು ಪಡೆದಿದೆಯೊ ಆದನ್ನು 'ಅರ್ಕಿಟೈಪ್' ಅಥವಾ 'ಚಿರಂತನ ಪ್ರತೀಕ'ವೆಂದು ಕರೆಯಬಹುದು. ಚಿರಂತನ ಪ್ರತೀಕಗಳು ಮಾನವನಿಗೆ ಆನುವಂಶಿಕವಾಗಿ ಬಂದ ಮಾನಸಿಕ ವರ್ತನೆಯ ರೂಪಗಳು. ಇವುಗಳ ಪ್ರಮುಖ ಉದಾಹರಣೆಗಳೆಂದರೆ 'ಸಾವು ಮತ್ತು ಪುನರ್ಜನ್ಮ', 'ಪರಿಭ್ರಮಣ ಮತ್ತು ಶೋಧ,' 'ಅಂತರಿಕ್ಷ ತಂದೆ–ಭೂ ತಾಯಿ,' 'ಕತ್ತಲೆ ಬೆಳಕುಗಳ ದ್ವಂದ್ವ'–ಇತ್ಯಾದಿ.

ಸಾಹಿತ್ಯ ಕೃತಿಗಳನ್ನು ಪುರಾಣ (myth) ಮತ್ತು ಚಿರಂತನ ಪ್ರತೀಕ (archetype) ಇವುಗಳ ವಿಶ್ಲೇಷಣೆಯ ಮೂಲಕ ಅಭ್ಯಸಿಸಿದರೆ ಆಗುವ ಪ್ರಯೋಜನಗಳು ಅನೇಕ. ಪ್ರಪ್ರಥಮ ಪ್ರಯೋಜನವೆಂದರೆ ಬೇರೆ ಬೇರೆ ಸಮಾಜಗಳಲ್ಲಿ ಹಾಗೂ ಭಾಷೆಗಳಲ್ಲಿ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳಲ್ಲಿರುವ ಸಮಾನತೆ ಮತ್ತು ಸಮಾನ ಚಿಂತನೆಯ ಅರಿವು. ಮತ್ತೆ, ಈ ವಿಧದ ವಿಮರ್ಶೆ ಒಂದು ಕೃತಿಯ ಆಳಕ್ಕೆ ಹೋಗಿ ಭಿನ್ನ ಭಿನ್ನ ವಿವರಗಳ ಅಡಿಯಲ್ಲಿ ಹುದುಗಿರತಕ್ಕ ಅದರ ರೂಪ–ವಿನ್ಯಾಸಗಳನ್ನು ಗುರುತಿಸಿ, ಆ ಮೂಲಕ ಕೃತಿಕಾರನು ಮೂಲ ವಿನ್ಯಾಸಗಳಿಗೆ ಏನು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ?–ಮತ್ತು ಈ ಬದಲಾವಣೆಗಳು ಆ ವಿಶಿಷ್ಟ ಸಾಹಿತ್ಯಿಕ ಮತ್ತು ಸಾಮಾಜಿಕ, ವೈಚಾರಿಕ ಪರಿಸರದ ಮೇಲೆ ಏನು ಬೆಳಕು ಚೆಲ್ಲುತ್ತವೆ?–ಎಂದು ಚರ್ಚಿಸಲು ಸಮರ್ಥವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶ್ವಸಾಹಿತ್ಯದಲ್ಲಿ ಯಾವಾಗಲೂ ಅತ್ಯಂತ ಪ್ರಮುಖವಾಗಿ ಕಂಡುಬರುವ ಚಿರಂತನ ಪ್ರತೀಕಗಳಲ್ಲಿ ಅತಿಮುಖ್ಯವಾದುವು 'ಪರಿಭ್ರಮಣ' ಮತ್ತು 'ಶೋಧ'. ಈ ಪ್ರತೀಕಗಳು ಜನಪದ ಸಾಹಿತ್ಯದಿಂದ ಹಿಡಿದು 'ಅದ್ಭುತ-ರಮ್ಯ' ಕಥೆಗಳಲ್ಲಿಯೂ ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಹೋಮರ್ ಮಹಾಕವಿಯ 'ಒಡಿಸ್ಸಿ'ಯಿಂದ ಎಲಿಯಟ್‌ನ 'ವೇಸ್ಟ್ ಲ್ಯಾಂಡ್' ವರಿಗೂ ಎಲ್ಲಾ ಪ್ರಮುಖ ಸಾಹಿತ್ಯ ಕೃತಿಗಳಲ್ಲಿಯೂ ಹಾಸು ಹೊಕ್ಕಾಗಿದೆ. ಈ ದೃಷ್ಟಿಯಲ್ಲಿ ಇತ್ತೀಚೆಗಿನ ಪ್ರಮುಖ ಅಮೇರಿಕನ್ ವಿಮರ್ಶಕ ನಾರ್ಥೊಪ್ ಫ್ರೈ ಹೇಳುವ ಮಾತುಗಳು ಉತ್ಪ್ರೇಕ್ಷೆ ಎಂದೇನೂ ಅನ್ನಿಸುವುದಿಲ್ಲ. "Of all fictions, the marvellous Journey is the one formula that is never exhausted."

'ಪರಿಭ್ರಮಣ' ಪ್ರತೀಕ ಕೇಂದ್ರವಾಗಿರುವ ಒಂದು ಕಾಲ್ಪನಿಕ ರಚನೆಯನ್ನು ಅಭ್ಯಸಿಸಿದರೆ ವಸ್ತುವಿನ ಮತ್ತು ಶಿಲ್ಪದ ದೃಷ್ಟಿಯಿಂದ ನಮಗೆ ಕಂಡು ಬರುವ ಸಾಧ್ಯತೆಗಳೇನು? ಮೊದಲು ವಸ್ತುವನ್ನು ತೆಗೆದುಕೊಳ್ಳೋಣ. ಕೃತಿಯಲ್ಲಿ 'ಪರಿಭ್ರಮಣ'ದ ಉದ್ದೇಶ ಯಾವುದಾದರೂ ಮಹತ್ವಸ್ತು ಪ್ರಾಪ್ತಿಗಾಗಿರಬಹುದು. ಜಾನಪದ ಕಥೆಗಳಲ್ಲಿ ಹಾಗೂ ಸಾಹಸ-ಪ್ರಣಯ ಕಥೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ, ಅಪೂರ್ವ ವಸ್ತುವನ್ನು ಶೋಧಿಸುತ್ತಾ (ಮಣ್ಣು, ಹೂವು, ಆಯುಧ ಇತ್ಯಾದಿ) ಕಾಡು-ಮೇಡು ಅಲೆದು ಕೊನೆಗೆ ಆ ವಸ್ತುವಿನ ಪ್ರಾಪ್ತಿಯಿಂದ ಯಶಸ್ಸುಗಳಿಸುವ, ಅಂದರೆ ರಾಜಕುಮಾರಿಯ ಕೈಹಿಡಿದು ಅಥವಾ ಮತ್ತು ರಾಜ್ಯಗಳಿಸುವ-ಕಥಾನಾಯಕರ ವಸ್ತು ಈ ವರ್ಗಕ್ಕೆ ಸೇರಿದುದು. ಈ ವಿಧದ ಕಥಾನಕಗಳಿಂದ ಸ್ವಲ್ಪ ಮೇಲೇರುವ ಸಾಹಿತ್ಯ ಕೃತಿಗಳಲ್ಲಿ ಸಂಚಾರದ ಉದ್ದೇಶ 'ವಸ್ತು ಪ್ರಾಪ್ತಿ'ಯೇ ಆಗಿದ್ದರೂ ನಿರೂಪಣೆಯಲ್ಲಿ ಒತ್ತು 'ಸಂಚಾರ'ದ ಮೇಲೇ ವಿನಹ 'ಸಿದ್ಧಿ'ಯಲ್ಲಲ್ಲ. ಪಾಶ್ಚಾತ್ಯ ಸಾಹಿತ್ಯದಲ್ಲಿ 16ನೇ ಶತಮಾನದಲ್ಲಿ ಪ್ರಾರಂಭವಾಗಿ 18ನೇ ಶತಮಾನದಲ್ಲಿ ಅತ್ಯಂತ ಜನಪ್ರಿಯವಾಗಿದ್ದ 'ಪಿಕರ್‌ಸ್ಕ್' ಕಾದಂಬರಿಗಳು ಈ ವರ್ಗಕ್ಕೆ ನಿದರ್ಶನವಾಗುತ್ತದೆ- "ಡಾನ್ ಕ್ವಿಕ್ಸಟ್," "ಟಾಮ್‌ಜೋನ್ಸ್," "ಹಂಫ್ರಿ ಕ್ಲಿಂಕರ್", ಇತ್ಯಾದಿ. ಈ ವಿಧದ ಕಾದಂಬರಿಗಳಲ್ಲಿ 'ಸಂಚಾರ' ಒಂದು ಸಾಹಿತ್ಯ ತಂತ್ರವಾಗಿ ಪಾತ್ರಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸದಾ ಚಲಿಸುತ್ತಿರುವುದರಿಂದ, ವಿವಿಧ ವ್ಯಕ್ತಿಗಳ, ನಗರಗಳ, ಒಟ್ಟಿನಲ್ಲಿ ಅಂದಿನ ಸಮಾಜದ ಸಂಪೂರ್ಣ ಚಿತ್ರವನ್ನು ಕೊಡುವುದು ಈ ಮೂಲಕ ಕೃತಿಕಾರನಿಗೆ ಸಾಧ್ಯವಾಗುತ್ತದೆ.

ಈ ಎರಡೂ ವಿಧದ ಸಾಹಿತ್ಯ ಪ್ರಕಾರಗಳಲ್ಲಿ-ಅಂದರೆ ಅದ್ಭುತ-ರಮ್ಯ ಸಾಹಸ ಕಥೆಗಳಲ್ಲಿ (Romances) ಮತ್ತು ಪಿಕರೆಸ್ಕ್ ಕಾದಂಬರಿಗಳಲ್ಲಿ ಕಥನ ಕ್ರಿಯೆ ಶಾಬ್ದಿಕ ಪಾತಳಿಯಲ್ಲಿಯೇ ನಡೆಯುತ್ತದೆ. ಅಲ್ಲಲ್ಲಿ ಸಂಕೇತಾರ್ಥ ಕಂಡು ಬಂದರೂ ಅದು ಗೌಣ. ಆದರೆ ಸಂಚಾರವನ್ನೇ ಕಥೆಯ ಕೇಂದ್ರವಾಗಿರಿಸಿಕೊಂಡರೂ ಕಥನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಿಯೆ ಸಂಪೂರ್ಣ ಸಾಂಕೇತಿಕವಾಗುವ ಮತ್ತೊಂದು ಸಾಹಿತ್ಯ ಪ್ರಕಾರ ಸಾಧ್ಯ. ಇಲ್ಲಿ ಯಾತ್ರೆ ಮಾನವ ಜೀವನಕ್ಕೆ ಸಂಕೇತವಾಗಿ ಕಥೆಯಲ್ಲಿ ಕಂಡು ಬರುವ ಪ್ರತಿಯೊಂದು ಪಾತ್ರವೂ ಹಾಗೂ ಘಟನೆಯೂ ಸಾಂಕೇತಿಕವಾಗುತ್ತದೆ; ಮತ್ತು ಈ ಸಾಂಕೇತಿಕಾರ್ಥ ಧಾರ್ಮಿಕ, ಮತೀಯ, ರಾಜಕೀಯ ಯಾವುದಾದರೂ ಆಗಿರಬಹುದು ಅಥವಾ ಇವೆಲ್ಲವನ್ನೂ ಒಳಗೊಂಡಿರಬಹುದು. ಈ ವರ್ಗದ ಕೃತಿಗಳನ್ನು 'ಅಲಿಗರಿ' ಗಳೆಂದು ಕರೆಯಬಹುದು. ಜಾನ್ ಬನೆಯನ್‌ನ "ದ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್" ಧಾರ್ಮಿಕ, ಮತೀಯ ಅಲೆಗರಿಯಾದರೆ, ಡಾಂಟೆ ಮಹಾಕವಿಯ "ಡಿವೈನ್ ಕಾಮೆಡಿ" ಎಂಬ ಕೃತಿಯಾದರೋ ಅತ್ಯಂತ ಗಹನವಾದ ಧಾರ್ಮಿಕ-ನೈತಿಕ ಅಲಿಗರಿಯಾಗಿದೆ. ರಾಜಕೀಯ, ಧಾರ್ಮಿಕ ಹಾಗೂ ನೈತಿಕ ಈ ಮೂರೂ ಪಾತಳಿಗಳಲ್ಲಿ ಕೆಲಸ ಮಾಡುವ, ಹಾಗೂ ಶಾಬ್ದಿಕ ಪಾತಳಿಯಲ್ಲಿಯೂ ಒಂದು ಅದ್ಭುತ-ರಮ್ಯ ಕಥೆಯನ್ನು ಹೇಳುವ ಮಹತ್ವಾಂಕ್ಷೆಯ ಕೃತಿಯೆಂದರೆ ಸ್ಪೆನ್ಸರ್ ಕವಿಯ "ದ ಫೇರೀ ಕ್ವೀನ್ಸ್." ಆದರೆ ಇದು ಅಪೂರ್ಣ ಕೃತಿ ಮತ್ತು ಒಂದು ಪ್ರಯತ್ನ ಅಷ್ಟೆ.

ವಸ್ತುವಿನ ದೃಷ್ಟಿಯಿಂದಲೇ ಇರುವ ಮತ್ತೊಂದು ಸಾಧ್ಯತೆ ಏನೆಂದರೆ, ಒಂದು ಕೃತಿ ಶಾಬ್ದಿಕ ನೆಲೆಯಲ್ಲಿಯೇ ಮುಂದುವರಿಯುತ್ತಾ ದಾರ್ಶನಿಕ/ಸಾಂಕೇತಿಕ ಅರ್ಥವನ್ನು ಸಫಲವಾಗಿ ಉದ್ದಕ್ಕೂ ಧ್ವನಿಸುವುದು. 'ಸಂಚಾರ'ವನ್ನು ವಸ್ತುವನ್ನಾಗುಳ್ಳ ವಿಶ್ವದ ಎಲ್ಲಾ ಮಹಾಕೃತಿಗಳೂ-ಅವು ಮಹಾ ಕಾವ್ಯಗಳಾಗಿರಲಿ ಅಥವಾ ಕಾದಂಬರಿಗಳಾಗಿರಲಿ-ಈ ವರ್ಗಕ್ಕೆ ಸೇರುತ್ತವೆ. ರೊಮಿಲಾ ಥಾಪರ್ ಅವರು ತಮ್ಮ "ಎಕ್ಸೈಲ್ ಅಂಡ್ ಕಿಂಗ್‌ಡಮ್" ಗ್ರಂಥದಲ್ಲಿ ನಮ್ಮ ಮುಂದಿಡುವ ವಾದವನ್ನು ನಾವು ಒಪ್ಪುವುದಾದರೆ, ಎಂದರೆ ವಾಲ್ಮೀಕಿ ರಾಮಾಯಣದಲ್ಲಿ ಮೂಲತಃ ಬೇರೆ ಬೇರೆಯಾದ ಎರಡು ಕಥೆಗಳು-'ರಾಮನ ವನವಾಸ' ಮತ್ತು 'ದಶರಥರಾಜನ ರಾಜ್ಯದ' ಕಥೆಗಳು-ಒಂದುಗೂಡಿವೆ. 2 ಎಂಬ ವಾದವನ್ನು ಒಪ್ಪುವುದಾದರೆ, ಭಾರತೀಯ ಸಾಹಿತ್ಯದಲ್ಲಿ ರಾಮಾಯಣದ ಉತ್ತರಾರ್ಧ ಮತ್ತು ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಹೋಮರ್ ಕವಿಯ "ಒಡಿಸ್ಸಿ" ಈ ವರ್ಗದ ಅತ್ಯಂತ ಮಹತ್ವದ ಆದಿಮಕೃತಿಗಳೆಂದು (Prototypes) ಹೇಳಬಹುದು ಈ ವರ್ಗಕ್ಕೆ ಸೇರುವ ಅಪೂರ್ವ ಕೃತಿಗಳಲ್ಲಿ ವಸ್ತು ವಿನ್ಯಾಸ ಎಷ್ಟು ವಿಶಾಲ ಹಾಗೂ ಜಟಿಲವಾಗಿರುತ್ತದೆಂದರೆ ಆ ಕೃತಿಗಳು ಶಾಬ್ದಿಕ ನೆಲೆಯಲ್ಲಿ ಮಾನವ ಜೀವನವನ್ನು ಅರ್ಥೈಸುವ ಅತ್ಯಂತ ಸಮರ್ಥ ಸಾಹಿತ್ಯಕ ಕೃತಿಗಳಾಗಿಯೂ ವಿಶ್ವಾಸಾರ್ಹ ಸಾಮಾಜಿಕ ಇತಿಹಾಸಗಳಾಗಿಯೂ ಮತ್ತು ಸಾಂಕೇತಿಕ ನೆಲೆಯಲ್ಲಿ ಮಾನವೀಯ ಮೌಲ್ಯಗಳ ತುಲನಾತ್ಮಕ ಅಧ್ಯಯನಗಳೂ ಆಗುತ್ತವೆ. ಈ ಅಂಶಗಳನ್ನು ಸ್ಪಷ್ಟಪಡಿಸಲು 'ಪರಿಭ್ರಮಣ' ಸಾಹಿತ್ಯದಲ್ಲಿಯೇ ವಿಶಿಷ್ಟವಾದ, ವಿಶ್ವ ಸಾಹಿತ್ಯದಲ್ಲಿ ತನ್ನದೇ ಆದ ಅಪೂರ್ವ ಸ್ಥಾನವನ್ನು ಹೊಂದಿರುವ, ಪಾಶ್ಚಾತ್ಯ ಸಾಹಿತ್ಯದಲ್ಲಿ ತನ್ನ ನಂತರ ಬಂದ ಈ ವಿಧದ ಯಾವುದೇ ಸಾಹಿತ್ಯ ಪ್ರಕಾರದ ಮೇಲೂ ತನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಭಾವವನ್ನೂ ಮೂಡಿಸಿರುವ "ಒಡಿಸ್ಸಿ"ಯನ್ನು ಈಗ ನಾವು ಸ್ವಲ್ಪ ವಿವರವಾಗಿ ನೋಡೋಣ.

ಹತ್ತು ವರ್ಷಗಳ ತನಕ ನಡೆದ ಟ್ರಾಯ್ ಯುದ್ಧದ ನಂತರ ಇಥಾಕಾ ರಾಜ್ಯದ ರಾಜ ಯೂಲಿಸಿಸ್ (ಗ್ರೀಕ್ ಭಾಷೆಯಲ್ಲಿ ಒಡಿ ಸ್ಯೂಸ್ಸ್) ತನ್ನ ರಾಜ್ಯಕ್ಕೆ ಹಿಂತಿರುಗುವಾಗ ಬಿರುಗಾಳಿಯಿಂದ ಸಾಗರದಲ್ಲಿ ದಾರಿ ತಪ್ಪಿ, ಮತ್ತೆ ಹತ್ತು ವರ್ಷಗಳು ಎಲ್ಲೆಲ್ಲಿಯೋ ಅಲೆದು, ಕೊನೆಗೆ ಇಥಾಕಾಕ್ಕೆ ಹಿಂದಿರುಗಿ, ತಾನಿಲ್ಲದಿರುವಾಗ ತನ್ನ ಹೆಂಡತಿಯನ್ನು ಕಾಡಿಸುತ್ತಿದ್ದ ಇತರ ರಾಜರನ್ನು ಸೋಲಿಸಿ ಮತ್ತೆ ತನ್ನ ಹೆಂಡತಿ ಪೆನಲಿಟಿ ಮತ್ತು ಮಗ ಟೆಲಿಮಾಕಸ್ ಇವರುಗಳನ್ನು ಒಂದುಗೂಡುವುದು, ಸ್ಥೂಲವಾಗಿ "ಒಡಿಸ್ಸಿ"ಯ ಕಥಾ ವಸ್ತು. ಶಾಬ್ದಿಕ ಪಾತಳಿಯಲ್ಲಿ "ಒಡಿಸ್ಸಿ" ಒಂದು ಸಾಹಸ ಪ್ರಧಾನ ಅದ್ಭುತ-ರಮ್ಯ ಕಥೆಯಾಗಿಯೂ ಸಾರ್ಥಕ ಕೃತಿಯಾಗಿದೆ. ಯೂಲಿಸಿಸ್ ಟ್ರಾಯ್ ನಗರದಿಂದ ತನ್ನ ಸೈನಿಕರೊಡನೆ ಹಿಂದಿರುಗಿ ಬರುತ್ತಿರುವಾಗ ವಾಯು ದೇವತೆ ಪೊಸೈಡನಗೆ ಕೋಪವುಂಟು ಮಾಡುತ್ತಾನೆ. ಅದು ಕಾರಣ ಆ ದೇವರ ಕೋಪದಿಂದ ಬಿರುಗಾಳಿಯೆದ್ದು ಅವನ ಹಡಗುಗಳು ಸಾಗರದಲ್ಲಿ ದಿಕ್ಕಾಪಾಲಾಗುತ್ತವೆ. ಅನಂತರದ ಅವನ ದಿಕ್ಕುದೆಸೆಯಿಲ್ಲದ ಅಲೆದಾಟದಲ್ಲಿ ಅನೇಕ ಅದ್ಭುತ ಘಟನೆಗಳು ನಡೆಯುತ್ತವೆ: ಒಕ್ಕಣ್ಣಿನ ದೈತ್ಯ ಪಾಲೆಫೀಮಸ್‌ನೊಡನೆ ಹೋರಾಟ, ಅಲ್ಲಿ ಬೆಳೆವ ಹಣ್ಣು ತಿಂದೊಡನೆಯೇ ಮನಸ್ಸಿಗೆ ಮಂಕು ಕವಿದು ಯಾವುದೇ ಕೆಲಸ ಮಾಡಲೂ ಅಸಮರ್ಥರನ್ನಾಗಿಸುವ 'ಲೋಟಸ್' ಪ್ರದೇಶದಿಂದ ತಪ್ಪಿಸಿಕೊಳ್ಳುವುದು, ತನ್ನ ಮಂತ್ರ ಶಕ್ತಿಯಿಂದ ತನ್ನ ರಾಜ್ಯಕ್ಕೆ ಎಲ್ಲಾ ಮಾನವರನ್ನೂ ಆಕರ್ಷಿಸಿ ಕೆಲವು ದಿನಗಳ ನಂತರ ಅವರನ್ನು ಹಂದಿಗಳನ್ನಾಗಿ ಪರಿವರ್ತಿಸುತ್ತಿದ್ದ 'ಸರ್ಸಿ' ಮಾಯಾವಿನಿಯನ್ನು ಗೆಲ್ಲುವುದು, ಪಾತಾಳ ಪ್ರವೇಶ ಇತ್ಯಾದಿ. ಈ ಎಲ್ಲಾ ಸಾಹಸಗಳಲ್ಲಿಯೂ ನಮಗೆ ಕಂಡು ಬರುವುದು ಯೂಲಿಸಿಸ್‌ನ ಕುಂದದ ಧೈರ್ಯ, ಚಾತುರ್ಯ ಮತ್ತು ತೀಕ್ಷ್ಣ ಬುದ್ಧಿ.

ಆದರೆ ಈ ಮೇಲ್ಮೈಯ ಘಟನೆಗಳನ್ನು ವಿವರಗಳನ್ನು ಬದಿಗಿಟ್ಟು ಅವುಗಳ ಆಳಕ್ಕಿಳಿದು ನೋಡಿದರೆ ನಮಗೆ ಬೇರೆಯೇ ಆದ, ಸಾರ್ವಕಾಲೀಕ ಸತ್ಯವಾದ ನೈತಿಕ ಮೌಲ್ಯಗಳ ವಿನ್ಯಾಸ ಕಂಡು ಬರುತ್ತದೆ. ವಾಯು ದೇವತೆಯ ಶಾಪವನ್ನು ನಾವು ಬದಿಗಿಟ್ಟರೆ, ನಮಗೆ ಸ್ಪಷ್ಟವಾಗುವುದೇನೆಂದರೆ, ಯೂಲಿಸಿಸ್‌ನ ಕಷ್ಟ-ನಷ್ಟಗಳು, ಅವನ ಸಾಗರದಲ್ಲಿನ ಅಲೆದಾಟ ಸುರುವಾಗುವುದು ಒಂದು ಮುಖ್ಯ ಘಟನೆಯಿಂದ-ಯೂಲಿಸಿಸ್ ವಿನಾ ಕಾರಣ 'ಅಸ್ಮರಸ್' (I smarus) ರಾಜ್ಯವನ್ನು ಲೂಟಿಮಾಡಿ ಅಲ್ಲಿಯ ಜನರ ಸಂಪತ್ತನ್ನು ಕೊಳ್ಳೆ ಹೊಡೆಯುವುದರ ಮೂಲಕ, ಅಂದರೆ ಯೂಲಿಸಿಸ್‌ನ ಅನೈತಿಕ-ಅಮಾನವೀಯ ಕೃತ್ಯದಿಂದ. ಇಲ್ಲಿಯತನಕವೂ ಅವನು 'ಚತುರ ಸೇನಾನಿ' ಮತ್ತು 'ನಗರಗಳನ್ನು ಲೂಟ ಮಾಡುವವ' ಮಾತ್ರ ಆಗಿದ್ದಾನೆ. ಆದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇನ್ನು ಮುಂದೆ ಅವನು ತನ್ನ ಹತ್ತು ವರ್ಷಗಳ ಅಲೆದಾಟದಲ್ಲಿ, ಅನುಭವಿಸುವ ಕಷ್ಟ ನಷ್ಟಗಳ ಮೂಲಕ ಜೀವನದ ಮೌಲ್ಯಗಳನ್ನು ಅರಿತುಕೊಳ್ಳುತ್ತಾ, ಮುಖ್ಯವಾಗಿ ತನ್ನನ್ನೇ ತಾನು ಅರಿತುಕೊಳ್ಳುತ್ತಾ ಹೋಗುತ್ತಾನೆ. ಅಂದರೆ ಯೂಲಿಸಿಸ್‌ನ ಅಲೆದಾಟ ಆತನು ಆತ್ಮಜ್ಞಾನ ಮತ್ತು ಜೀವನ ಮೌಲ್ಯಗಳಿಗಾಗಿ ನಡೆಸಿದ ದೀರ್ಘ ಶೋಧ.

ಯೂಲಿಸಿಸ್‌ನ ಸಾಹಸಗಳು ಒಟ್ಟು ಹತ್ತು. ಅವು ಯಾವುವೆಂದರೆ— 1) ಲೋಟಸ್ ಈಟರ್ಸ್, 2) ಸೈಕ್ಲಪ್ಸ್, 3) ಲೆಸ್ಟ್ರಿಗೋಸಿಯನ್ಸ್, 4) ಸರ್ಸೀ, 5) ಹೇಡೀಜ್, 6) ಸೈರನ್ಸ್, 7) ಸಿಲ್ಲ ಮತ್ತು ಕರಿಬ್‌ಡಿಸ್, 8) ಆಕ್ಸನ್ ಆಫ್ ದ ಸನ್, 9) ಕಲಿಪ್ಸೊ, 10) ನಾಸಿಕಾ.

ಈ ಸಾಹಸಗಳನ್ನು ಸ್ಥೂಲವಾಗಿ ಎರಡು ಭಾಗಗಳಲ್ಲಿ ವಿಂಗಡಿಸಬಹುದು; ಪ್ರಲೋಭನೆಗಳು ಮತ್ತು ಆಪತ್ತುಗಳೆಂದು (Temptations to threats)[3] ಲೋಟಸ್ ರಾಜ್ಯ, ಸರ್ಸೀ, ಸೈರನ್ಸ್ ಇವುಗಳು ಪ್ರಲೋಭನೆಗಳಾದರೆ, ಸೈಕ್ಲಪ್ಸ್, ಸಿಲ್ಲ ಮತ್ತು ಕರಿಬ್‌ಡಿಸ್ ಮುಂತಾದುದವುಗಳು ಆಪತ್ತುಗಳು. ಈ ವಿಧದ ಪ್ರಲೋಭನೆಗಳು ಮತ್ತು ಆಪತ್ತುಗಳು ಯೂಲಿಸಿಸ್‌ನ ವ್ಯಕ್ತಿತ್ವವನ್ನು ಒರೆಗೆ ಹಚ್ಚಿ ಅವನಲ್ಲಿನ ಅಹಂಕಾರ, ಕ್ರೌರ್ಯ ಮುಂತಾದ ಕಶ್ಮಲಗಳನ್ನು ಹೋಗಲಾಡಿಸಿ ಅವನನ್ನು ಉತ್ತಮ ಮಾನವನನ್ನಾಗಿ ಮಾಡುತ್ತವೆ.

ಸಿದರ್ಶನವಾಗಿ ಒಂದೆರಡು ಘಟನೆಗಳನ್ನು ನೋಡೋಣ. ಲೋಟಸ್ ಪ್ರಾಂತ್ಯವನ್ನು ಪ್ರವೇಶಿಸಿದ ಯೂಲಿಸಿಸ್‌ನ ಸೈನಿಕರು ಆ ಹಣ್ಣುಗಳನ್ನು ತಿಂದು, ತಮ್ಮ ಪ್ರಾಪಂಚಿಕ ಕರ್ತವ್ಯ ವಸ್ತುಸ್ಥಿತಿ ಇವುಗಳನ್ನು ಮರೆತು, ಯಾವಾಗಲೂ ಏನನ್ನೂ ಮಾಡದೆ ಜಡರಂತೆ ಅಲ್ಲಿಯೇ ಇರಲು ಅಪೇಕ್ಷಿಸುತ್ತಾರೆ. "They forget their homeward journey" ಅಂದರೆ ತಮ್ಮ ಮನೆಗೆ ಮರಳಬೇಕೆನ್ನುವ ಅರಿವನ್ನೇ ಕಳೆದುಕೊಳ್ಳುತ್ತಾರೆ. ಅಂದರೆ, ಮಾನಸಿಕವಾಗಿ ಇದೊಂದು ವಿಧದ 'ಶೈಶವಾವಸ್ಥೆಗೆ ಮರುಳುವ' ಸ್ಥಿತಿ. ಮಾನಸಿಕವಾಗಿ ಹಾಗೂ ದೈಹಿಕವಾಗಿ ಪ್ರೌಢಾವಸ್ಥೆಯನ್ನು ತಲುಪಿದ ಮನುಷ್ಯ ಈ ವಿಧದ ಜಡ ಅಸ್ತಿತ್ವದ ಶೈಶವಾವಸ್ಥೆಯ ಪ್ರಲೋಭನೆಯನ್ನು ಗೆದ್ದು ಜಗತ್ತಿನ ಕಷ್ಟ–ಕಾರ್ಪಣ್ಯಗಳನ್ನು ಎದುರಿಸುವ ಸ್ಥೈರ್ಯವನ್ನು ಪಡೆಯಲೇಬೇಕು.

ಶೈಶವಾವಸ್ಥೆಯ ಪ್ರಲೋಭನೆ ಎಷ್ಟು ತೀವ್ರವೋ, ಅಷ್ಟೇ ತೀವ್ರ ಸಾವಿನ ಪ್ರಲೋಭನೆ. ಸತ್ತು ಈ ಸಂಸಾರದ ತನ್ನೆಲ್ಲಾ ಜವಾಬ್ದಾರಿಗಳಿಂದ, ಸೋಲು–ನೋವುಗಳಿಂದ ಪಾರಾಗುವ ಪ್ರಲೋಭನೆ. 'ಯೂಲಿಸಿಸ್ ಹೇಡೀಸ್'ಗೆ ಅಂದರೆ ಸತ್ತವರ ಆತ್ಮಗಳಿರುವ ಪಾತಾಳ ಲೋಕಕ್ಕೆ ಇಳಿದಾಗ ತನ್ನಲ್ಲೇ ಹುದುಗಿರುವ ಈ ಪ್ರಲೋಭನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನು ಅರಿತುಕೊಳ್ಳುತ್ತಾನೆ. ಎಷ್ಟೋ ಸಲ ದಿಕ್ಕು ದಿವಾಣವಿಲ್ಲದ ಅಲೆದಾಟಕ್ಕಿಂತ ಸಾವೇ ವಾಸಿ ಎಂದು ಯೋಚಿಸುತ್ತಿದ್ದ ಯೂಲಿಸಿಸ್, ಆಕಿಲೀಸ್ ಮುಂತಾದವರ ಮೂಲಕ ಎಷ್ಟೇ ನಿಷ್ಠುರ ಜೀವನವಾದರೂ ಜೀವನ ಸಾವಿಗಿಂತ ಮೇಲೆಂದು ತಿಳಿದು ಕೊಳ್ಳುತ್ತಾನೆ. ಮತ್ತು ಆ ತಿಳುವಳಿಕೆಯ ಮೂಲಕ ತನ್ನ ಬದುಕಿನ ಬಗ್ಗೆ ಇದ್ದ ಜಿಗುಪ್ಸೆಯನ್ನು ದೂರಮಾಡಿ ಜೀವನದ ಪಾವಿತ್ರ್ಯವನ್ನು ಮನಗಾಣುತ್ತಾನೆ.

ಸರ್ಸಿ ಪ್ರಕರಣ ಅತ್ಯಂತ ಸಂಕೀರ್ಣವಾಗಿದೆ. ತನ್ನ ಬಳಿಗೆ ಬಂದ ಮನುಷ್ಯರನ್ನೆಲ್ಲಾ ಮೃಗಗಳನ್ನಾಗಿ ಪರಿವರ್ತಿಸುತ್ತಿದ್ದ ಮಾಯಾವಿ ಸರ್ಸಿ, ಸ್ತ್ರೀತತ್ವದ ಒಳ್ಳೆಯ ಮತ್ತು ಕೆಟ್ಟ ಗುಣಗಳನ್ನು ಪ್ರತಿನಿಧಿಸುತ್ತಾಳೆ. ಸ್ತ್ರೀಯ ಲೈಂಗಿಕ ಆಕರ್ಷಣೆಯಲ್ಲಿ–ಅಂದರೆ, ಕಾಮಸುಖದಲ್ಲಿ ತನ್ನ ಅಸ್ತಿತ್ವವನ್ನೇ ಮರೆಯುವ ವಿಷಯಾಸಕ್ತರು ಮೃಗಗಳು ತಾನೆ? ಆದರೆ ಲೈಂಗಿಕ ಆಕರ್ಷಣೆಯನ್ನು, ಕಾಮವನ್ನು ಸಂಪೂರ್ಣ ನಿರಾಕರಿಸಿದರೂ ಅದು, ಅಸ್ವಾಭಾವಿಕವಾದದ್ದರಿಂದ, ಮಾನವನಿಗೆ ವಿನಾಶಕಾರಕ. ಸರ್ಸಿ ಪ್ರಕರಣದಲ್ಲಿ ಈ ಅರಿವನ್ನು ಪಡೆಯುವ ಯೂಲಿಸಿಸ್ ಮೊದಲು ಅವಳ ಮಾಯೆಯನ್ನು ಎದುರಿಸಿ ಗೆದ್ದು, ಅವಳ ಮಾಯೆಯ ವಶವಾಗಿದ್ದ ಎಲ್ಲರನ್ನೂ ಬಿಡುಗಡೆ ಮಾಡಿ, ಕೊನೆಗೆ ಅತ್ಯಂತ ದೈನ್ಯಳಾಗಿ ತನ್ನನ್ನೇ ಅರ್ಪಿಸಿಕೊಂಡ ಸರ್ಸಿಯನ್ನು ಸ್ವೀಕರಿಸುತ್ತಾನೆ. ಸ್ತ್ರೀ ದೇವಿಯೂ ಹೌದು–ಮಾಯೆಯೂ ಹೌದು.

ಈ ರೀತಿ ಸಾಗರದಲ್ಲಿ ಗಾಳಿ ಬೀಸಿದ ದಿಕ್ಕಿನಲ್ಲಿ ಅಲೆಯುತ್ತಾ, ತನ್ನ ಅನೇಕ ಅನುಭವಗಳ ಮೂಲಕ ನೂತನ ಜ್ಞಾನವನ್ನೂ ವ್ಯಕ್ತಿತ್ವವನ್ನೂ ಪಡೆಯುವ ಯೂಲಿಸಿಸ್ ಹತ್ತು ವರ್ಷಗಳ ಅನಂತರ ತನ್ನ ರಾಜ್ಯಕ್ಕೆ ಹಿಂತಿರುಗುತ್ತಾನೆ. ಅದೂ ಹೇಗೆ? ತನ್ನೆಲ್ಲಾ ಸೈನಿಕರು–ಸ್ನೇಹಿತರುಗಳನ್ನು ಕಳೆದುಕೊಂಡು, ಕೊನೆಗೆ ತನ್ನ ಮೈಮೇಲಿನ ಬಟ್ಟೆಯನ್ನೂ ಕಳೆದುಕೊಂಡು, ಅನಾಥ ಶಿಶುವಿನಂತೆ ರಾತ್ರಿಯ ಕತ್ತಲೆಯಲ್ಲಿ ತನ್ನ ರಾಜ್ಯದ ಸಾಗರ ತೀರದಲ್ಲಿ ಅಲೆಗಳಿಂದ ಎಸೆಯಲ್ಪಡುತ್ತಾನೆ. ಇಲ್ಲಿಗೆ ಅವನ ಹಿಂದಿನ ವ್ಯಕ್ತಿತ್ವದ ಸಾವು ಪೂರ್ಣವಾಗಿ ಪುನರ್ಜನ್ಮವು ಶುರುವಾಗುತ್ತದೆ. ಆ ರಾತ್ರಿ ಅಲ್ಲಿಯೇ ಹತ್ತಿರದಲ್ಲಿದ್ದ ಕುರುಬನ ಗೊರಬಿನಿಂದ ಮೈಮುಚ್ಚಿಕೊಂಡು ಆ ಕುರುಬನ ಹಟ್ಟಿಯಲ್ಲಿಯೇ ರಾತ್ರಿ ಕಳೆಯುತ್ತಾನೆ. ಹಿಂದೆ ನಗರಗಳನ್ನು ಕೊಳ್ಳೆ ಹೊಡೆಯುವವನಾಗಿದ್ದ ಕ್ರೂರಿ ಮತ್ತು ಗರ್ವಿಷ್ಟ ಯೂಲಿಸಿಸ್ ಈಗ ತನ್ನ ಪತ್ನಿಯ ಆರಾಧಕರಿಗೆ (ಸೂಟರ್ಸ್) ಹೇಳುತ್ತಾನೆ :

"Of an things that breathe and move on the face of the Earth, there is none feebler than man........Therefore let on man be ever lawless, but let him keep bilently Whatever gifts the goods give".

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಈ ಭೂಮಿಯ ಮೇಲೆ ಉಸಿರಾಡುವ ಮತ್ತು ಚಲಿಸುವ ಸಮಸ್ತ ಜೀವಿಗಳಲ್ಲಿ ಮಾನವನಷ್ಟು ನಿರ್ಬಲ ಮತ್ತು ಅಸಹಾಯಕ ಬೇರೆ ಯಾರೂ ಇಲ್ಲ....ಆದ್ದರಿಂದ ಯಾರೂ ನೈತಿಕ ಮತ್ತು ನೈಸರ್ಗಿಕ ಮಿತಿಗಳನ್ನು—ಕಟ್ಟುಪಾಡುಗಳನ್ನು ಮೀರದಿರಲಿ ಮತ್ತು ದೇವರು ತನಗೆ ಏನನ್ನು ಕೊಟ್ಟಿದ್ದಾನೋ ಅದರಿಂದ ತೃಪ್ತಿ ಹೊಂದಿರಲಿ.) ಈ ಮಾತಿನ ಮಹತ್ವ–ತನ್ನ ಪ್ರತಿಯೊಂದು ಸಾಹಸದಲ್ಲಿಯೂ ಕೇವಲ ದೇವ–ದೇವತೆಗಳ ಸಹಾಯದಿಂದ ಜಯಶೀಲನಾದ, ಕಲಿಪ್ಸೊ ರಾಜ್ಯದಲ್ಲಿ ಏಳು ವರ್ಷಗಳ ಕಾಲ ಅಸಹಾಯಕನಾಗಿ ಕಳೆದ, ಕೊನೆಗೆ ತನ್ನವರೆನ್ನುವ ಯಾರೂ ತನ್ನ ಜತೆಯಲ್ಲಿಲ್ಲದೆ, ಬೆತ್ತಲೆಯಾಗಿ ತನ್ನ ರಾಜ್ಯಕ್ಕೆ ಬಂದು ಬಿದ್ದ ಯೂಲಿಸಿಸ್‌ಗೆ— ಈ ಮಾತಿನ ಅರ್ಥ ಸಂಪೂರ್ಣಗೊತ್ತು.

ಯೂಲಿಸಸ್ ಹೋಮರ್‌ನ ಎರಡೂ ಮಹಾ ಕಾವ್ಯಗಳಲ್ಲಿ ಒಂದು ಮುಖ್ಯ ಪಾತ್ರವಾಗಿ ಬರುವುದರಿಂದ, ಸಂಕ್ಷೇಪವಾಗಿ ಎರಡೂ ಮಹಾ ಕಾವ್ಯಗಳ ಹರಹನ್ನು, ಮೌಲ್ಯ ಪ್ರಣಾಲಿಯನ್ನು ಹೋಲಿಸಿದರೆ 'ಒಡಿಸ್ಸಿ'ಯಲ್ಲಿ ತನ್ನ ಅಲೆದಾಟದಲ್ಲಿ ಯೂಲಿಸಿಸ್ ಅರಿತುಕೊಂಡಿದ್ದೇನೆಂಬುದು ಸ್ಪಷ್ಟವಾಗುತ್ತದೆ. (ಮತ್ತು 'ಮಹಾಭಾರತ' ಹಾಗೂ 'ಜೈಮಿನಿ ಭಾರತ'ಗಳ ತುಲನಾತ್ಮಕಅಭ್ಯಾಸಕ್ಕೆ ಇದು ಮುನ್ಸೂಚಿಯನ್ನು ಒದಗಿಸುತ್ತದೆ).

"ಇಲಿಯಡ್"ನಲ್ಲಿ ಯುದ್ಧ ಭೂಮಿಯಲ್ಲಿ ದೊರಕುವ ಯಶಸ್ಸಿಗೆ ಮಹತ್ವವಿದ್ದರೆ 'ಒಡಿಸ್ಸಿ'ಯಲ್ಲಿ ಶಾಂತಿಕಾಲದಲ್ಲಿ ಪ್ರತ್ಯೇಕ ವ್ಯಕ್ತಿಗಳ ಸಂಗದಲ್ಲಿ ದೊರಕುವ ಜ್ಞಾನಕ್ಕೆ ಮಹತ್ವವಿದೆ. 'ಇಲಿಯಡ್'ನ ಯೂಲಿಸಿಸ್ ಅಪಜಯವನ್ನೆ ಕಾಣದ, ತನ್ನ ಧೈರ್ಯ–ಚಾತುರ್ಯಗಳ ಮೂಲಕ ಟ್ರಾಯ್‌ನಗರವನ್ನೇ ಸುಟ್ಟು ನಾಶಮಾಡಿದ ಯೋಧನಾದರೆ, 'ಒಡಿಸ್ಸಿ'ಯಲ್ಲಿ ಅವನ ಪಾಲಿಗೆ ಸಾಲುಸಾಲಾಗಿ ಬರುವುದು ಸೋಲು ಮತ್ತು ಸೆರೆ. ಮೊದಲನೆಯ ಕೃತಿಯಲ್ಲಿ ರಣರಂಗಕ್ಕೆ ಒತ್ತು ಬಿದ್ದರೆ, ಎರಡನೆಯದಲ್ಲಿ ಒತ್ತು ಬೀಳುವುದು ಮನೆಗೆ ಮತ್ತು ದಾಂಪತ್ಯ ಜೀವನಕ್ಕೆ. ಒಟ್ಟಿನಲ್ಲಿ ಸಂಕ್ಷೇಪವಾಗಿ ಹೇಳಬೇಕೆಂದರೆ 'ಒಡಿಸ್ಸಿ'ಯಲ್ಲಿ ಬರುವ ಪರಿಭ್ರಮಣ ಮಾನವನು ಮೃಗತ್ವದಿಂದ ಮಾನವತೆಗೆ, ಯುದ್ಧ ಭೂಮಿಯಿಂದ ಮನೆಗೆ, ಮತ್ತು ಹಿಂಸೆಯಿಂದ ಶಾಂತಿಗೆ ಮರಳಲು ಸದಾ ಯತ್ನಿಸುತ್ತಿರುವುದರ ಚಿರಂತನ ಪ್ರತೀಕ.

ಲಕ್ಷ್ಮೀಶನ "ಜೈಮಿನಿ ಭಾರತ"ಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮುಖ್ಯ ಸ್ಥಾನವನ್ನು ಕೊಟ್ಟರೂ ವಿಮರ್ಶಕರು ಲಕ್ಷ್ಮೀಶನನ್ನು ಪಂಪ–ಕುಮಾರವ್ಯಾಸ ಇವರುಗಳ ಎತ್ತರಕ್ಕೆ ನಿಲ್ಲಿಸುವುದಿಲ್ಲ. ಈ ಮೌಲ್ಯಮಾಪನೆಗೆ ಪ್ರಾಯಶಃ ಎರಡು ಕಾರಣಗಳಿವೆ: ಒಂದು, ಅದು ಸಂಸ್ಕೃತ ಜೈಮಿನಿ ಭಾರತದ ಅನುವಾದವೆಂಬ ಕಾರಣದಿಂದ; ಎರಡನೆಯದು, ಈ ಕಾವ್ಯದಲ್ಲಿ ಲಕ್ಷ್ಮೀಶನು ತನ್ನ ವಿದ್ವತ್ತನ್ನು ಪ್ರದರ್ಶಿಸಲು ಕಾರಣವಿರಲಿ ಇಲ್ಲದಿರಲಿ ಅಲ್ಲಲ್ಲಿ ಅಷ್ಟಾದಶ ಮಹಾವರ್ಣನೆಗಳನ್ನು ಎಳೆದು ತಂದಿದ್ದಾನೆಂಬ ಭಾವನೆಯಿರುವುದರಿಂದ. ಈ ಕಾರಣಗಳಿಂದಾಗಿ ಕನ್ನಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೈಮಿನಿ ಭಾರತದ ಒಂದು ಅತಿಮುಖ್ಯ ಗುಣ ಬೆಳಕಿಗೆ ಬಂದಿಲ್ಲ—ಅದೆಂದರೆ ಪಂಪನಿಂದ ಇಂದಿನವರಿಗೂ ಬೆಳೆದು ಬಂದಿರುವ ಕನ್ನಡ ಕಾವ್ಯ-ಮಹಾಕಾವ್ಯಗಳಲ್ಲೆಲ್ಲಾ ಕಥಾನಾಯಕನೇ ಇಲ್ಲದ, ಕಥಾ ನಾಯಕನ ಜನನದಿಂದ ಪ್ರಾರಂಭಿಸಿ ಅವನ ಮರಣದ ತನಕ ಅಥವಾ ಅವನ ಮಹತ್ಸಾಧನೆಯತನಕ ಕಾಲಾನುಕ್ರಮವಾಗಿ ಕಥೆಹೇಳದ, ಕೇವಲ 'ಸಂಚಾರ'ವನ್ನೇ ವಸ್ತುವಾಗುಳ್ಳ ಮಹಾಕಾವ್ಯ ಕನ್ನಡ ಜೈಮಿನಿ ಒಂದೇ ಎಂಬುದು. ಆ ಕೃತಿ ಅನುವಾದವೇ ಇದ್ದರೂ ಬೇರೆಲ್ಲವನ್ನೂ ಬಿಟ್ಟು 'ಅಲೆದಾಟ'ವನ್ನೇ ಕೇಂದ್ರವನ್ನಾಗಿಸಿಕೊಂಡ ಸಂಸ್ಕೃತ ಜೈಮಿನಿಯನ್ನೇ ಲಕ್ಷ್ಮೀಶ ಆರಿಸಿಕೊಂಡುದು ಅವನ ಕಾವ್ಯ ಮಾರ್ಗದ ಮೇಲೆ ವ್ಯಾಖ್ಯಾನವಾಗುತ್ತದೆಯಲ್ಲವೆ? ಏಕೆಂದರೆ ಕೃತಿಯ ವಸ್ತುವಿನ 'ಆಯ್ಕೆ' ಕೃತಿಕಾರನು ಎತ್ತಿ ಹಿಡಿಯುವ ಮೌಲ್ಯಗಳ ದಾಖಲೆ ತಾನೆ? ಕನ್ನಡ ಜೈಮಿನಿ ಭಾರತವನ್ನು ಕುರಿತು ಅನೇಕ ವ್ಯಾಖ್ಯಾನಗಳು, ವಿಮರ್ಶೆಗಳು ಬಂದಿದ್ದರೂ ಅವುಗಳಲ್ಲಿ ಅತ್ಯಂತ ಮೌಲಿಕವಾದ ಅಧ್ಯಯನವೆಂದರೆ ಡಾ. ವಾಮನ ಬೇಂದ್ರೆಯವರ "ಲಕ್ಷ್ಮೀಶನ ಜೈಮಿನಿ ಭಾರತ: ಒಂದು ಅಧ್ಯಯನ"4 ತಮ್ಮ ಮಹದ್ಗ್ರಂಥದಲ್ಲಿ ವಾಮನ ಬೇಂದ್ರೆಯವರು (1) ಲಕ್ಷ್ಮೀಶನು ಹೇಗೆ ಸಂಸ್ಕೃತದಿಂದ ಕನ್ನಡಕ್ಕೆ ಯಾಂತ್ರಿಕವಾಗಿ ಅನುವಾದ ಮಾಡಿಲ್ಲವೆಂದೂ, (2) ಅನೇಕ ಕಥೆ-ಉಪಕಥೆಗಳಿಂದ ಕೂಡಿದ್ದರೂ ಕನ್ನಡ ಜೈಮಿನಿಯಲ್ಲಿ ಹೇಗೆ ಒಂದು ವಿಶಿಷ್ಟ ಶಿಲ್ಪವಿನ್ಯಾಸದಿಂದ ಕಾವ್ಯಕ್ಕೆ ಭಾವೈಕ್ಯತೆ ದೊರಕಿದೆಯೆಂದೂ, (3) ಎಲ್ಲದಕ್ಕಿಂತ ಮುಖ್ಯವಾಗಿ (ಇದು ವಾಮನ ಬೇಂದ್ರೆಯವರ ಅತ್ಯಂತ ಮೌಲಿಕ ವಿಚಾರವೆಂದು ನನಗೆ ತೋರುತ್ತದೆ) ಸಂಸ್ಕೃತ ಮೂಲದಲ್ಲಿಲ್ಲದ ಋತುವರ್ಣನೆಗಳ ಮೂಲಕ ಅಂದರೆ ಕಾವ್ಯ ವಸಂತ ಋತುವಿನಲ್ಲಿ ಶುರುವಾಗಿ ಇತರ ಋತುಗಳಲ್ಲಿ ಮುಂದುವರಿದು, ಶಿಶಿರ ಋತುವಿನಲ್ಲಿ ಮುಗಿಯುವುದರ ಮೂಲಕ ಲಕ್ಷ್ಮೀಶನು ತನ್ನ ಕಾವ್ಯಕ್ಕೆ ಎಂತಹ ಬಂಧವನ್ನು ಕೊಟ್ಟಿದ್ದಾನೆಂದೂ, ಎಲ್ಲರೂ ಒಪ್ಪುವರೀತಿಯಲ್ಲಿ ಮಂಡಿಸಿದ್ದಾರೆ. ನನ್ನ ಅಭ್ಯಾಸ, ಅವರ ಅನೇಕ ವಿಚಾರಗಳ ಪ್ರಯೋಜನವನ್ನು ಪಡೆದುಕೊಂಡ ಅವರ ಗ್ರಂಥದ ಒಂದು ಅನುಬಂಧವೆಂದು ಹೇಳಬಹುದು. ನಾನು ಕನ್ನಡ ಜೈಮಿನಿ ಭಾರತವನ್ನು ಅದರ ಕಾಲ-ದೇಶಗಳ ವಿಮರ್ಶೆಗೆ ಹೋಗದೆ, ಅದು ಅನುವಾದವೆಂಬುದನ್ನು ಮರೆತು (ಅಂದರೆ ಈ ಕಾವ್ಯದಲ್ಲಿ ಕಂಡು ಬರುವ ಘಟನೆಗಳಿಗೆ, ಅರ್ಥ ವೈಶಾಲ್ಯಕ್ಕೆ ಲಕ್ಷ್ಮೀಶನು ಎಷ್ಟು ಹೊಣೆ ಮತ್ತು ಜೈಮಿನಿ ಮುನಿಯ ಕಾಣಿಕೆಯೆಷ್ಟು ಎನ್ನುವ ವಿಮರ್ಶೆಗೆ ಹೋಗದೆ) ಕನ್ನಡ ಜೈಮಿನಿಯನ್ನು ಇಂದು ನಾವು ಓದಿದರೆ ನಮಗೆ ದೊರಕುವ ಅರ್ಥವೇನು-ಕೃತಿ ಪ್ರತಿಪಾದಿಸುವ ಮೌಲ್ಯಗಳೇನು ಎಂಬುದನ್ನು ಮಾತ್ರ ಚರ್ಚಿಸಿದ್ದೇನೆ.

ಮೇಲುನೋಟಕ್ಕೆ ಕನ್ನಡ ಜೈಮಿನಿಯು ಷಟ್ಪದಿಗಳ ಝೇಂಕಾರವನು ಬಿಟ್ಟರೆ, ಯಮಕ-ಶ್ಲೇಷಾಲಂಕಾರಗಳನ್ನು ಮತ್ತು ಪರಂಪರಾಗತ ಅಷ್ಟಾದಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣನೆಗಳನ್ನುಳ್ಳ ಭಕ್ತಿ ಪಂಥದ ಇತರ ಅನೇಕ ಕೃತಿಗಳಂತೆಯೇ ಇದೂ ಒಂದು ಕೃತಿ–ಇದರಲ್ಲಿ ವಿಶೇಷವೇನೂ ಇಲ್ಲವೆಂದು ಕಾಣುತ್ತದೆ. ಮೊದಲಿನಿಂದ ಕೊನೆಯ ತನಕ ಕೃಷ್ಣಭಕ್ತಿಯನ್ನು ಉಪದೇಶಿಸುವ, ಶಬ್ದಾಡಂಬರದ ಕಾವ್ಯವೆಂದು ತೋರುತ್ತದೆ. ಆದರೆ ಒಂದು ಕೃತಿಯ ಅರ್ಥ ಅದರಲ್ಲಿರುವ ವಿವಿಧ ಸ್ವರೂಪ ವಿನ್ಯಾಸಗಳಲ್ಲಿದ; ಈ ವಿನ್ಯಾಸಗಳು ಉತ್ತಮ ಕಾವ್ಯದಲ್ಲಿ ಒಂದನ್ನೊಂದು ತಾಗಿ, ಘರ್ಷಿಸಿ, ಜತೆಗೂಡಿ, ಒಂದು ಅಪೂರ್ವ ಪಾಕವನ್ನು ಸಿದ್ಧಗೊಳಿಸುತ್ತವೆ; ಮತ್ತು ಹನ್ನೊಂದನೆಯ ಶತಮಾನದ ಸಂಸ್ಕೃತದ ಮಹಾ ವಿಮರ್ಶಕ ಕುಂತಕ ಹೇಳುವಂತೆ ಎಲ್ಲಿ ಶಬ್ದ–ಅರ್ಥಗಳು ಮತ್ತು ಕೃತಿಯ ಅನೇಕ ಭಾಗಗಳು, ಒಂದಕ್ಕೊಂದು 'ಸ್ಪರ್ಧೆ'ಯಲ್ಲಿರುತ್ತವೆಯೋ ಅದು ಸಾಹಿತ್ಯ[5] ಎಂಬ ಅರಿವಿನಿಂದ ನಾವು ಕನ್ನಡ ಜೈಮಿನಿಯನ್ನು ಪರಿಶೀಲಿಸಿದರೆ ಅದೊಂದು ಅತ್ಯಂತ ಗಹನ ಹಾಗೂ ಸಂಕೀರ್ಣ ಕೃತಿ ಎಂದು ಗೊತ್ತಾಗುತ್ತದೆ.

ಮೊದಲಿಗೆ ನಾವು ಕವಿ 'ಯಜ್ಞ'ದ ವಿಷಯ(ಥೀಮ್)ವನ್ನು ಬೆಳೆಸಿರುವ ರೀತಿ, ಅಲ್ಲಲ್ಲಿ ಬರುವ ಕಥೆ–ಉಪಕಥೆಗಳ ಜೋಡಣೆ, ಕೃಷ್ಣಾರ್ಜುನರ ಪಾತ್ರ ಪೋಷಣೆ, ಇವನ್ನು ಪರೀಕ್ಷಿಸೋಣ. 'ಯಜ್ಞ' ಜೈಮಿನಿ ಭಾಗತದ ಕೇಂದ್ರ ವಿಷಯುವಾಗಿರುವುದರಿಂದ (ಏಕೆಂದರೆ ಕಾವ್ಯವು ಪೂರ್ತಾ ಅಶ್ವಮೇಧಯಾಗದ ಬಗ್ಗೆ ತಾನೇ) ಗ್ರಂಥದ ಪ್ರಾರಂಭದಲ್ಲಿಯೇ ನಮಗೆ ಗೊಂದಲ ಉಂಟಾಗುತ್ತದೆ. ಆರ್ಯಾವರ್ತದ ಚಕ್ರಾಧಿಪತಿ, ಪಾಂಡವ ಪ್ರಮುಖ ಧರ್ಮರಾಯನು ಮಾಡಲು ತೊಡಗಿರುವ ಅಶ್ವಮೇಧ ಯಾಗದಲ್ಲಿ ಉಪಯೋಗಿಸುವ ಹಣ ಇತರರದು. (ಮರುತ್ತರಾಯನ ಯಜ್ಞದಲ್ಲಿ ಬ್ರಾಹ್ಮಣರು ಹೊರಲಾರದೆ ಬಿಟ್ಟುಹೋದ ಹಣ). ಮತ್ತು ಅದಕ್ಕೆ ಬೇಕಾದ ಕುದುರೆ ಯೌವನಾಶ್ವನದು. ಇಷ್ಟೇ ಅಲ್ಲದೆ ಮುಖ್ಯ ಕಥಾ ವಸ್ತುವಾದ ಯಜ್ಞದ ವಿಚಾರವನ್ನೇ ಉದ್ದಕ್ಕೂ ರಾಜರ್ಷಿಗಳು ಮತ್ತು ಜ್ಞಾನಿಗಳು ತೆಗಳುತ್ತಾರೆ. ಉದಾಹರಣೆಗೆ ಅಗ್ನಿ ಅರ್ಜುನನೊಡನೆ 'ನಿಮಗೆ ಹರಿ ಸಮೀಪದೊಳಿರ್ದುಮಿವಾಜಿ ಮೇಧಮೇಕೆ—ಅಮೃತ ಮಿರಲಳಗೆಳಸಿದಂತಾಯ್ತು' ಎನ್ನುತ್ತಾನೆ. ಮುಂದೆ ಸೌಭರಿ ಮುನಿಯು "ಸದಾ ಕೃಪಾನಿಧಿಯ ಸಾನ್ನಿಧ್ಯಮಿರುತಿರಲಾಗಿ ವಾಜಿಮೇಧಂಬೇಹುದೆ" ಎಂದು ಅರ್ಜುನನ್ನು ಜರಿಯುತ್ತಾನೆ. ಅಷ್ಟೇ ಅಲ್ಲದೆ "ಹರಿ ಮನೆಯೊಳಿರೆ ಗರ್ದಭಾಕೃತಿಯ ಹರಿಯೊಡನೆ ಬಂದೆ" ಎಂದು ಹೀಗಳೆಯುತ್ತಾನೆ. ಇನ್ನೂ ಮುಂದೆ ಮಯೂರಧ್ವಜ "ಸ್ವಕರಸ್ಥನಾದ ಹರಿಯಂ ಬಿಟ್ಟು ಕಟ್ಟಿದಂ ಗರ್ದಭಾಕೃತಿ ಹರಿಯನು" ಎಂದು ತನ್ನ ಮಗನನ್ನು ಬಯ್ಯುತ್ತಾನೆ.

ಹಾಗಾದರೆ ಇಲ್ಲಿ ಕವಿ ಭಕ್ತ ಪಂಥದವನಾದುದರಿಂದ ಕೃಷ್ಣಭಕ್ತಿಯನ್ನು ತನ್ನ ಕಾವ್ಯದಲ್ಲಿ ಎತ್ತಿ ಹಿಡಿದು ಕರ್ಮನಿಷ್ಠವಾದ ವೈದಿಕ ಮಾರ್ಗವನ್ನು ಅಲ್ಲಗಳೆಯುತ್ತಾನೆಂದು ಹೇಳಬಹುದಲ್ಲಾ? ಅಂದರೆ ಅದೂ ಅಷ್ಟು ಸುಲಭವಾಗುವುದಿಲ್ಲ. "ಅಮೃತಮಿರಲಳಗೆಣಿಸಿದಂತಾಯ್ತು" ಎಂದು ಉಪದೇಶ ಮಾಡುವ ಅಗ್ನಿಯೇ ನೀಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧ್ವಜನ ಮಗಳನ್ನು ಮದುವೆಯಾಗಿ, ಅದು ಕಾರಣ ತನ್ನ ಮಾವನ ರಾಜ್ಯವನ್ನು ಸದಾ ಕಾಯುವ ಸಾಧಾರಣ ಮರ್ತ್ಯಧರ್ಮಕ್ಕೆ ಕಟ್ಟು ಬಿದ್ದಿರುವವನು. ಆತನ ಮಾತನ್ನು ಏನೂ ಪ್ರಶ್ನೆಯಿಲ್ಲದೆ ಒಪ್ಪಿಕೊಳ್ಳಬಹುದೆ? ಹಾಗೆಯೆ "ಮನೆಯಲ್ಲಿ ಹರಿಯೇ ಇರುವಾಗ ನೀನೇಕೆ ಕತ್ತೆಯಂತಿರುವ ಕುದುರೆಯನ್ನು ತಂದೆ" ಎಂದು ಮಗನನ್ನು ಜರಿಯುವ ಮಯೂರಧ್ವಜನೂ ಈ ಸಂಸಾರದ ಕರ್ಮ ಮಾರ್ಗದಲ್ಲಿ ಬಿದ್ದು ತೊಳಲಾಡುವವನೇ— ಅವನೇ ಆರು ಸಲ ಅಶ್ವಮೇಧ ಯಾಗವನ್ನು ಮಾಡಿ ಮತ್ತೆಯೂ ಮಾಡಲು ಉದ್ಯುಕ್ತನಾದವನು. ಮತ್ತೆ ಯಾಗವನ್ನು ಕುರಿತ ಇವನ ಮಾತುಗಳು ಎಷ್ಟು ಗ್ರಾಹ್ಯ?

ಇದೇ ವಿಧದ ಸಂಕೀರ್ಣ ದ್ವಂದ್ವ ಭಾವವನ್ನು (Complex ambience) ನಾವು ಕಾವ್ಯದ ಕಥೆ-ಉಪಕಥೆಗಳ ಜೋಡಣೆಯಲ್ಲಿಯೂ ಕಾಣಬಹುದು. ಒಂದು ಕೃತಿಯಲ್ಲಿ ಅನೇಕ ಕಥೆ-ಉಪಕಥೆಗಳಿದ್ದರೆ (ಸಾಮಾನ್ಯವಾಗಿ 'ಪರಿಭ್ರಮಣ'ವನ್ನು ಪ್ರತೀಕವಾಗಿ ಉಪಯೋಗಿಸುವ ಕೃತಿಗಳಲ್ಲಿ ಅನೇಕ ಕಥೆಗಳಿರುತ್ತವೆ), ಕೃತಿಕಾರ ಅವುಗಳ ಜೋಡಣೆಯಲ್ಲಿ ಅತ್ಯಂತ ಕೌಶಲ್ಯವನ್ನು ತೋರಿಸಿ, ಆ ಜೋಡಣೆಯ ಮೂಲಕವೇ ಒಂದು ಪಾತಳಿಯಲ್ಲಿ ಕೃತಿಯ ಅರ್ಥವನ್ನು ಹೊರ ಹೊಮ್ಮಿಸಬಹುದು. ಈ ದೃಷ್ಟಿಯಲ್ಲಿ ಒಂದು ಅತ್ಯುತ್ತಮ ಮಹಾಕಾವ್ಯವೆಂದರೆ ಮಧ್ಯಕಾಲಿನ ಇಂಗ್ಲೀಷ ಭಾಷೆಯಲ್ಲಿ ಛಾಸರ್ ಮಹಾಕವಿ ರಚಿಸಿರುವ "ಕ್ಯಾಂಟರ್‌ಬರಿ ಟೇಲ್ಸ್". ಈ ಕಾವ್ಯದ ಚೌಕಟ್ಟು ಧಾರ್ಮಿಕ : ಸಂತ ಥಾಮಸ್‌ನ ಚರ್ಚ್ ಇರುವ ಕ್ಯಾಂಟರಬರಿಗೆ ಯಾತ್ರೆ ಮಾಡುವ ೩೧ ಯಾತ್ರಿಕರ ಕಥೆಗಳು. ದಾರಿಯಲ್ಲಿ ಪ್ರತಿಯೊಬ್ಬ ಯಾತ್ರಿಕನೂ ಮತ್ತು ಯಾತ್ರಿಕಳೂ ಒಂದೊಂದು ಕಥೆಯನ್ನು ಹೇಳುತ್ತಾನೆ|ಳೆ. ಇದೇ'ಕ್ಯಾಂಟರ್‌ಬರಿ ಕಥೆಗಳು.'

"ಕ್ಯಾಂಟರ್‌ಬರಿ ಟೇಲ್ಸ್"ನಲ್ಲಿ ಕಂಡು ಬರುವ ಜೋಡಣೆ-ಶಿಲ್ಪವಿನ್ಯಾಸ-ಅಪೂರ್ವ. ಪ್ರತಿಯೊಂದು ಕಥೆಯಲ್ಲಿಯೂ ಕಥೆಗೂ ಆ ಕಥೆಯನ್ನು ಹೇಳುವ 'ಕಥೆಗಾರ'ನಿಗೂ ನಿಕಟ ಸಂಬಂಧವಿದೆ. ಮತ್ತು ಈ ಸಂಬಂಧ, ಮುಖ್ಯತಃ ಮನೋವೈಜ್ಞಾನಿಕ ಪಾತಳಿಯದು.[6] ಇಷ್ಟೇ ಅಲ್ಲದೆ ಕಥೆಗಳ ಜೋಡಣೆಯೂ ತುಂಬ ಅರ್ಥವತ್ತಾಗಿದೆ. ಮೊಟ್ಟ ಮೊದಲನೆಯ ಕಥೆಗಾರ 'ನೈಟ್' (Knight) ಅಂದರೆ ಪ್ರಾಪಂಚಿಕ ವ್ಯವಹಾರದಲ್ಲಿ ಸಮಾಜದ ಅತ್ಯುಚ್ಚ ವರ್ಗಕ್ಕೆ ಸೇರಿದ; ಕೀರ್ತಿ-ಅಧಿಕಾರ-ಸಾಹಸ ಇವುಗಳನ್ನು ಪ್ರತಿನಿಧಿಸುವವನಾದರೆ ಕಾವ್ಯದ ಕೊನೆಯ 'ಕಥೆಗಾರ' ಆಧ್ಯಾತ್ಮಿಕ ವ್ಯವಹಾರದಲ್ಲಿ ಸಮಾಜದಲ್ಲಿ ಪೂಜ್ಯ ಸಾಥನದಲ್ಲಿರುವವನು-ಪಾರ್ಸನ್ (ಪಾದ್ರಿ). ಇವರಿಬ್ಬರ ಮಧ್ಯೆ ಸಮಾಜದ ಎಲ್ಲಾ ವರ್ಗಗಳನ್ನೂ ಪ್ರತಿನಿಧಿಸುವ ಇತರರು-ವೈದ್ಯ; ಕಮ್ಮಾರ, ಬಡಗಿ, ವರ್ತಕ, ಇತ್ಯಾದಿ ಬರುತ್ತಾರೆ. ಅಂದರೆ, ಕಾವ್ಯದ ಒಟ್ಟು ಗತಿ ಪ್ರಾಪಂಚಿಕತೆಯಿಂದ ಆಧ್ಯಾತ್ಮಿಕತೆಗೆ, ಇಹದಿಂದ ಪರದ ಕಡೆಗೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೋಗದಿಂದ ತ್ಯಾಗದ ಕಡೆಗೆ ಇದೆ. ಇಷ್ಟೇ ಅಲ್ಲದೆ ಒಂದು ಕಥೆ ಎತ್ತಿ ಹಿಡಿಯುವ ಮೌಲ್ಯಗಳನ್ನು ಮತ್ತು ಜೀವನ ದೃಷ್ಟಿಯನ್ನು ಮತ್ತೊಂದು ಕಥೆ ಟೀಕಿಸುತ್ತದೆ-ಗೇಲಿ ಮಾಡುತ್ತದೆ. ಹೀಗೆ ಮಂಡನೆ ಮತ್ತು ಖಂಡನೆ, ಮತ್ತೆ ಪುನರ್ಮಂಡನೆ, ಈ ರೀತಿಯಲ್ಲಿ ಛಾಸರನ ಜೀವನ ದೃಷ್ಟಿ ಅವನ ಕಾವ್ಯದಲ್ಲಿ ನಿರೂಪಿತವಾಗಿದೆ. ಈ ಮಾತಿನ ಸಮರ್ಥನೆಗೆ ನಾವು ಕಾವ್ಯದ ಮೊದಲು ಬರುವ "ನೈಟ್ ಟೇಲ್" ಮತ್ತು "ಮಿಲರ್ಸ್ ಟೇಲ್" ಇವುಗಳನ್ನು ನೋಡಬಹುದು.

"ನೈಟ್ಸ್ ಟೇಲ್" ಪ್ರಣಯ-ಸಾಹಸಗಳ ಕಥೆ (heroic tale). ಇದರಲ್ಲಿ ಆರ್ಸಿಟೆ ಮತ್ತು ಪಲಮನ್ ಎಂಬ ಇಬ್ಬರು ಯುವಕರು ಎಮಿಲಿಯೆಂಬ ರಾಜಕುಮಾರಿಯನ್ನು ಪ್ರೀತಿಸುತ್ತಾರೆ. ಈ ಪ್ರಣಯ ತ್ರಿಕೋನವನ್ನು ಜಟಿಲಗೊಳಿಸುವ ಸಂಗತಿಯೆಂದರೆ ಎಮಿಲಿಯನ್ನು ಕುರಿತು ಇರುವ ಇಬ್ಬರೂ ಯುವಕರ ಸಮಾನ ಪ್ರೇಮ ಮತ್ತು ಸಮಾನ ಧೈರ್ಯ-ಸಾಹಸಗಳು. ಅಲ್ಲದೆ ಎಮಿಲಿಯು ಇಬ್ಬರನ್ನೂ ಸಮನಾಗಿ ಕಾಣುತ್ತಾಳೆ. ಈ ಸಂದರ್ಭದಲ್ಲಿ ಎಮಿಲಿ ಯಾರಿಗೆ ಸೇರಬೇಕು? ನಿರ್ಧರಿಸಲು ನಡೆಯುವ ಯುದ್ಧದಲ್ಲಿ ಆರ್ಸಿಟೆ ವಿಜಯಿಯಾದರೂ ವಿವಾಹ ಪೂರ್ವವೇ ಮರಣ ಹೊಂದುತ್ತಾನೆ ಮತ್ತು ಕೊನೆಗೆ ಎಮಿಲಿ-ಪಲಮನ್ ಇವರ ವಿವಾಹವಾಗುತ್ತದೆ. ಒಟ್ಟಿನಲ್ಲಿ ಕಥೆ ಪ್ರೇಮ ಮತ್ತು ಸಾಹಸ ಈ ಎರಡು ಗುಣಗಳನ್ನು ಆದರ್ಶಗಳನ್ನಾಗಿ ಎತ್ತಿ ಹಿಡಿಯುತ್ತದೆ.

ಈ ಕಥೆಯಾದ ಕೂಡಲೇ ಬರುತ್ತದೆ "ಮಿಲರ್ಸ್ ಟೇಲ್" ಇದು ಒಂದು 'ಫಾಬ್ಲಿಯೊ' ಅಂದರೆ ಜನಸಾಮಾನ್ಯರು ಸಮಾಜದ ಮೇಲು ವರ್ಗದ ಜನರನ್ನು ಗೇಲಿ ಮಾಡಲು ರಚಿಸುವ ಕಥಾಪ್ರಕಾರ. ಇದರಲ್ಲಿಯೂ ಒಂದು ಪ್ರಣಯ ತ್ರಿಕೋನ ವಿದೆ. ಊರಿನ ಮೂರ್ಖ ಬಡಗಿಯ ಹೆಂಡತಿಯನ್ನು ನಿಕಲಸ್ ಮತ್ತು ಅಬ್ಸಲಾಮ್ ಎಂಬ ಇಬ್ಬರು ಉಡಾಳ ತರುಣರು ಕಾಮಿಸುತ್ತಾರೆ. ನಿಕಲಸ್ ಆ ಬಡಗಿಗೆ ಒಂದು ದಿನ ಜಲ ಪ್ರಳಯವಾಗುತ್ತದೆಂದೂ, ಆದರಿಂದ ಪಾರಾಗಲು ರಾತ್ರಿಯಲ್ಲಾ ಮನೆಯ ಸೂರಿನಿಂದ ಇಳಿಬಿದ್ದ ದೊಡ್ಡ ಟಬ್‌ನಲ್ಲಿ ಕುಳಿತು ದೇವರ ಪ್ರಾರ್ಥನೆ ನಡೆಸಬೇಕೆಂತಲೂ ಹೇಳುತ್ತಾನೆ. ಇವನ ಮಾತನ್ನು ನಂಬಿದ ಬಡಗಿ ಅಂತೆಯೇ ರಾತ್ರಿ ಮಹಡಿ ಏರಿ ಟಬ್‌ನಲ್ಲಿ ಕುಳಿತು ಪ್ರಾರ್ಥಿಸುತ್ತಿರುವಾಗ ಕೆಳಗೆ ನಿಕಲಸ್ ಅವನ ಹೆಂಡತಿಯೊಡನೆ ರಮಿಸಲುದ್ಯುಕ್ತನಾಗುತ್ತಾನೆ.ಆದರೆ ಅದೇ ಸಮಯದಲ್ಲಿ ಅಲ್ಲಿಗೆ ಬಂದ ಅಬ್ಸಲಾಮ್ ಆ ಬಡಗಿಯ ಹೆಂಡತಿಯನ್ನು ತನಗೊಂದು ಮುತ್ತು ಕೊಡೆಂದು ಪೀಡಿಸುತ್ತಾನೆ. ಮತ್ತು ಕತ್ತಲೆಯಲ್ಲಿ ಕಿಟಕಿಯಿಂದ ಹೊರ ಚಾಚಿದ ನಿಕಲಸ್‌ನ ಪೃಷ್ಠ ಭಾಗಕ್ಕೆ ಮುತ್ತು ಕೊಡುತ್ತಾನೆ. ನಿಕಲಸ್‌ನ ಮೋಸ ತಿಳಿದು ಅನಂತರ ಅವನು ತನ್ನ ಮನೆಗೆ ಹೋಗಿ ಒಂದು ಕೆಂಪಗೆಕಾಯಿಸಿದ ಕಬ್ಬಿಣದ ಸಲಾಕಿಯಿಂದ ನಿಕಲಸ್‌ಗೆ ಬರೆಯಿಡುತ್ತಾನೆ. ಉರಿ ತಡೆಯಲಾಗದೆ ನಿಕಲಸ್ 'ನೀರು ನೀರು' ಎಂದು ಕಿರುಚಿದುದನ್ನು ಕೇಳಿದ ಆ ಬಡಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಲ ಪ್ರಳಯವಾಯಿತೆಂದು ಹೆದರಿಕೆಯಿಂದ ಹಗ್ಗವನ್ನು ಕತ್ತರಿಸಿ ಕೆಳಗೆ ಬೀಳುತ್ತಾನೆ.

ಅಂದರೆ "ನೈಟ್ಸ್ ಟೇಲ್" ನಲ್ಲಿ ಅತ್ಯಂತ ಗಂಭೀರವಾಗಿ, ಆದರ್ಶದ ನೆಲೆಯಲ್ಲಿ ಚಿತ್ರಿಸಲ್ಪಟ್ಟ ಪ್ರೇಮ-ಸಾಹಸ ಮುಂತಾದ ಮೌಲ್ಯಗಳನ್ನು ಕೂಡಲೇ ಛಾಸರ್ ತನ್ನ ಮುಂದಿನ ಕಥೆಯ ಮೂಲಕ ಗೇಲಿ ಮಾಡುತ್ತಾನೆ. ಪ್ರೇಮವನ್ನು ವ್ಯಭಿಚಾರದ ಮಟ್ಟಕ್ಕೆ ಇಳಿಸಿ, ಸಾಹಸವನ್ನು ಮೋಸವನ್ನಾಗಿ ಮಾರ್ಪಡಿಸಿ ಹಾಸ್ಯದ ವಾತಾವರಣದಲ್ಲಿ ಎಲ್ಲಾ ಆದರ್ಶಗಳಿಗೂ ಮತ್ತೊಂದು ರೂಪವೂ ಇರುತ್ತದೆ ಎನ್ನುವ ಸತ್ಯವನ್ನು ತೋರಿಸುತ್ತಾನೆ. ಹೀಗೆಯೇ ಒಂದೈದಾರು ಕಥೆಗಳಲ್ಲಿ ಮತ-ಧರ್ಮಗಳ ವಿವಿಧ ರೂಪಗಳನ್ನೂ ಮತ್ತು ಕೆಲವು ಕಥೆಗಳಲ್ಲಿ ದಾಂಪತ್ಯ ಜೀವನವನ್ನು ವಿವಿಧ ದೃಷ್ಟಿಕೋನಗಳಿಂದ ನೋಡಿ ಯಾವುದಕ್ಕೂ ತನ್ನ ಒಪ್ಪಿಗೆ ಸಂಪೂರ್ಣ ಸೂಚಿಸದೆ ಎಲ್ಲ ಮುಖಗಳನ್ನೂ ಒಂದು ಮಟ್ಟದಲ್ಲಿ ಅಂಗೀಕರಿಸಿ ಒಂದು ಅಪೂರ್ವ ಜೀವನ ದೃಷ್ಟಿಯನ್ನೂ ಅನುಭವವನ್ನೂ ಛಾಸರ್ ತನ್ನ ಕಾವ್ಯದ ಮೂಲಕ ಕೊಡುತ್ತಾನೆ. ಒಬ್ಬನ ಮುಖಾಂತರ ಒಂದು ವಿಚಾರವನ್ನು ಗಂಭೀರವಾಗಿ ಮಂಡಿಸಿ, ಮತ್ತೊಬ್ಬನ ಮೂಲಕ ಆ ವಿಚಾರವನ್ನು ಅಲ್ಲಗಳೆದು, ಇನ್ನೊಬ್ಬನ ಮೂಲಕ ಆ ಅಲ್ಲಗಳೆಯುವಿಕೆಯನ್ನು ಅಲ್ಲಗಳೆದು-ಹೀಗೆ ಸಾಗುತ್ತಸೆ ಛಾಸರ್‌ನ ಕ್ಯಾಂಟರ್‌ಬರಿಯ ಯಾತ್ರೆ.

ಜೈಮಿನಿ ಭಾರತದಲ್ಲಿನ ಕಥಾ ಜೋಡಣೆ ಇಷ್ಟು ವೈವಿಧ್ಯಮಯವಾಗಿಲ್ಲದಿದ್ದರೂ (ಏಕೆಂದರೆ ಅವನ ಕಾವ್ಯದಲ್ಲಿ ಬರುವ ಹೆಚ್ಚು ಕಮ್ಮಿ ಎಲ್ಲಾ ಪಾತ್ರಗಳೂ ಒಂದೇ ವರ್ಗಕ್ಕೆ ಸೇರಿದವರು-ಉತ್ತಮ ಕ್ಷತ್ರಿಯಕುಲ ಸಂಜಾತರು ಮತ್ತು ವೀರರೂ ಆದ್ದರಿಂದ) ಮೂಲತಃ ಇದೇ ಪ್ರಕಾರಕ್ಕೆ ಸೇರಿದುದೇ. ಜೈಮಿನಿ ಭಾರತವೂ ಮೊದಲು ಅಪ್ರತಿಮ ವೀರ ಮತ್ತು ಯಜ್ಞೇಶ್ವರನಿಗೆ ಹೆಣ್ಣು ಕೊಟ್ಟ ನೀಲಧ್ವಜನ ಕಥೆಯಿಂದ ಪ್ರಾರಂಭವಾಗಿ ಎಲ್ಲವನ್ನೂ ತ್ಯಜಿಸಿ ಪರಮ ಹಂಸನಾದ ಬಕದಾಲ್ಭ್ಯನ ಕಥೆಗೆ ಕೊನೆಗೊಳ್ಳುತ್ತದೆ. (ಕಾವ್ಯದ ಅಶ್ವಮೇಧ ಯಾಗದ ಚೌಕಟ್ಟನ್ನು ಬಿಟ್ಟು ಹೇಳುವುದಾದರೆ) ಅಂದರೆ ಇಲ್ಲಿಯೂ ಕಥೆಯ ಗತಿ ಇಹದಿಂದ ಪರದ ಕಡೆಗೇ ಇದೆ. ಅಲ್ಲದೇ ಈ ಕಥಾ ನಾಯಕರೂ ಕೂಡ ತಮ್ಮ 'ಸಂತತೆ' (Saintliness) ಯ ದೃಷ್ಟಿಯಿಂದ ನೀಲ ಧ್ವಜನಿಂದ ಶುರುವಾಗಿ ಚಂದ್ರಹಾಸ ಮತ್ತು ಬಕದಾಲ್ಭ್ಯನವರೆಗೆ ಹೆಚ್ಚು ಹೆಚ್ಚು ಜ್ಞಾನಿಗಳಾಗುತ್ತಾ ಹೋಗುತ್ತಾರೆ. ಅಲ್ಲದೆ, "ಕ್ಯಾಂಟರ್‌ಬರಿ ಟೇಲ್ಸ್"ನಲ್ಲಿಯಂತೆ ಒಂದು ಕಥೆಯ ಕೇಂದ್ರವನ್ನು ಮತ್ತೊಂದು ಕಥೆ ಹಾಸ್ಯದ ಮೂಲಕ ತಿರಸ್ಕರಿಸುತ್ತದೆ. ನಿದರ್ಶನವಾಗಿ ಒಂದೆರಡು ಕಥೆಗಳನ್ನು ನೋಡೋಣ:

ಕಾವ್ಯದ ಚೌಕಟ್ಟನಲ್ಲಿ ಬರುವ ಮೊದಲ ಕಥೆ ಯೌವನಾಶ್ವನ ಕಥೆ. ಭದ್ರಾವತಿಯ ರಾಜ ಯೌವನಾಶ್ವ ಶೂರ, ಪರಾಕ್ರಮಿ ಮತ್ತು ಧರ್ಮಿಷ್ಠ. ಅವನಿಗೆ ಸೇರಿದ ಕುದುರೆಯನ್ನು ಭೀಮ ಮತ್ತು ವೃಷಕೇತು ಕದ್ದೊಯ್ಯಲು ಪ್ರಯತ್ನಿಸಿದಾಗ ತನ್ನ ಕ್ಷಾತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರ್ಮಕ್ಕನುಗುಣವಾಗಿ ಯುದ್ಧ ಮಾಡಿ,ತನ್ನ ಪರಾಕ್ರಮವನ್ನು ಮೆರೆದ ಮೇಲೆ ಧರ್ಮ ರಾಯನ ಸ್ನೇಹಿತನಾಗಿ ಯಾಗಕ್ಕೆ ಸಹಾಯ ಮಾಡಲು ಒಪ್ಪಿಕೊಳ್ಳುತ್ತಾನೆ. ಈ ಪ್ರಕರಣ ಎತ್ತಿ ತೋರಿಸುವ ಮುಖ್ಯ ವಿಷಯಗಳೆಂದರೆ ಯಜ್ಞ ಕ್ರಿಯೆಯ ಮತ್ತು ಯಜ್ಞಾಶ್ವದ ಮಹತ್ವ, ರಾಜಧರ್ಮ, ಮತ್ತು ಔದಾರ್ಯ. ಆದರೆ ಈ ಕಥೆಯಾದ ಕೂಡಲೇ ಬರುತ್ತದೆ, ವ್ಯಾಸನಿಂದ ಧರ್ಮರಾಯನಿಗೆ ಹೇಳಲ್ಪಟ್ಟ ಮರುತ್ತರಾಯನ ಕಥೆ. ಈ ಕಥೆಯಲ್ಲಿ ಮರುತ್ತ ರಾಜನು ಅಶ್ವಮೇಧ ಯಾಗವನ್ನು ಮಾಡಲು ಯೋಜಿಸಿ ಬೃಹಸ್ಪತಿಯನ್ನು ಪುರೋಹಿತನಾಗಲು ಪ್ರಾರ್ಥಿಸಿದರೆ. ಮನುಷ್ಯರ ಯಜ್ಞಕ್ಕೆ ದೇವ ಪುರೋಹಿತ ಬೃಹಸ್ಪತಿ ಹೋಗಬಾರದೆಂದು ಇಂದ್ರ ತಡೆಯುತ್ತಾನೆ. ಕೊನೆಗೆ ನಾರದನ ಸೂಚನೆಯ ಮೇರೆ ಬೃಹಸ್ಪತಿಯ ದಾಯಾದಿ ಸಂವರ್ತನನ್ನು ಮರುತ್ತನು ಕೇಳಿಕೊಳ್ಳುತ್ತಾನೆ. ಸಂವರ್ತನು ಒಪ್ಪಿಕೊಂಡು ಯಾಗವನ್ನು ಪ್ರಾರಂಭ ಮಾಡಿಸಿದಾಗ ಬೃಹಸ್ಪತಿಗೆ ತುಂಬಾ ಮಾತ್ಸರ್ಯವುಂಟಾಗುತ್ತದೆ. ಈ ಯಾಗದಿಂದ ತನ್ನ ತಮ್ಮನಿಗೆ ತುಂಬಾ ಹಣ ಸಿಕ್ಕುತ್ತದಲ್ಲಾ ಎಂಬ ವಿಚಾರದಿಂದ. ಅದ್ದರಿಂದ ಬೃಹಸ್ಪತಿ ಇಂದ್ರನ ಬಳಿಗೆ ಬಂದು ಮರುತ್ತನ ಯಾಗಕ್ಕೆ ವಿಘ್ನವನ್ನುಂಟು ಮಾಡಲು ಪ್ರಾರ್ಥಿಸಿಕೊಳ್ಳುತ್ತಾನೆ. ಹೀಗೆ ಕಥೆ ಮುಂದುವರಿಯುತ್ತದೆ.

ಅಂದರೆ, ಮರುತ್ತನ ಕಥೆ ಇಲ್ಲಿಯ ತನಕ ಕಾವ್ಯವು ಗಂಭೀರವಾಗಿ ಚಿತ್ರಿಸಿಕೊಂಡು ಬಂದಿರುವ ವಿಚಾರಗಳನ್ನು ಧರ್ಮರಾಜನ ಶೋಕ, ಅಶ್ವಮೇಧ ಯಾಗದ ಶ್ರೇಷ್ಠತೆ, ಆ ಯಾಗದ ಪಶುವಿಗಾಗಿ ಭೀಮ–ವೃಷಕೇತು ಇವರುಗಳು ಮಾಡುವ ಸಾಹಸ, ಯೌವನಾಶ್ವನ ಪರಾಕ್ರಮ ಮತ್ತು ಔದಾರ್ಯ–ಈ ಎಲ್ಲಾ ವಿಷಯಗಳನ್ನೂ ಲಘುವಾಗಿ ಚಿತ್ರಿಸುವುದರ ಮೂಲಕ ಅವುಗಳನ್ನು ಆದರ್ಶ ಲೋಕದಿಂದ ಕೆಳಗೆಳೆಯುತ್ತದೆ. ಯಜ್ಞಕ್ಕೆ ಅತಿ ಮುಖ್ಯವಾದವನೇ ಪುರೋಹಿತ. ಮರುತ್ತನ ಕಥೆಯಲ್ಲಿ ಬರುವ ಒಬ್ಬ ಪುರೋಹಿತ–ಬೃಹಸ್ಪತಿ–ತನ್ನೊಡೆಯನ ಮಾತಿನಂತೆ ನಡೆಯುವ ಬೆನ್ನೆಲುಬಿಲ್ಲದಿರುವ ಮತ್ತು ತಮ್ಮನ ಏಳಿಗೆಯನ್ನು ತಾಳಲಾರದೇ ಕರುಬುವಂತಹ ಹೀನ ಮನುಷ್ಯ. ಇನ್ನೊಬ್ಬ ಪುರೋಹಿತನಾದ ಸಂವರ್ತನೂ ದಾಯಾದಿ ಮತ್ಸರದಿಂದ ಬೇಯುತ್ತಿರುವ ಮತ್ತು ಧನಲೋಭವಿರುವ ಸಾಮಾನ್ಯ ವ್ಯಕ್ತಿ. ಅಲ್ಲದೆ ಯಜ್ಞದಲ್ಲಿ ಬಂದು ಹವಿಸ್ಸನ್ನು ಸ್ವೀಕರಿಸುವ ದೇವತೆಗಳ ರಾಜ ಇಂದ್ರ. ಅವನು ಈ ಕಥೆಯಲ್ಲಿ ಮಾನವರ ಏಳ್ಗೆಯನ್ನು ಸಹಿಸಲಾರದ, ಸೇಡು ತೀರಿಸಲು ಏನು ಮಾಡಲೂ ಹೇಸದ ಕ್ರೂರಿ ಮತ್ತು ಸ್ವಾರ್ಥಿ. ಪುರೋಹಿತರು ಮತ್ತು ದೇವದೇವತೆಗಳೇ ಹೀಗಿರುವಾಗ ಅವರುಗಳನ್ನೊಳಗೊಂಡ ಯಜ್ಞಕ್ಕೆ ಯಾವ ಬೆಲೆಯಿದೆ? ಈ ಕಥೆಯಲ್ಲಿ ಶೌರ್ಯಕ್ಕೆ ವಿರುದ್ಧವಾಗಿ ಮೋಸ; ಔದಾರ್ಯಕ್ಕೆ ವಿರುದ್ಧವಾಗಿ ಸ್ವಾರ್ಥ ತುಂಬಿವೆ. ಅಂದರೆ ಕಾವ್ಯ ಯೌವನಾಶ್ವನ ಕಥೆಯಲ್ಲಿ ಪ್ರತಿಪಾದಿಸಿದ ಗುಣಗಳನ್ನು ಮರುತ್ತನ ಕಥೆಯಲ್ಲಿ ಪುರೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿತರನ್ನೂ ದೇವದೇವತೆಗಳನ್ನೂ ಅಪಹಾಸ್ಯ ಮಾಡುವುದರ ಮೂಲಕ ಅಲ್ಲಗಳೆ ಯುತ್ತದೆ.

ಇದೇ ರೀತಿ ನೀಲಧ್ವಜನ ಕಥೆ ಜ್ವಾಲೆಯ ಪಾತ್ರದ ಮುಖಾಂತರ ಸ್ತ್ರೀಯ ಛಲ ಮತ್ತು ಅಭಿಮಾನಗಳನ್ನು ಗಂಭೀರವಾಗಿ ಚಿತ್ರಿಸಿದರೆ, ಅದಾದ ಕೂಡಲೇ ಬರುವ ಚಂಡಿಯ ಕಥೆಯಲ್ಲಿ ಸ್ತ್ರೀಯ ಹಠಮಾರಿತನವನ್ನು (ಅದೂ ಛಲದ ಮತ್ತೊಂದು ರೂಪವೇ) ಲಘು ಧಾಟಿಯಲ್ಲಿ ಚಿತ್ರಿಸಿ ಒಂದು ದೃಷ್ಟಿಯಲ್ಲಿ ಜ್ವಾಲೆಗೂ ಚಂಡಿಗೂ ಏನೂ ವ್ಯತ್ಯಾಸವಿಲ್ಲವೆಂದು ತೋರಿಸುತ್ತದೆ. ಚಂಡಿ ಕಥೆಯ ನಂತರ ಬರುವ ವೃತ್ತಾಂತ ಗಳಲ್ಲಿ ಪತಿ ಸಮಾಗಮವನ್ನು ಬಯಸುವ ಪ್ರಭಾವತಿ, ಪಾರ್ವತಿ ಮತ್ತು ಪ್ರಮೀಳೆ ಯರನ್ನು ಕವಿ ಚಿತ್ರಿಸುತ್ತಾನೆ. ಸುರತ ಸುಖಕ್ಕಾಗಿ ಮೇಲೆ ಬೀಳುವ ಪ್ರಭಾವತಿ ಕೀಳು; ತಪಸ್ಸು ಮಾಡಿ ಶಿವನನ್ನು ಒಲಿಸಿ ವರಿಸುವ ಪಾರ್ವತಿ ಮೇಲು –ಮತ್ತು ಸ್ತ್ರೀ ರಾಜ್ಯದ ರಾಣಿಯಾಗಿ ಅರ್ಜುನನ ಸಂಗಕ್ಕೆ ಕಾತರಿಸುವ ಪ್ರಮೀಳೆ ಇವರಿಬ್ಬರಿಗಿಂತಲೂ ಭಿನ್ನ —ಎಂದು ನಮಗೆ ತೋರುವುದು ಸರಿಯೇ? ಇವರುಗಳಲ್ಲಿ ಕಂಡು ಬರುವ ವ್ಯತ್ಯಾಸಗಳು ಕೇವಲ ದೃಷ್ಟಿಕೋನದ ವ್ಯತ್ಯಾಸವಲ್ಲವೆ? ಎಂದೆಲ್ಲಾ ಮೂಲಭೂತ ಪ್ರಶ್ನೆಗಳನ್ನು ಕಾವ್ಯ ಎತ್ತುತ್ತದೆ.

ಆದರೆ ಎಲ್ಲಾ ಕಥೆಗಳ ಜೋಡಣೆಯೂ ಕೇವಲ ಪರಸ್ಪರ ವಿರುದ್ಧವಾಗಿಯೇ ಇವೆಯೆಂದಲ್ಲ. ಹಾಗಿದ್ದರೆ ಆ ಜೋಡಣೆಯೂ ಯಾಂತ್ರಿಕವಾಗುತ್ತದೆ. ಕೆಲವು ಕಡೆ ಒಂದು ಕಥೆ ಇನ್ನೊಂದು ಕಥೆಯ ಸಮಾನಾಂತರ ರೂಪವಾಗಿ ಆ ಮೊದಲಿನ ಕಥೆಯ ಅರ್ಥವನ್ನು ಹೆಚ್ಚಿಸುತ್ತದೆ. ಅರ್ಜುನ–ಬಭ್ರುವಾಹನರ ಮತ್ತು ರಾಮ –ಲವಕುಶರ ಕಥೆಗಳು ಈ ರೀತಿಯವು. ತನ್ನ ಅಹಂಭಾವದಿಂದ ಮತ್ತು ತೋಳ್ಬಲದ ಗರ್ವದಿಂದ ತನ್ನ ಪತ್ನಿ –ಪುತ್ರರನ್ನು ನಿರಾಕರಿಸುವ ಅರ್ಜುನನಿಗೆ ತನ್ನ ಮಗನ ಕೈಯಿಂದಲೇ ಆಗುವ ಸೋಲು ಮತ್ತು ಸಾವು ಕೇವಲ ಅಕಸ್ಮಿಕವಲ್ಲ; ಆ ವಿಧದ ಅಪರಾಧಕ್ಕೆ ಅದೇ ತರಹ ಶಿಕ್ಷೆ ಯಾವಾಗಲೂ ಆಗುವುದೇ ಎಂಬ ಒಂದು ವೈಯಕ್ತಿಕ ಅನುಭವವನ್ನೂ ಸಾರ್ವಜನಿಕ ಸತ್ಯವನ್ನಾಗಿ ತೋರಿಸಲು ಬಭ್ರುವಾಹನನ ಕಥೆಯ ಮಧ್ಯದಲ್ಲಿಯೇ ಕವಿ ರಾಮನ ಕಥೆಯನ್ನು ತರುತ್ತಾನೆ. ತ್ರೇತಾಯುಗದ ಯುಗಪುರುಷ ಲೋಕೋ ತ್ತರ ರಾಮನಿಗೂ ತನ್ನ ಪತ್ನಿಯನ್ನು ವಿನಾ ಕಾರಣ ತ್ಯಜಿಸಿದುದಕ್ಕೆ ತನ್ನ ಮಕ್ಕಳ ಕೈಯಲ್ಲಿ ಸೋಲುಂಟಾದರೆ, ದ್ವಾಪರಯುಗದ ಅರ್ಜುನನಿಗೆ ಹಾಗಾಗುವುದರಲ್ಲಿ ಆಶ್ಚರ್ಯವೇನಿದೆ? ಅಂದರೆ ಈ ಎರಡೂ ಕಥೆಗಳ ಮೂಲಕ ಕವಿ ರಾಜತ್ವ ಮತ್ತು ಕ್ಷಾತ್ರ ಧರ್ಮವನ್ನು ನಿರಾಕರಿಸಿ ದಾಂಪತ್ಯ ಧರ್ಮವನ್ನು ಮತ್ತು ಸಂಸಾರದಲ್ಲಿ ಸ್ತ್ರೀಗೆ ಇರಬೇಕಾದ ಸ್ಥಾನವನ್ನೂ ಒಪ್ಪಿಕೊಳ್ಳುತ್ತಾನೆ. ರಾಜ ಮಹಾರಾಜರೇ ನಾಯಕ ರಾಗಿರುವ ಕಾವ್ಯದಲ್ಲಿ ಕವಿಯ ಈ ಒಲವು ವಿಶೇಷವೇ ಸರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡ ಜೈಮಿನಿ ಭಾರತದ ನಾಯಕ ಕೃಷ್ಣನೆಂದು ಎಲ್ಲರೂ ಒಪ್ಪುವ ಮಾತೇ. ಕಾವ್ಯದ ಮುಖ್ಯ ಪಾತ್ರಗಳೆಲ್ಲರೂ ಕೃಷ್ಣಭಕ್ತಿಯಿಂದ ಪುನೀತರಾಗಿರುವವರೇ ಮತ್ತು ಕೃಷ್ಣಸ್ತುತಿಯಲ್ಲಿ ಕವಿ ಅನೇಕ ಕಡೆ ಭಕ್ತಿ ಪರವಶನಾಗಿ ತನ್ನನ್ನೇ ತಾನು ಮರೆಯುತ್ತಾನೆ. ಇದು ಕಾವ್ಯದ ಒಂದು ಪಾತಳಿಯಲ್ಲಿ; ಆದರೆ ಮತ್ತೊಂದು ಪಾತಳಿಯಲ್ಲಿ ಕಾವ್ಯ ಕೃಷ್ಣನ ಪಾತ್ರವನ್ನು ಸಂಕೋಚ ಗೊಳಿಸುತ್ತದೆ ಮತ್ತು ಕೃಷ್ಣನನ್ನು ಕುರಿತೂ ಕೆಲವು ಕಡೆ ದ್ವಂದ್ವ ಭಾವವನ್ನು ತೋರುತ್ತದೆಂಬ ವಿಚಾರವನ್ನು ವಿಮರ್ಶಕರು ಗಮನಿಸಿದಂತೆ ತೋರುವುದಿಲ್ಲ. ನನ್ನ ದೃಷ್ಟಿಯಲ್ಲಿ ಕೃಷ್ಣನ ಪಾತ್ರವನ್ನು ಕವಿಯು ನೇರವಾಗಿಯೂ ಮತ್ತು ಧ್ವನಿಯ ಮೂಲಕವೂ ಬಹಳಷ್ಟು ಕುಗ್ಗಿಸುತ್ತಾನೆ.

ನೇರವಾಗಿ ಕೃಷ್ಣನ ಪಾತ್ರವನ್ನು ಸಂಕೋಚಗೊಳಿಸಿ 'humanise-anise' ಮಾಡಿರುವುದನ್ನು ನಾವು ಅವನಿಗೆ ಯಾತ್ರೆಯ ಸಂದರ್ಭಗಳಲ್ಲಿ ಬರುವ ಸೋಲುಗಳಲ್ಲಿ ಕಾಣಬಹುದು. ಕಾವ್ಯ ಪ್ರಾರಂಭದಲ್ಲಿಯೇ ಅದ್ವಿತೀಯ ವೀರನಾದ ಕೃಷ್ಣ ಅನುಸಾಲ್ವನೊಡನೆ ಆದ ಯುದ್ಧದಲ್ಲಿ ಸೋತು ಹಿಂದಿರುಗಿದಾಗ ಸತ್ಯಭಾಮೆ ಅವನನ್ನು ಹಂಗಿಸುತ್ತಾಳೆ.

"ದಾನವನಿಗೆ ಇದಿರಾಗಿ ಕಾದಿ ಪ್ರಾಣದಾನವನ್ನು ಪಡೆದು ಹಿಂತಿರುಗಿರುವ ನಿನ್ನ ಶೌರ್ಯವನ್ನು ನಾನು ಹೇಗೆ ತಾನೇ ವರ್ಣಿಸಲಿ?" ಎನ್ನುತ್ತಾಳೆ. ಕೃಷ್ಣನಿಂದ ಸೋಲಿಸಲಾಗದ ಅನುಸಾಲ್ವನನ್ನು ವೃಷಕೇತು ಸೋಲಿಸುತ್ತಾನೆ. ಮುಂದೆ ತಾಮ್ರಧ್ವಜನೊಡನೆ ಆದ ಯುದ್ಧದಲ್ಲಿ ಕೃಷ್ಣ ಮತ್ತೆ ಸೋಲುತ್ತಾನೆ. ಸೋತ ನಂತರ "ಚೋರ ಬುದ್ಧಿಯಲ್ಲಿ" ವಿಪ್ರವೇಷವನ್ನು ಧರಿಸಿ ಮಯೂರ ಧ್ವಜನನ್ನು ಪರೀಕ್ಷಿಸಿದಂತೆ ಮಾಡಿ ಆ ಸೋಲನ್ನು ಮುಚ್ಚುತ್ತಾನೆ. ಅಂದರೆ ಭಾಗವತದ ಸರ್ವಶಕ್ತ ಕೃಷ್ಣನಿಗೂ ಮಹಾಭಾರತದ ಆಪದ್ಬಾಂಧವ ಕೃಷ್ಣನಿಗೂ ಮತ್ತು ಜೈಮಿನಿಯ ಕೃಷ್ಣನಿಗೂ ಬಹಳಷ್ಟು ವ್ಯತ್ಯಾಸವಿದೆ.

ಅಷ್ಟೇ ಅಲ್ಲದೆ ಸೂಚ್ಯವಾಗಿಯೂ ಕವಿ ಕೃಷ್ಣನ ಪಾತ್ರವನ್ನು ಕುಗ್ಗಿಸಿದ್ದಾನೆ. ನಗರ ವರ್ಣನೆ, ವೇಶ್ಯಾವರ್ಣನೆ, ದ್ಯೂತ ವರ್ಣನೆ ಇವುಗಳು ಪರಂಪರಾಗತವಾದ ಮಹಾಕಾವ್ಯದ ಲಕ್ಷಣಗಳು. ಆದರೆ ಲಕ್ಷ್ಮೀಶನು ಅವನ್ನು ಅದೆಷ್ಟು ಸಮರ್ಥವಾಗಿ ಉಪಯೋಗಿಸಿಕೊಂಡಿದ್ದಾನೆಂಬುದನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಜೈಮಿನಿ ಭಾರತದಲ್ಲಿ ವರ್ಣಿಸಲ್ಪಟ್ಟಿರುವ ಪ್ರಮುಖ ನಗರಗಳು ಆರು: ಹಸ್ತಿನಾಪುರ, ಭದ್ರಾವತಿ, ದ್ವಾರಕೆ, ಮಣಿಪುರ, ರತ್ನಪುರ ಮತ್ತು ಕುಂತಳದೇಶ. ಇವುಗಳಲ್ಲಿ. ಹಸ್ತಿನಾಪುರವರ್ಣನೆಯಲ್ಲಿ ಕವಿ ಕೇವಲ ಪ್ರಜೆಗಳ ಋಜು ಜೀವನದ ಮೇಲೆ, ಅವರ ಸಾಮಾಜಿಕ ಮೌಲ್ಯಗಳ ಮೇಲೆ ಬೆಳಕು ಚೆಲ್ಲುತ್ತಾನೆ. "ಕಳವು, ಕೊಲೆ, ಪಾದರಂ, ಪುಸಿ, ನುಸಿಳು, ವೈರ........" ಇತ್ಯಾದಿ ಯಾವುವೂ ಆ ರಾಜ್ಯದಲ್ಲಿರಲಿಲ್ಲ; "ಕೊಡೆ, ಪೊಡೆ, ಕಡೆ, ಜಡಿ" ಇವುಗಳೆಲ್ಲಾ ಕೇವಲ ಸಂಕುಚಿತಾರ್ಥದಲ್ಲಿ ಅಲ್ಲಿ ಉಪಯೋಗಿಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲ್ಪಡುತ್ತಿದ್ದುವು; ಇತ್ಯಾದಿ. ಹಾಗೆಯೇ ಕುಂತಳ ದೇಶವನ್ನು ಬಿಟ್ಟು ಬೇರೆಲ್ಲಾ ನಗರಗಳನ್ನು ವರ್ಣಿಸುವಾಗಲೂ ಆ ನಗರಗಳ ಸಂಪತ್ತು, ವೈಭವ,ಮತ್ತು ಅಲ್ಲಿಯ ಭೋಗ ಜೀವನಗಳನ್ನು ವರ್ಣಿಸುತ್ತಾನೆ. ಅಂದರೆ ನಗರಗಳಲ್ಲಿ ಧರ್ಮರಾಜನ ಹಸ್ತಿನಾಪುರ ಮತ್ತು ಚಂದ್ರಹಾಸನ ಕುಂತಳ ದೇಶ ಇವುಗಳು ಒಂದು ಗುಂಪಾದರೆ ಬೇರೆಲ್ಲಾ ನಗರಗಳು ಮತ್ತೊಂದು ಗುಂಪಾಗುತ್ತವೆ. ಮತ್ತು ಆ ಎರಡನೆಯ ವರ್ಗದಲ್ಲಿ ಅತಿ ಮುಖ್ಯವಾದುದು ಕೃಷ್ಣನ ರಾಜಧಾನಿ ದ್ವಾರಕೆ.

ದ್ವಾರಕೆಯನ್ನು ಪ್ರವೇಶಿಸುವಂತೆಯೇ ನಮಗೆ ಕವಿ ತೋರಿಸುವುದು ಸಮುದ್ರದ ರೌದ್ರವನ್ನು –"ಕ್ರೂರ ಕರ್ಕಟಕ-ಕಶಕಂ ಕಮಠಮಠ ಮಿಡಿದ.... ಘಳಿಘಳಿ ಸುತೇಳ್ವ ಬೊಬ್ಬುಳಿಗಳಿಂಸುಳಿಗಳಿಂ.... "ಘರ್ಜಿಸುತ್ತಿರುವ ಕ್ರೂರ-ಕರ್ಕಶ ಸಮುದ್ರವನ್ನು. ಅನಂತರ ಕಣ್ಣಿಗೆ ಬೀಳುವುದು ನವರತ್ನ ಪರಿ ಖಚಿತ" ಹರ್ಮ್ಯಗಳು — ಅಂದರೆ ಭೋಗ ಮತ್ತು ಸಂಪತ್ತು. ಅಲ್ಲಿಂದ ಮುಂದೆ ವಿಸ್ತಾರವಾಗಿ 24 ಷಟ್ಪದಿಗಳಲ್ಲಿ – ಬೇರೆ ಯಾವ ನಗರವರ್ಣನೆಯೂ ಇಷ್ಟು ವಿಸ್ತಾರವಾಗಿಲ್ಲ —ವಿಟರನ್ನು ಸವಿ ಮಾತುಗಳಿಂದ ಬಲೆಗೆ ಬೀಳಿಸುವ ಮಾತಿಗಾರ್ತಿಯರು, "ಘನ ಕುಚದ್ವಯದ" ವೇಶ್ಯೆಯರು ಮತ್ತು ಅವರ ವಿಟರು, ಅವರುಗಳ ದ್ಯೂತ, "ಪೊನ್ನಿಲ್ಲದಾತನ" ಸ್ನೇಹ ಇನ್ನು ಸಾಕೆಂದು ಉಪದೇಶಿಸುವ ಸೂಳೆಯರ ಸಖಿಯರು, ಇವರುಗಳ ವರ್ಣನೆ ಬರುತ್ತದೆ. ಮತ್ತೆ ಕೋಳಿಕಾಳಗ, "ಕರಿ ತುಗಗಡೇರಾಟ," ಮುಂತಾದ ಬಗೆಬಗೆಯ ಜೂಜುಗಳ ವರ್ಣನೆಯಿದೆ. ಈ ವರ್ಣನೆಗಳು ದ್ವಾರಕೆಯನ್ನು ಯಾವುದೇ ಒಂದು ಸಂಪದ್ಭರಿತ ಹಾಗೂ ಭೋಗ ಜೀವನ ತುಂಬಿದ ಪಟ್ಟಣವನ್ನಾಗಿಸುತ್ತವೆಯೇ ಹೊರತು ದೇವ ಪುರುಷ ಕೃಷ್ಣನ ರಾಜಧಾನಿಯೆಂದೆನಿಸುವುದಿಲ್ಲ. ಕೃಷ್ಣನ ರಾಜಧಾನಿಯಲ್ಲಿ ಮತ್ತು ಅವನ ಪ್ರಜೆಗಳಲ್ಲಿ ಕೃಷ್ಣನ ದೈವತ್ವದ ಪ್ರಭಾವ ಸ್ವಲ್ಪವಾದರೂ ಕಾಣಿಸಬೇಡವೇ? ಈ ಪ್ರಶ್ನೆ ಉಚಿತ ಹಾಗೂ ಯೋಗ್ಯ ಎನ್ನುವುದು ಕವಿ ಹಸ್ತಿನಾಪುರ ಮತ್ತು ಕುಂತಳ ದೇಶಗಳನ್ನು ಚಿತ್ರಿಸುವಾಗ ನಮಗೆ ಗೊತ್ತಾಗುತ್ತದೆ. ಧರ್ಮರಾಜನ ಹಸ್ತಿನಾಪುರ 'ಧರ್ಮಸಾಮ್ರಾಜ್ಯ'ವಾಗಿದೆ. ಚಂದ್ರಹಾಸನ ವೈಷ್ಣವ ಭಕ್ತಿಯ ಪ್ರಭಾವ ಕುಂತಳಪುರದ ಪ್ರಜೆಗಳ ಮೇಲೂ ಆಗಿದೆ ಮತ್ತು ಅವರುಗಳೂ ಏಕಾದಶಿ ವ್ರತವನ್ನು ಆಚರಿಸುತ್ತಾ ವಿಷ್ಣುಭಕ್ತರಾಗಿರುತ್ತಾರೆ. ಅಂದರೆ ಜೈಮಿನಿ ಭಾರತದಲ್ಲಿ ದ್ವಾರಕೆಯ ರಾಜ ಕೃಷ್ಣನೂ ಒಬ್ಬ ಸಾಮಾನ್ಯ ರಾಜನೇ ಆಗಿದ್ದಾನೆ.

ಆದರೆ ರಾಜತ್ವವನ್ನು , ಕ್ಷಾತ್ರ ಧರ್ಮವನ್ನು ಮತ್ತು ಧೈರ್ಯ ಸಾಹಸ ಮುಂತಾದ ಯುದ್ಧ ಭೂಮಿಯ ಮೌಲ್ಯಗಳನ್ನು ಕವಿ ಸಂಪೂರ್ಣ ನಿರಾಕರಿಸುವುದು ಅರ್ಜುನನ ಪಾತ್ರದ ಮೂಲಕ. "ಇಲಿಯಡ್" ಕಾವ್ಯದಲ್ಲಿ ಅಪ್ರತಿಮ ವೀರನಾಗಿ ಮೆರೆಯುವ ಯೂಲಿಸಿಸ್, "ಒಡಿಸ್ಸಿ"ಯಲ್ಲಿ ಅನಾಥನಾಗಿ ಸೋಲಿನ ಮೇಲೆ ಸೋಲನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಪ್ಪುವಂತೆ "ಮಹಾಭಾರತ"ದ ಅಸಮಾನ ಶೂರ ಅರ್ಜುನ "ಜೈಮಿನಿ ಭಾರತ"ದಲ್ಲಿ ಬರೀ ಸೋಲನ್ನೇ ಕಾಣುತ್ತಾನೆ. ಕೇವಲ ತನ್ನ ಶೌರ್ಯದಿಂದ ಭೀಷಣನನ್ನೊಬ್ಬನನ್ನು ಬಿಟ್ಟು ಮತ್ತಾರನ್ನೂ ಅವನು ಗೆಲ್ಲುವುದಿಲ್ಲ. ಸುಧನ್ವ, ತಾಮ್ರಧ್ವಜರ ಜೊತೆ ಸಂಪೂರ್ಣ ಸೋಲುವುದೇ ಅಲ್ಲದೆ ಬಬ್ರುವಾಹನನೊಡನೆ ಆಗುವ ಯುದ್ಧದಲ್ಲಿ ಸೋತು ಮಡಿಯುತ್ತಾನೆ ಕೂಡಾ. ಅರ್ಜುನನ ಈ ಸಾವಿನ ಸಂದರ್ಭದಲ್ಲಿ ಕವಿ ತಿಥಿ ವಾರ ನಕ್ಷತ್ರಗಳನ್ನೂ ಸ್ಪಷ್ಟಪಡಿಸುವುದರಿಂದ, ಕಾವ್ಯದ ಶಿಖರವಿದೆಂದು –ಅಂದರೆ ಈ ಘಟನೆ ಕವಿಯ ದೃಷ್ಟಿಯಲ್ಲಿ ಅತ್ಯಂತ ಅರ್ಥಪೂರ್ಣವಾದುದೆಂದು ನಮಗೆ ಗರಿವಾಗುತ್ತದೆ.

ಅರ್ಜುನನು ಪದೇ ಪದೇ ಏಕೆ ಸೋಲುತ್ತಾನೆ? ಅರ್ಜುನನ ಸೋಲು ಮತ್ತು ಸಾವು ಕ್ಷಾತ್ರ ಧರ್ಮದ ಅಹಂಕಾರದ ಮತ್ತು ಕಲಾಭಿಮಾನದ ಸೋಲು. ಹಂಸಧ್ವಜ ನೊಡನಾಗುವ ಯುದ್ಧಕ್ಕೆ ಮೊದಲೇ – ಅಂದರೆ ಯಜ್ಞದ ಕುದುರೆ ತನ್ನ ಒಂದು ವರ್ಷದ ಯಾತ್ರೆಯನ್ನು ಪ್ರಾರಂಭಿಸಿದ ಕೂಡಲೇ – ಸೌಭರಿ ಮುನಿಯು ಅರ್ಜುನ ನಿಗೆ ಗೀತೋಪದೇಶದಿಂದ ಏನೂ ಪ್ರಯೋಜನವಾಗಿಲ್ಲವೆಂದು ಬುದ್ಧಿ ಹೇಳುತ್ತಾನೆ. "ತಿಳುಹಿದಂ ಪಿಂತೆ ಭಾರತ ಯುದ್ಧ ಮಧ್ಯದೋಳ್ ನಳಿನನಾಭಂ ನಿನಗೆ ಮತ್ತೆಯುಮ ಹಂಕಾರವಳಿದುದಿಲ್ಲಕಟ ಜಗದೋಳ್ ಕೊಲ್ವರಾರ್ ಕಾವರಾರ್ ಬಲ್ಲೊಡುಸಿರೆಂದನು." ನಿನಗಿನ್ನೂ "ಹುಟ್ಟಿತ್ತಿಲ್ಲವೆ ಅರಿವು?" ಎಂದು ಕೇಳುತ್ತಾನೆ. "ಒಡಿಸ್ಸಿ"ಯಲ್ಲಿ ಸರ್ಸಿಯು "Rash man! Is They heart stin set on acts of war and on trouble?" ಎಂದು ಯೂಲಿಸಿಸ್‌ನನ್ನು ಕೇಳುವಂತೆ, ಆದರೂ ಅರ್ಜುನನ ಅಹಂ ಕಾರ ಮತ್ತು ತನ್ನ ಭುಜಬಲದ ಮೇಲಿರುವ ದುರಭಿಮಾನ ಕಮ್ಮಿಯಾಗುವುದಿಲ್ಲ. ಆದ್ದ ರಿಂದಲೇ ತನ್ನ ಕಾಲಿಗೆ ಬಿದ್ದ ಮಗ ಬಬ್ರುವಾಹನನ್ನು ತಿರಸ್ಕಾರದಿಂದ ಒದೆದು, ತನ್ನ ಪತ್ನಿ ಚಿತ್ರಾಂಗದೆಯ ನಡತೆಯ ಬಗ್ಗೆಯೂ ಕುತ್ಸಿತ ಮಾತುಗಳನ್ನಾಡುತ್ತಾನೆ. ದಾಂಪತ್ಯ ಧರ್ಮವನ್ನು ಮತ್ತು ಮಾತೃತ್ವವನ್ನು ಅವಹೇಳನ ಮಾಡುವುದು ಕವಿಯ ದೃಷ್ಟಿಯಲ್ಲಿ ಅತ್ಯಂತ ಘೋರ ಅಪರಾಧ. ಮತ್ತು ಈ ಅಪರಾಧಕ್ಕೆ ಅರ್ಜುನ ತಲೆ ದಂಡವನ್ನು ಕೊಡಲೇ ಬೇಕಾಗುತ್ತದೆ. ಬಹುಮಾರ್ಮಿಕವಾಗಿ ಕವಿ ಈ ಸಮಯದಲ್ಲಿ ಹೇಳುತ್ತಾನೆ. "ತಲೆಪೋಪುದಕೆ ತನ್ನ ಕಾಲ್ಪೊಣೆ" ಎಂದು ತನಗಾದ ಅವಮಾನಕ್ಕಿಂತ ಹೆಚ್ಚಾಗಿ ಬಬ್ರುವಾಹನನನ್ನು ನೋಯಿಸಿದುದು ತನ್ನ ತಾಯಿಗಾದ ಅಪಮಾನ: "ಪಳಿ ದೆಲಾ ಮಾತೆಯುಂ"ಇನ್ನು ನಿನ್ನತಲೆಗೆಡಹದೆ ಇರುವುದಿಲ್ಲ-ಎಂದುಪ್ರತಿಜ್ಞೆಮಾಡುತ್ತಾನೆ.

ಈ ವಿಚಾರವನ್ನೇ –ಅಂದರೆ ಅರ್ಜುನನ ಕುಲಾಭಿಮಾನದ ಅರ್ಥಹೀನತೆಯನ್ನು ಕವಿ, ಈ ಕಥೆಗೆ ಸಮಾನಾಂತರವಾಗಿ ಬರುವ ಲವ–ಕುಶರ ಕಥೆಯಲ್ಲಿಯೂ ಒತ್ತಿ ಹೇಳುತ್ತಾನೆ. ರಾಮನು ಯುದ್ಧಕ್ಕೆ ಸಿದ್ಧವಾಗಿ ಬಂದು ಕುಶನನ್ನು "ನಿನ್ನ ತಂದೆ ತಾಯಿಯರು ಯಾರು?" ಎಂದು ಕೇಳಿದಾಗ ಕುಶನು ಹೇಳುತ್ತಾನೆ: "ಅಪ್ರಯೋಜ ಕದ ಮಾತಿದೇತಕೆ ನಿರುಪಮ ಕ್ಷಾತ್ರ, ಪೌರುಷವನುಳಿದು ಬರಿದೆ ಸೋಜಿಗದೊಳೆಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನನ ಸ್ಥಿತಿಗಳಂ ಕೇಳ್ದೊಡೀಜಗಂ ಮೆಚ್ಚದು" ಎಂದು ಮತ್ತೊಂದು ಸಂದರ್ಭದಲ್ಲಿ ವೃಷಕೇತು 'ಯಾರಿಂದ ಜನ್ಮವಾದರೇನು' ಎಂದು ತನ್ನ ಎದುರಾಳಿಯನ್ನು ಹಂಗಿಸುತ್ತಾನೆ. ಅಂದರೆ ಒಟ್ಟನಲ್ಲಿ ಬಭ್ರುವಾಹನನ ಕೈಯಲ್ಲಿ ಸೋತು ಸಾಯುವ ತನಕ ಅರ್ಜುನನು ಅಹಂಕಾರದಿಂದ ಮದಿಸಿದ, "ಯುದ್ಧರಂಗದ" ಮೌಲ್ಯಗಳ ಸಂಕೇತವಾಗುತ್ತಾನೆ. ಈ ಮೌಲ್ಯಗಳು ಎಷ್ಟು ಅಮಾನವೀಯ ಮತ್ತು ಅಸ್ವಾಭಾವಿಕ ಎನ್ನುವ ವಿಚಾರವನ್ನು ಕವಿ ಋತು ವರ್ಣನೆಗಳ ಜೋಡಣೆಯಲ್ಲಿಯೂ ಅದ್ಭುತವಾಗಿ ಸಾಧಿಸಿದ್ದಾನೆ.

ಯಜ್ಞ ಪ್ರಾರಂಭದಲ್ಲಿ ಬರುವ ವಸಂತ ಋತುವಿನ ವರ್ಣನೆ ಮನೋಜ್ಞವಾಗಿದೆ. ಮರಿಕೋಗಿಲೆಗಳ ಸೆರೆಯನ್ನು ಬಿಡಿಸಿ ಮಂದಮಾರುತನೊಡನೆ ಆಹ್ಲಾದಕಾರಿಯಾಗಿ, ಬಣ್ಣಬಣ್ಣದ ಶ್ರೀಮಂತಿಕೆಯಲ್ಲಿ, ಹೂವು–ಹೊಸ ತಳಿರುಗಳ ಸಿರಿಯಲ್ಲಿ, "ಪಾತಕ ಕ್ಷಯ"ದಂತೆ ಚೈತ್ರಮಾಸ ಶೋಭಿಸುತ್ತದೆ. ಮತ್ತು "ಪಾತಕ ಕ್ಷಯ"ದ ಅಂಶವಾಗಿ ಈ ಋತುವಿನಲ್ಲಿಯೇ ಜ್ವಾಲೆಯ ಕಾರಣದಿಂದ ಅರ್ಜುನನ ಸಾವಿನ ಬೀಜಾಂಕುರವಾಗುತ್ತದೆ. ಅಂದರೆ ಎಲ್ಲೆಡೆಯಲ್ಲಿಯೂ ಬದುಕಿನ ಪಾರಂಭವಾದರೆ ಅರ್ಜುನನ ಸಾವಿನ ಪ್ರಾರಂಭವಾಗುತ್ತದೆ. ಏಕೆಂದರೆ ಅವನ ಮೌಲ್ಯಗಳು ಜೀವನ ವಿಮುಖವಾದದ್ದರಿಂದ, ಅರ್ಜುನನ ಈ ಜೀವನವಿಮುಖ ಗತಿ ಮುಂದುವರಿದು ವರ್ಷಋತುವಿನಲ್ಲಿ– ಅಂದರೆ ಎಲ್ಲೆಲ್ಲಿಯೂ 'ಜೀವನ' (ಬದುಕು ಮತ್ತು ನೀರು) ತುಂಬಿರುವಾಗ ಅರ್ಜುನನು ಜೀವ ಕಳೆದುಕೊಳ್ಳುತ್ತಾನೆ. ಅವನಿಗೆ ಪುನರ್ಜನ್ಮ ಬಂದಾಗ ಅವನು ಬೇರೆಯೇ ಅರ್ಜುನನಾಗಿರುತ್ತಾನೆ. "ಕಾರ್ಗಾಲ" ಕಳೆದು, "ಮೈಸಿರಿಯ ಮಾಂಗಲ್ಯದಿಂ ಭೂದೇವಿ ಶೋಭಿಸುವಂತೆ" ಇರುವ ಶರದೃತುವಿನ ಆಗಮನವಾಗುತ್ತದೆ.

ಪುನರ್ಜನ್ಮವನ್ನು ದೈಹಿಕವಾಗಿಯೂ ಮಾನಸಿಕವಾಗಿಯೂ ಪಡೆಯುವ ಅರ್ಜುನನು ಎಷ್ಟು ಬದಲಾಗಿದ್ದಾನೆಂದರೆ, ಕುಂತಳಪುರವನ್ನು ಪ್ರವೇಶಿಸಿದಾಗ ಅಲ್ಲಿನ ರಾಜನ ವಿಷಯವನ್ನು ತಿಳಿಯಲು ನಾರದ ಮಹರ್ಷಿಯನ್ನು ವಿಚಾರಿಸಲು ನಾರದನು 'ಇದು ನಿನಗೆ ಕಥೆ ಕೇಳಲು ಸಮಯವಲ್ಲ. ನಿನ್ನ ಕುದುರೆಯನ್ನು ಕಟ್ಟಿ ಹಾಕಿದ್ದಾರೆ ಮತ್ತು ಹಸ್ತಿನಾಪುರದಲ್ಲಿ ಧರ್ಮರಾಜನು ಯೋಚನೆ ಮಾಡುತ್ತಿದ್ದಾನೆ' ಎನ್ನುತ್ತಾನೆ. ಆಗ ಅರ್ಜುನನು "ನರರ ಬಾಳ್ ಚಿರಕಾಲ ಮಪ್ಪುದಿಲ್ಲ, ಭ್ರಮೆಯಿಂದ ಕೇಳದಿರಬಹುದೆ ವೈಷ್ಣವ ಕಥೆಯ" ಎಂದು ಚಂದ್ರಹಾಸನ 'ವೈಷ್ಣವ ಕಥೆ'ಯನ್ನು ಭಕ್ತಿಯಿಂದ ಕೇಳುತ್ತಾನೆ. "ನರರ ಬಾಳ್ ಚಿರಕಾಲ ಮಪ್ಪುವುದಿಲ್ಲ" ಎಂಬ ಅರ್ಜುನನ ಅರಿವನ್ನು ಅವನಂತೆಯೇ ಅಹಂಕಾರದಿಂದ ನರಳಿ ಕೊನೆಗೆ ತನ್ನನ್ನು ತಾನು ಅರಿತುಕೊಂಡಿರುವ "ಒಡಿಸ್ಸಿ"ಯ ಯೂಲಿಸಿಸ್‌ನ ಉದ್ಧಾರಕ್ಕೆ ಹೋಲಿಸಬಹುದು. "ಒಡಿಸ್ಸಿ" ಕಾವ್ಯದ ಕೊನೆಯಲ್ಲಿ ಯೂಲಿಸಿಸ್ ಅಂತ್ಯಂತ ಗಂಭೀರವಾಗಿ ಹೇಳುತ್ತಾನೆ. "ಈ ಭೂಮಿಯ ಮೇಲೆ ಉಸಿರಾಡಿಸುವ, ಓಡಾಡುವ ಜೀವಿಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನವನಷ್ಟು ದುರ್ಬಲರಾದವರು ಯಾರೂ ಇಲ್ಲ." ಈ ಜೀವನ ಯಾತ್ರೆಯಲ್ಲಿ— ಅದು ಅರ್ಜುನದಾಗಿರಲಿ ಅಥವಾ ಯೂಲಿಸಿಸ್‌ನ ಮತ್ತು ಕ್ಯಾಂಟರ್ ಬರಿ ಯಾತ್ರಿಕರದಾಗಿರಲಿ, ನಾವು ಅರಿಯುವ ಸತ್ಯ ಒಂದೇ: "ನರರ ಬಾಳ್ ಚಿರಕಾಲ ಮಿಪ್ಪುದಿಲ್ಲ."

ಛಾಸರ್ ಕವಿಯ"ಕ್ಯಾಂಟರ್ ಬರಿ ಟೇಲ್ಸ್" ನೈಟ್‌ನಿಂದ ಶುರುವಾಗಿ ಪಾರ್ಸನ್ ಹೇಳುವ ಕಥೆಯಲ್ಲಿ ಮುಗಿಯುವಂತೆ, ಅವನದೇ ಮತ್ತೊಂದು ಕಾವ್ಯ "ಟ್ರಾಯ್‌ಲಸ್ ಆ್ಯಂಡ್ ಕ್ರಿಸೀಡೆ" ಈ ಮರ್ತ್ಯಲೋಕದಲ್ಲಿ ಪ್ರಾರಂಭವಾಗಿ ಕೊನೆಯಲ್ಲಿ ತಾರಾಲೋಕದಿಂದ ಟ್ರಾಯ್‌ಲಸ್, ಈ ಭೂಲೋಕವನ್ನು ನೋಡುತ್ತಾ ಅದರ ಕ್ಷುದ್ರತೆಗೆ ನಗುತ್ತಿರುವಾಗ ಮುಕ್ತಾಯವಾಗುವಂತೆ, ಜೈಮಿನಿ ಭಾರತವೂ ರಾಜ-ಮಹಾರಾಜರ ಅಟ್ಟಹಾಸ-ಜಯಾಪಜಯಗಳಿಂದ ಮುಂದುವರಿದು, ಯುದ್ಧವನ್ನೇ ಮಾಡದ ಸಾತ್ವಿಕ ಚಂದ್ರಹಾಸನತ್ತ ಸಾಗಿ ಕೊನೆಗೆ ದಿಗ್ಭ್ರಮೆಯಿಂದ ತಲೆತಿರುಗಿಸುವಂತಾಗುವ ಬಕದಾಲ್ಭ್ಯಮುನಿಯ 'ವಿಶ್ವದೃಷ್ಟಿ' (Cosmic vision)ಯಿಂದ ಕೊನೆಗೊಳ್ಳುತ್ತದೆ. ಇಪ್ಪತ್ತು ಚತುರ್ಮುಖ ಬಹ್ಮರ ಕಾಲವನ್ನು ಕಂಡ ಬಕದಾಲ್ಭ್ಯನು ಅವರೊಡನೆ ಕ್ರಮವಾಗಿ ಅಷ್ಟಮುಖಿ ಬ್ರಹ್ಮರನ್ನು, ಅವರೊಡನೆ ಷೋಡಶ ಮುಖದ ಬ್ರಹ್ಮರನ್ನು ಮತ್ತೆ ಮೂವತ್ತೆರಡು ಮುಖದ ಬ್ರಹ್ಮ, ಅರವತ್ತು ನಾಲ್ಕು ಮುಖದ ಬ್ರಹ್ಮ, ಕೊನೆಗೆ ಸಹಸ್ರ ಮುಖ ಬ್ರಹ್ಮ ಇವರುಗಳನ್ನು ಕಾಣುತ್ತಾನೆ. ಸಹಸ್ರ ಮುಖ ಬ್ರಹ್ಮನ ವಿಶ್ವದ ತುಲನೆಯಲ್ಲಿ ಚತುರ್ಮುಖ ಬಹ್ಮನ ವಿಶ್ವವೆಲ್ಲಿ? ಆ ವಿಶ್ವದಲ್ಲಿ ಈ ಒಂದು ಭೂಲೋಕದಲ್ಲಿ ಎಲ್ಲೋ ಒಂದು ಕಡೆ ಹುಟ್ಟ-ಸಾಯುವ ರಾಜಾಧಿ-ರಾಜರುಗಳೆಲ್ಲಿ? ಈ ಅದ್ಭುತ ಅನುಭವ ಎಷ್ಟು ಅನಿರ್ವಚನೀಯವಾಗಿದೆಯೆಂದರೆ ಎಲ್ಲ ಲೋಕಗಳೂ, ಅದರಲ್ಲಿ ನಡೆಯುವುದೆಲ್ಲವೂ ಕನಸಿನಾಟದಂತೆ ಕಾಣುತ್ತದೆ: "ಹೆಮ್ಮೆಗಳನುಳಿದು ವಿಸ್ಮಿತರಾದವರನ್ನೆಗಂ ಮೊದಲದೆಂತಿರುತಿರ್ದರಂತೆ ಕನಸೆನಲ್ ತೋರ್ಪ ತಮ್ಮ ಲೋಕಂಗಳಿಗೆ ಬಂದಿರ್ದರು." ಈ ದರ್ಶನದ ಉತ್ಕಟತೆಯಲ್ಲಿ ಬಕದಾಲಭ್ಯ "ಕೋವಿದರ್ ಗರ್ವಮಂ ಮಾಡಲಾಗದು ಪಾರ್ಥ" ಎಂದಷ್ಟೇ ಅನ್ನುತ್ತಾನೆ. ಮತ್ತೇನು ಹೇಳಲು ಸಾಧ್ಯ?

* * *

3

ಇಲ್ಲಿಯ ತನಕ ನಾನು ತೋರಿಸಲು ಪ್ರಯತ್ನಿಸಿರುವುದು "ಜೈಮಿನಿ ಭಾರತ" ಒಂದು ಸರಳ, ಪರಂಪರಾಗತ ಮಾರ್ಗದ, ಸಾಹಸ ಪ್ರಧಾನ ಕೃತಿಯಾಗಿರದೆ ಎಷ್ಟು ಸಂಕೀರ್ಣವಾಗಿದೆ. ಕಾವ್ಯದ ವಿವಿಧ ವಸ್ತು ಮತ್ತು ಶಿಲ್ಪ ವಿನ್ಯಾಸಗಳು ಹೇಗೆ ಒಂದನ್ನೊಂದು ಘರ್ಷಿಸಿ ಒಂದು ಅಪೂರ್ವ ಜೀವನಾನುಭವವನ್ನು ಕೊಡುತ್ತವೆ ಎನ್ನುವುದನ್ನು, "ಜೈಮಿನಿ ಭಾರತ"ದ ಸಂಕೀರ್ಣತೆಗೆ ಮುಖ್ಯ ಸಾಧನವಾಗಿರುವುದು ಕೃತಿಯುದ್ದಕ್ಕೂ ಹಾಸುಹೊಕ್ಕಾಗಿರುವ 'ಪರಿಭ್ರಮಣ'ದ ಚಿರಂತನ ಪ್ರತೀಕ, ಮತ್ತು ಅದಕ್ಕೆ ಪುಷ್ಟಿಯಾಗಿ ಬರುವ 'ಶೋಧ'ದ ಮತ್ತು 'ಸಾವು-ಪುನರ್ಜನ್ಮ'ದ ಪ್ರತೀಕಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತೊನ್ಮ್ಮೆ ಸಂಕ್ಷೇಪವಾಗಿ ಹೇಳಬೇಕೆಂದರೆ, "ಜೈಮಿನಿ ಭಾರತ" ಕಾವ್ಯದ ಗತಿ ಪರಸ್ಪರ ವಿರುದ್ಧವಾದ ಇಬ್ಬಗೆಯ ಗತಿಯಾಗಿದೆ. ಒಂದು ಪಾತಳಿಯಲ್ಲಿ ಕಾವ್ಯ, ಪರಂಪರಾಗತ ಮೌಲ್ಯಗಳು (ವ್ಯಾಸ ಮಹರ್ಷಿಯು ಧರ್ಮರಾಯನಿಗೆ ಉಪದೇಶಿಸುವ 'ಧರ್ಮಸಾರ'ವು ಅತ್ಯಂತ ಕನ್ಸರ್ವೆಟಿವ್ ಮತ್ತು ಸೀಮಿತವಾಗಿದೆ: 5ನೇ ಸಂಧಿ: 48–62). ಕ್ಷಾತ್ರ ಧರ್ಮ ಮತ್ತು ಯುದ್ಧಭೂಮಿಯ ಮೌಲ್ಯಗಳು—ಇವನ್ನು ಆದರ್ಶವನ್ನಾಗಿ ಎತ್ತಿ ಹಿಡಿದರೆ, ಮತ್ತೊಂದು ಪಾತಳಿಯಲ್ಲಿ ಈ ಎಲ್ಲಾ ಮೌಲ್ಯಗಳ ನಿರರ್ಥಕತೆಯನ್ನು ಸೂಚಿಸುತ್ತಾ, ತ್ಯಾಗ-ಭಕ್ತಿ ಇವುಗಳನ್ನು ಎತ್ತಿ ಹಿಡಿಯುತ್ತದೆ. ಈ ಇಬ್ಬಗೆಯ ಗತಿಯಿಂದುದ್ಭವಿಸುವ ಘರ್ಷಣೆಯಲ್ಲಿ ನಮಗೆ ಕಾವ್ಯದ ಅಂತರಾಳದಲ್ಲಿ ಗೋಚರಿಸುವ ಮೌಲ್ಯಗಳು ಮಾನವೀಯತೆಯ, ದಾಂಪತ್ಯ ಜೀವನದ, 'ಮನೆ'ಯ ಮೌಲ್ಯಗಳು. ಒಂದು ದೃಷ್ಟಿಯಿಂದ-ಬಕದಾಲ್ಭ್ಯ ಮುನಿಯ "ವಿರಾಟ್ ದರ್ಶನ" ಮನದಟ್ಟು ಮಾಡುವಂತೆ—ಈ ಕ್ಷುದ್ರ ಜಗತ್ತಿನಲ್ಲಿ ಆಗುವ-ಆಗಲಾರದ ಯಾವುದಕ್ಕೂ ಅರ್ಥವಿಲ್ಲ. ಎಲ್ಲವೂ ಕನಸಿನಂತೆ, ಆದರೆ ಅದರರ್ಥ ಈ ಜಗತ್ತನ್ನು ತ್ಯಜಿಸಬೇಕೆಂದೇನೂ ಅಲ್ಲ. ಈ ಭೂಮಿಯಲ್ಲಿ ಇರುವ ತನಕ ನಮ್ಮ ನಮ್ಮ ಬದುಕನ್ನು ನಾವು ನಡೆಸಲೇ ಬೇಕಲ್ಲ. ಆ ಬದುಕಿನ ಮೌಲ್ಯಗಳು-ಕವಿಯ ದೃಷ್ಟಿಯಲ್ಲಿ ದಾಂಪತ್ಯ ಜೀವನದ ಮೌಲ್ಯಗಳು. ಅದಕ್ಕೆಂದೇ ಕವಿ ಕೃಷ್ಣನ ಸಂಸಾರ ಚಿತ್ರವನ್ನೂ, ಆ ಸಂಸಾರದಲ್ಲಿನ ಅತ್ತೆ-ಸೊಸೆಯರ ಕಲಹವನ್ನು (ಕಲಹ ವಿನೋದಕ್ಕಾಗಿ ಇದ್ದರೂ ಕೂಡಾ) ಚಿತ್ರಿಸುತ್ತಾನೆ. ಅಲ್ಲದೆ ಸಾತ್ವಿಕ ಶಿರೋಮಣಿ ಚಂದ್ರಹಾಸನ ವಿವಾಹವನ್ನೂ ಮತ್ತು ವಿಷಯೆಯ ಯೋಗಾನುಭವವನ್ನೂ ಚಿತ್ರಿಸುತ್ತಾನೆ. ಎಲ್ಲದಕ್ಕಿಂತ ಹೆಚ್ಚಾಗಿ ಕಾವ್ಯ ಮಾನವ ಧರ್ಮವನ್ನು, ದೈವತ್ವಕ್ಕಿಂತ ಹೆಚ್ಚಾಗಿ ಮಾನವತ್ವವನ್ನು, ಮೆರೆಯುವುದು ಸುಧನ್ವ-ಪ್ರಭಾವತಿ ಇವರ ಸುರತ ವರ್ಣನೆಯಲ್ಲಿ.

ಯುದ್ಧವು ಕರೆಯುತ್ತಿರುವಾಗ, ರಾಜಾಜ್ಞೆ ಮತ್ತು ತನ್ನ ರಣೋತ್ಸಾಹ ಇವೆರಡನ್ನೂ ಮೀರಿ, ಒಬ್ಬ ಶೂರ ತರುಣ ತನ್ನ ಧರ್ಮವಿದೆಂದು ತನ್ನ ಪತ್ನಿಯೊಡನೆ ಯಾವುದೇ ಬೀತಿ ಅಥವಾ ಪಶ್ಚಾತ್ತಾಪವಿಲ್ಲದೆ ಕೂಡುವುದನ್ನು ಅಷ್ಟೇ ಧೈರ್ಯದಿಂದ ವಿಸ್ತಾರವಾಗಿ ವರ್ಣಿಸುವ ಕಾವ್ಯ, ಕನ್ನಡ ಜೈಮಿನಿ ಭಾರತವನ್ನು ಬಿಟ್ಟರೆ ಪ್ರಾಯಶಃ ಇತರ ಸಾಹಿತ್ಯಗಳಲ್ಲಿ ನಮಗೆ ಕ್ವಚಿತ್ತಾಗಿ ಕಾಣಿಸುತ್ತದೆ. ಸುಧನ್ವ-ಪ್ರಭಾವತಿ ಸಂಭೋಗ ಮನೋವೈಜ್ಞಾನಿಕದೃಷ್ಟಿಯಿಂದ ಎಷ್ಟು ಸಹಜವಾಗಿದೆಯೋ ಅಷ್ಟೇ ಮಾನವ ಧರ್ಮದ ದೃಷ್ಟಿಯಿಂದ ಮೌಲಿಕವಾಗಿದೆ. ಹೋಮರ್‌ನ 'ಒಡಿಸ್ಸಿ'ಯಂತೆ "ಜೈಮಿನಿ ಭಾರತ" 'ಮನಿಯನ್ನೂ 'ಮನೆ'ಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ಕಾವ್ಯದಲ್ಲಿ ಸದಾ ನೆನಪಿನಲ್ಲಿ ಉಳಿಯುವ ದೃಶ್ಯಗಳು ಬಾರಿಬಾರಿಗೂ ಬರುವ ಯುದ್ಧಗಳಲ್ಲ. ಕೃಷ್ಣನು ತನ್ನ ತಾಯಿ, ಹೆಂಡತಿಯರು ಮತ್ತು ಮಕ್ಕಳೊಡನೆ ವಿನೋದದಿಂದ ಭೋಜನ ಮಾಡುವುದು; ಸುಧನ್ವ-ಪ್ರಭಾವತಿಯರ ಸಮಾಗಮ; ಮಕ್ಕಳಿಲ್ಲದ ಸೀತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಶುಲೀಲೆಯನ್ನು ಕಲ್ಪಿಸಿಕೊಂಡು ಮರುಗುವುದು; ದಾದಿ ಅನಾಥ ಬಾಲಕ ಚಂದ್ರಹಾಸನನ್ನು ಬೆಳೆಸುವುದು; ಚಂದ್ರಹಾಸ-ವಿಷಯೆಯರ ತುಂಬು ದಾಂಪತ್ಯ ಜೀವನದ ಈ ದೃಶ್ಯಗಳು. ಈ ದೃಷ್ಟಿಯಿಂದ ಸ್ತ್ರೀ ರಾಜ್ಯದ ರಾಣಿ ಪ್ರಮೀಳೆಯನ್ನು ಅರ್ಜುನನು ವಿವಾಹವಾಗುವಂತೆ ಅಶರೀರವಾಣಿಯಾಗುವುದು ಮತ್ತು ಅದರಂತೆ ಅರ್ಜುನನು ಪ್ರಮೀಳೆಯನ್ನು ವರಿಸುವುದು ಅರ್ಥವತ್ತಾಗಿವೆ. ("ಒಡಿಸ್ಸಿ"ಯಲ್ಲಿ ಯೂಲಿಸಿಸ್ ಸರ್ಸಿಯನ್ನು ಸ್ವೀಕರಿಸುವಂತೆ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿನ್ನುಡಿ - ಪಶ್ಚಿಮದ ಅಂಚಿನಲ್ಲಿ

ಪಾಶ್ಚಿಮಾತ್ಯ ಸಾಹಿತ್ಯ ಪರಂಪರೆ ಹಾಗೂ ಅಪಾಯದ ಅಂಚಿನಲ್ಲಿರುವ ದೇಸೀ ಸಾಹಿತ್ಯ ಪರಂಪರೆಗಳ ನಡುವಣ ಸಂಬಂಧದ ಸ್ವರೂಪವನ್ನು ಈ ಹೊತ್ತು ವಿಶ್ಲೇಷಣಾತ್ಮಕವಾಗಿ ಒಳಹೊಕ್ಕು ವಿವೇಚಿಸಬೇಕಾದ ಅಗತ್ಯವಿದೆ. ಈ ಸಂಕಲನದ ಡಾ. ಸಿ. ಎನ್. ರಾಮಚಂದ್ರನ್ ಅವರ ನಾಲ್ಕು ಪ್ರಬಂಧಗಳ ಮಹತ್ವವನ್ನು ಗುರುತಿಸುವಲ್ಲಿ ಈ ಸಾಂಸ್ಕೃತಿಕ ಕಾಳಜಿ ನನ್ನ ಚರ್ಚೆಯ ಕೇಂದ್ರವಾಗಿದೆ. ಈ ಸಮಸ್ಯೆಯನ್ನು ಕೇವಲ ಸಾಹಿತ್ಯಿಕ –ಸೌಂದರ್ಯಾತ್ಮಕ ನೆಲೆಗಳ ಸೀಮಿತ ಚೌಕಟ್ಟಿನಲ್ಲಿ ಚರ್ಚಿಸುವುದು ನನ್ನ ದೃಷ್ಟಿಯಲ್ಲಿ ಅಸಾಧ್ಯ; ಯಾಕೆಂದರೆ ಅದರ ಬೇರುಗಳು ನಮ್ಮ ರಾಜಕಾರಣದಲ್ಲಿ ಆಳವಾಗಿ ನೆಡಲ್ಪಟ್ಟಿವೆ. ಕೊನೆಯ ಪಕ್ಷ ನಿರ್ವಸಾಹತೀಕರಣ ಪ್ರಕ್ರಿಯೆ ಪ್ರಾರಂಭವಾದ 1940ರ ಈಚೆಗಾದರೂ ಮೆಟ್ರೋಪಾಲಿಟನ್ ಸಂಸ್ಕೃತಿ ಮತ್ತು ದೇಸೀ ಸಂಸ್ಕೃತಿಗಳ ನಡುವಣ ಸಂವಾದವು ಸಮಾನತೆ —ಅನುರೂಪತೆಗಳಿಂದ ಕೂಡಿದ್ದಾಗಿದೆ ಎನ್ನುವ ಮಾತನ್ನು ತತ್ವಶ: ಒಪ್ಪಿಕೊಳ್ಳಬಹುದಾದರೂ ನಮ್ಮಲ್ಲಿನ ಅತ್ಯುತ್ತಮ ಪರಿಸ್ಥಿತಿಯಲ್ಲಿರುವ ಅತ್ಯಂತ ಸಮರ್ಥರಿಗಾದರೂ ಇದು ಸುಲಭ ಸಾಧ್ಯವಾಗಿದೆ ಎಂದು ಹೇಳುವಂತಿಲ್ಲ. ಇಲ್ಲಿ ಮುಖ್ಯವಾಗಿ ಎರಡು ರೀತಿಯ ಅಪಾಯಗಳಿವೆ: ಮೊದಲನೆಯದು ರಾಜಕೀಯಗೋಳಿಸಲೇಬೇಕಾದ ಅಂಶಗಳನ್ನು ರಾಜಕೀಯಗೊಳಿಸುವಿಕೆ, ಎರಡನೆಯದು ರಾಜಕೀಯಗೊಳಿಸಲೇಬೇಕಾದ ಅಂಶಗಳನ್ನು ರಾಜಕೀಯಗೊಳಿಸದೇ ಇರುವ ಅಥವಾ ರಾಜಕೀಯದಿಂದ ಅಲಿಪ್ತ ಸಂಗತಿಗಳನ್ನಾಗಿ ಪರಿಭಾವಿಸುವ ಅಪಾಯ.

ವಸಾಹತು ದೇಶಗಳ ಸಾಹಿತ್ಯ ಪರಂಪರೆಗಳ ಬೆಳವಣಿಗೆಯಲ್ಲಿ, ವಿಶಾಲಾರ್ಥದಲ್ಲಿಯಾದರೂ ಒಂದು ನಿರ್ದಿಷ್ಟ ವಿನ್ಯಾಸವನ್ನು ನಾವು ಗುರುತಿಸಬಹುದಾಗಿದೆ. ಮೊದಲನೆಯದು, ವಸಾಹತು–ಪೂರ್ವ ಚರಿತ್ರೆ ಮತ್ತು ವಸಾಹತು ಚರಿತ್ರೆಗಳು ತಮ್ಮ ಕರುಳ ಸಂಬಂಧವನ್ನೇ ಕಡಿದುಕೊಳ್ಳುವ ರುದ್ರ ಬಿರುಕಿನ ಸಂದರ್ಭ; ಎರಡನೆಯದು, ವಸಾಹತು ಸಂಸ್ಕೃತಿ ಮೆಟ್ರೋಪಾಲಿಟನ್ ಪ್ರಭುಸಂಸ್ಕೃತಿಗೆ ಅಡಿಯಾಳಾಗಿರುವ ಆಶ್ರಿತ ಪರಿಸ್ಥಿತಿ. ಮೂರನೆಯದು, ರಾಜಕಾರಣದ ಮಟ್ಟದಲ್ಲಿ ಪ್ರತಿಭಟನೆ ಹಾಗೂ ಸವಾಲೊಡ್ಡುವ ಆದರೆ ಸಂವಾದಿಯಾಗಿ ಯಾವುದೇ ಸಹಜ, ಕ್ರಿಯಾತ್ಮಕ ಸೃಜನಶೀಲ ಸಾಧನೆ ಸಾಧ್ಯವಾಗದಿರುವ ಸ್ಥಿತಿ. ನಾಲ್ಕನೆಯದು, ಹೆಚ್ಚು ಸಮಾನವಾದ, ಸಮತೂಕದ, ಅನುರೂಪ ಸಂಬಂಧದ ಸನ್ನಿವೇಶ. ಐದನೆಯದು ಮತ್ತು ಕೊನೆಯದು, ಹೊಸ ದೇಸೀ ಪರಂಪರೆಯೊಂದನ್ನು ಸಿದ್ಧಾಂತ ಹಾಗೂ ಸಂಪ್ರದಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಿಗೆ ಪ್ರಸ್ತುತವೆನ್ನಿಸುವಂತೆ ಕಟ್ಟುವ ಸಂಸ್ಕೃತಿ ವಿಶಿಷ್ಟ ಕ್ರಿಯಾಶೀಲ ಪ್ರಕ್ರಿಯೆ ಆರಂಭಗೊಳ್ಳುವ ನಿರ್ಧಾರಾತ್ಮಕ ಕ್ಷಣ.

ಸ್ವಾತಂತ್ರ್ಯ ಪೂರ್ವದಕನ್ನಡ ಸಾಹಿತ್ಯ ಸಂಸ್ಕೃತಿಯ ನಿರ್ದಿಷ್ಟ ಸನ್ನಿವೇಶದಲ್ಲಿ ಈ ವಿನ್ಯಾಸದ ಮೊದಲ ಎರಡು ಹಂತಗಳನ್ನು, ಅಂದರೆ 19ನೆಯ ಶತಮಾನದಲ್ಲಿ ರುದ್ರ ಬಿರುಕಿನ ಸಂದರ್ಭವನ್ನೂ, 20ನೆಯ ಶತಮಾನದಲ್ಲಿ ಆಶ್ರಿತ ಪರಿಸ್ಥಿತಿಯನ್ನೂ ಕಾಣಬಹುದು. ಉದಾಹರಣೆಗೆ ಪಶ್ಚಿಮದ ಸಾಹಿತ್ಯ ಚಳುವಳಿಗಳನ್ನು ಅಲ್ಲಿ ಅವು ಗಳು ಆಗಿಹೋದ ಅನಂತರ ಕನ್ನಡದಲ್ಲಿ ಯಾಂತ್ರಿಕವಾಗಿ ಅನುಕರಿಸಲಾದ ರೀತಿಯನ್ನೇ ಗಮನಿಸಬಹುದು. ರೋಮ್ಯಾಂಟಿಕ್ ಚಳುವಳಿಯನ್ನು 'ನವೋದಯ' ಅಸ್ಪಷ್ಟ ವಾಗಿ ಅನುಕರಿಸಿತು. ಅಷ್ಟೇ ಅಸ್ಪಷ್ಟವಾಗಿ ಎಲಿಯೆಟ್ –ಪೌಂಡರೊಂದಿಗೆ ಸಂಬಂಧ ಪಡೆದ ಮಾಡರ್ನಿಸ್ಟ್ ಎನ್ನಲಾದ ಮೆಟ್ರೋಪಾಲಿಟನ್ ಚಳುವಳಿಯನ್ನು ಕನ್ನಡದ 'ನವ್ಯ'ವೂ ಅನುಕರಿಸಿತು. ಹುಟ್ಟಿನಿಂದ ಪಶ್ಚಿಮಕ್ಕೇ ಸೇರಿದ ಮಾರ್ಕ್ಸ್‌ವಾದ 1940ರ ಸುಮಾರಿಗೆ ಕನ್ನಡದ'ಪ್ರಗತಿಶೀಲ'ಚಳುವಳಿಯಲ್ಲಿ ಬಂದರೂ ಗೊಡ್ಡಾಯಿತು. ಸ್ವಾತಂತ್ರ್ಯಾನಂತರವೂ ಪರಿಸ್ಥಿತಿ ಬದಲಾಗಿಲ್ಲ. ಇತ್ತೀಚೆಗೆ, ಸ್ಥಳೀಕ ಪ್ರೇರಣೆ ಗಳಿಂದ ಹೆಚ್ಚಾಗಿ ಕೂಡಿದ ದಲಿತ –ಬಂಡಾಯ ಚಳುವಳಿಗಳು ತೀರಾ ದುರ್ಬಲವಾಗಿ ಪ್ರಕಟಗೊಂಡಿವೆಯಾದರೂ ಕನ್ನಡ ಸಾಹಿತ್ಯ ಸಂಸ್ಕೃತಿಯು ಇನ್ನೂ ಅವಲಂಬನೆಯ ಬಲೆಯಲ್ಲಿಯೇ ತೊಡರಿಕೊಂಡಿದೆ. ಮೂರನೆಯ, ಪ್ರತಿಭಟನೆ ಹಾಗೂ ಸವಾಲಿನ ಕ್ಷಣವಿನ್ನೂ ಕನ್ನಡಕ್ಕೆ ಒದಗದಿರುವುದು ದುರ್ದೈವ !

ಇಂತಹ ಸಾಂಸ್ಕೃತಿಕ ಸನ್ನಿವೇಶದಲ್ಲಿ ನಾವು ಗಂಭೀರವಾಗಿ ಪರಿಗಣಿಸಬೇಕಾದ ಪ್ರಶ್ನೆಯೆಂದರೆ ಇದು: ಈ ಪಾಶ್ಚಿಮಾತ್ಯ, ಮೆಟ್ರೋಪಾಲಿಟನ್ ಆಲೋಚನೆಗಳು, ವ್ಯವಸ್ಥೆಗಳು, ಸಾಂಸ್ಕೃತಿಕ ಚಳುವಳಿಗಳು, ಮಾದರಿಗಳು ಕನ್ನಡ ಸಂಸ್ಕೃತಿಯಲ್ಲಿ ವಹಿಸಬೇಕಾದ ಪಾತ್ರ ಯಾವುದು? ಈ ಹಿಂದೆ ವಿವರಿಸಲಾದ 'ಆಶ್ರಿತ ಪರಿಸ್ಥಿತಿ'ಯ ನೇತ್ಯಾತ್ಮಕತೆಯನ್ನು ಪಾಶ್ಚಿಮಾತ್ಯ ಅವಲಂಬನೆಯ ಕಮರಿಯಲ್ಲಿ ಬೀಳದೆಯೇ ದಾಟಬಹುದಾದ ಹಾದಿ ಇದಾಗಿರಬೇಕು. ಮೆಟ್ರೋಪಾಲಿಟನ್ ಸಾಂಸ್ಕೃತಿಕ ಸನ್ನಿ ವೇಶವನ್ನು ಕುರಿತ ಒಪ್ಪಂದದ ತಿಳುವಳಿಕೆ ಮತ್ತು ಅದರ ಕ್ರಿಯಾತ್ಮಕತೆಯ ಬಗೆಗಿನ ಆಳವಾದ ಒಳನೋಟಗಳಿಂದ ಮಾತ್ರ ಈ ಬಗೆಯ ದಾಟುವಿಕೆ ಸಾಧ್ಯ ಎಂದು ನನ್ನ ಭಾವನೆ; ಮತ್ತು ಇದು ಕೂಡ ಪಶ್ಚಿಮದೊಂದಿಗಿನ ನಮ್ಮ ಅನುರೂಪ ಸಂಬಂಧ ಸಾಧನೆಗೆ ಪೂರ್ವರಂಗ ಮಾತ್ರ ಎನ್ನುವುದನ್ನೂ ನಾವು ನೆನಪಿಡಬೇಕು. ಈ ಒಂದು ಹಿನ್ನೆಲೆಯಿಂದ ನೋಡಿದಾಗ ಡಾ. ಸಿ. ಎನ್. ರಾಮಚಂದ್ರನ್ ಅವರ ಪ್ರಬಂಧಗಳು ಅಪಾರವಾದ ಸಮಾಧಾನವನ್ನು ಕೊಡುತ್ತವೆ. ಆದರೆ ಐದನೆಯ, ನಿಜವಾದ ಸಾಂಸ್ಕೃತಿಕ ಸ್ವಾತಂತ್ರ್ಯದ ಮತ್ತು ನಿರ್ವಸಾಹತೀಕರಣ ಪ್ರಕ್ರಿಯೆಯ ದೃಷ್ಟಿಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಮನಿಸಿದಾಗ ಈ ಬಗೆಯ ಯತ್ನವೊಂದರ ಮಿತಿಗಳನ್ನೂ ಈ ಪ್ರಬಂಧಗಳಿಂದ ನಾವು ಅರಿಯಬಹುದು.

ವಿದೇಶೀ ಸಾಹಿತ್ಯಕ—ಸಾಂಸ್ಕೃತಿಕ ಮಾದರಿಗಳನ್ನು ಹಾಗೂ ಅರಿವಿನ ವಿಧಾನಗಳನ್ನು ಪಡೆದುಕೊಳ್ಳುವಲ್ಲಿ ನಮಗಿರುವ ಪ್ರಧಾನ ಅಡಚಣೆ ಎಂದರೆ, ಈ ಮೂಲ ಆಲೋಚನಾಕ್ರಮಗಳ ಚಾರಿತ್ರಿಕ ಸನ್ನಿವೇಶವನ್ನು ಮತ್ತು ಸಂಸ್ಕೃತಿಯ ಆಗುಹೋಗುಗಳನ್ನುಕುರಿತ ನಮ್ಮ ಮುಗ್ಧತೆ. ಹೀಗಾಗಿ ತೀರಾ ಮೇಲು ಮೇಲಿನ ಗ್ರಹಿಕೆಯಿಂದ ಪಶ್ಚಿಮದ ವಿಚಾರಗಳ ತೊಗಟೆಯನ್ನೋ, ಅರೆಬೆಂದ –ಅರೆ ಅರಗಿದ ತಿಳುವಳಿಕೆಯನ್ನೋ ಅತ್ಯಂತ ಅಪಾಯಕಾರಿಯಾಗಿ ಕನ್ನಡ ಸಂಸ್ಕೃತಿಯ ರಕ್ತದಲ್ಲಿ ಬೆರೆಸಲಾಗುತ್ತಿದೆ. ಇಂತಹ ತಮಾಷೆಯ ವೈಚಾರಿಕ ಸರ್ಕಸ್ಸುಗಳಿಂದಾಗಿ ಮೂರನೆ ದರ್ಜೆಯ ಮೆಟ್ರೋಪಾಲಿಟನ್ ವಿದ್ವಾಂಸನ ಮುಂದೆಯೂ ನಾವು ನಗೆ ಪಾಟಲಿಗೆ ಗುರಿಯಾಗಬೇಕಾಗಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಯಂತೂ ಇಂತಹ ಪ್ರಶ್ನಾರ್ಹ ಧಾಳಿಗೆ ಮತ್ತೆ ಮತ್ತೆ ಬಲಿಯಾಗಿದೆ.

ಈ ಹಿನ್ನೆಲೆಯಿಂದ ನೋಡಿದಾಗ ಡಾ. ಸಿ. ಎನ್. ರಾಮಚಂದ್ರನ್ ಅವರು ಮೆಟ್ರೋಪಾಲಿಟನ್ ವ್ಯಾಖ್ಯಾನಗಳ ಬಗೆಗಿನ ಆಳವಾದ ತಿಳುವಳಿಕೆಯಿಂದ ಬರೆಯುತ್ತಿರುವುದು ಅವರ ವಿಶಿಷ್ಟ ಸಾಧನೆಯಾಗಿದೆ. ತಮ್ಮ ಮೊದಲ ಪ್ರಬಂಧದಲ್ಲಿ ಅವರು ಸ್ಟ್ರಕ್ಚರಲಿಸಂ (Structuralism) ನ ಉಚ್ಛ್ರಾಯದ ದಿನಗಳಲ್ಲಿ ಮೆಟ್ರೋಪಾಲಿಟನ್ ವಿದ್ವಾಂಸರಿಗೆ ಹತ್ತಿದ್ದ 'ಸಾಹಿತ್ಯ ಸ್ವರೂಪ'ದ ಗೀಳಿನ ಮೇಲೆ ಬೆಳಕು ಚೆಲ್ಲುತ್ತಾರೆ. ಪಾಶ್ಚಿಮಾತ್ಯ ವಿದ್ವಾಂಸರು ರಾಜಕೀಯ ಕಾದಂಬರಿ ಪ್ರಕಾರವನ್ನು ಹೇಗೆ ನಿರ್ವಹಿಸಿದರು ಎನ್ನುವುದನ್ನು ಅವರು ತಮ್ಮ ಎರಡನೆಯ ಪ್ರಬಂಧದಲ್ಲಿ ಪಾಂಡಿತ್ಯಪೂರ್ಣವಾಗಿ ತೋರಿಸಿಕೊಟ್ಟಿದ್ದಾರೆ. ಮೂರನೆಯ ಪ್ರಬಂಧ, ಕಲಾವಿದ ಕಾದಂಬರಿಯ ಎರಡು ವಿಭಿನ್ನ ಮಾರ್ಗಗಳಾದ 'ಕುನ್‌ಸ್ಲ್ಯರ್ ರೋಮಾ' 'ಬಿಲ್ಡುಂಗ್ಸ್ ರೋಮಾ' ಗಳನ್ನು ಕನ್ನಡದ ಓದುಗರಿಗೆ ಪರಿಚಯಿಸುತ್ತದೆ. ನಾಲ್ಕನೆಯ ಪ್ರಬಂಧದಲ್ಲಿ, ಬಾಹ್ಯ ರಚನೆ, ಆಂತರಿಕ ರಚನೆಗಳ ಸಂಬಂಧವನ್ನು ಕುರಿತ ಸಮಸ್ಯೆಯನ್ನು ವಾಗ್ವಾದವಾಗಿಸಿದ ಸ್ಟ್ರಕ್ಚರಲಿಸ್ಟ್ ಪ್ರಾಬ್ಲಮೆಟಿಕ್‌ನ ಹೃದಯಕ್ಕೇ ಅವರು ನಮ್ಮನ್ನು ಕರೆದೊಯ್ಯುತ್ತಾರೆ. ಡಾ. ರಾಮಚಂದ್ರನ್ ಅವರ ಈ ಯತ್ನಗಳು ಸ್ವಾಗತಾರ್ಹ.

ಆದರೆ, ಈ ಬಗೆಯ ಪ್ರಯತ್ನಗಳು ತಮ್ಮದೇ ವಲಯದ ಕೆಲವು ಅಡಚಣೆಗಳನ್ನು ಮತ್ತು ಕೇವಲ ತಾಂತ್ರಿಕ ಹಾಗೂ ವಿಶೇಷೀಕೃತ ಪಾಂಡಿತ್ಯಕ್ಕೆ ಸಗ್ಗದ ಹಲವು ಸಮಸ್ಯೆಗಳನ್ನೂ ಸೃಷ್ಟಿಸುತ್ತವೆ. ಸಾಂಸ್ಕೃತಿಕ ಸ್ವಾತಂತ್ರ್ಯದ ಪ್ರಕ್ರಿಯೆಯ ಹಿನ್ನೆಲೆಯಿಂದ ಈ ಸಮಸ್ಯೆಗಳು ನಮಗೆ ಮುಖ್ಯವಾಗಿವೆ. ಇಲ್ಲಿನ ಪ್ರಬಂಧಗಳು ಪಶ್ಚಿಮದ ವಿಮರ್ಶಾ ವಿಧಾನ, ಮಾದರಿಗಳನ್ನು ಮತ್ತು ಅರಿವಿನ ಚೌಕಟ್ಟುಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಡೆದುಕೊಳ್ಳುವಾಗ ಆ ಕೆಲಸವನ್ನು ಒಂದು ಬಗೆಯ ಆಯ್ಕೆಯ ಮನೋಧರ್ಮ ದಿಂದ ಮತ್ತು ಪ್ರಾಯಶಃ ಅಚಾರಿತ್ರಿಕವಾಗಿಯೂ ಮಾಡುತ್ತಿವೆ. ಉದಾಹರಣೆಗೆ, ಸಾಹಿತ್ಯ ಸ್ವರೂಪದ ಸಮಸ್ಯೆಯನ್ನು ಚರ್ಚಿಸುವ ಮೊದಲ ಪ್ರಬಂಧವು ಸ್ವರೂಪ ವಿಮರ್ಶೆಯ ತಾತ್ವಿಕ ವಾಗ್ವಾದಗಳನ್ನು ಚೆನ್ನಾಗಿ ಗ್ರಹಿಸಿರುವುದು ನಿಜ.

ಸಾಹಿತ್ಯ ಪ್ರಕಾರ ಕೇವಲ ಪ್ರಯೋಗಾತ್ಮಕವೇ, ಅಲ್ಲ ವಸ್ತುನಿಷ್ಠವೇ, ಅಲ್ಲ ಇವೆರಡರ ಮಿಶ್ರಣವೇ? ಎನ್ನುವುದನ್ನು ಕುರಿತ ಚರ್ಚೆಯನ್ನೂ ಅವರು ಸಂಗ್ರಹಿಸಿ ದ್ದಾರೆ. ಆದರೆ ಅದನ್ನು ಇನ್ನಷ್ಟು ಬೆಳೆಸಬಹುದಿತ್ತು. ಕೊನೆಯ ಪಕ್ಷ, ಸ್ವರೂಪ (genre) ಪರಿಕಲ್ಪನೆಯ ಮೇಲೆಯೇ ಧಾಳಿಯಿಟ್ಟ ಪೋಸ್ಟ್‌ಸ್ಟ್ರಕ್ಚರಲಿಸ್ಟರ ವ್ಯಾಖ್ಯಾನ -ಪ್ರತಿವ್ಯಾಖ್ಯಾನಗಳನ್ನಾದರೂ ಪ್ರಸ್ತಾಪಿಸುವ ಅಗತ್ಯವಿತ್ತು. ಎರಡ ನೆಯ ಪ್ರಬಂಧ, ರಾಜಕೀಯ ಕಾದಂಬರಿ ಪ್ರಕಾರವನ್ನು ಕುರಿತು ಮಾರ್ಕ್ಸ್‌ವಾದಿ ಸೌಂದರ್ಯಮೀಮಾಂಸೆಯು ಎತ್ತಿರುವ ವಾಗ್ವಾದವನ್ನು ಗಮನಿಸಿಲ್ಲ. ಯಾವುದೇ ಮಾನವ ನಡವಳಿಕೆ ಮತ್ತು ಚಟುವಟಿಕೆಯನ್ನು ಅದು ರಾಜಕೀಯ ನಿಸ್ಸಂಗಿಯೆಂಬಂತೆ ಗ್ರಹಿಸುವ ಆಲೋಚನಾಕ್ರಮದ ಹಿಂದಿನ ಅಂದುಕೊಳ್ಳುವಿಕೆಯನ್ನು ಮಾರ್ಕ್ಸ್‌ವಾದಿ ಗಳು ಒಪ್ಪುವುದೇ ಇಲ್ಲ. ಈ ಹಿನ್ನೆಲೆಯಿಂದ ಯಾರಾದರೂ, ಎಲ್ಲ ಸಾಹಿತ್ಯ ಕೃತಿ ಗಳಲ್ಲಿಯೂ ತಮ್ಮ ಕಾಲದ ರಾಜಕೀಯ – ಸಾಮಾಜಿಕ ನಿಲುವುಗಳು ಅವ್ಯಕ್ತವಾಗಿ ಯಾದರೂ ವ್ಯಕ್ತವಾಗಿರುತ್ತವೆ ಮತ್ತು ರಾಜಕೀಯ ಕಾದಂಬರಿ ಎನ್ನಲಾಗುವ ಸಾಹಿತ್ಯ ಪ್ರಕಾರದಲ್ಲಿ ಬರುವ ಕೃತಿಗಳ ಅರ್ಥ, ಆಕೃತಿ ಶೈಲಿಗಳಲ್ಲಿ ಅವು ಹೆಚ್ಚು ವಾಚ್ಯವಾಗಿ ಪ್ರಕಟಗೊಳ್ಳುತ್ತವೆ ಎಂದು ವಾದಿಸಬಹುದು. ಮಾರ್ಕ್ಸ್‌ವಾದವೇ ಸರಿ ಎಂದು ನಾನಿಲ್ಲಿ ಸಾಧಿಸಲು ಹೊರಟಿಲ್ಲ. ಆದರೆ ಮೆಟ್ರೋಪಾಲಿಟನ್ ಸಾಹಿತ್ಯ ವ್ಯಾಖ್ಯಾನಗಳ ಪೈಕಿ ಮಾರ್ಕ್ಸ್‌ವಾದವೂ, ನಾವು ಗಂಭೀರವಾಗಿ ಪರಿಗಣಿಸಲೇ ಬೇಕಾದ ವಿಮರ್ಶಾವಿಧಾನ ಎನ್ನುವುದನ್ನು ನನಗೆ ಇಲ್ಲಿ ಸೂಚಿಸಬೇಕಾಗಿದೆ. "ರಾಜ ಕೀಯ"ವನ್ನು ನಿರ್ವಚಿಸುವಾಗಿನ ವಿವಿಧ ಮೆಟ್ರೋಪಾಲಿಟನ್ ವಾಗ್ವಾದಗಳನ್ನು ಎಚ್ಚರಿಕೆಯಿಂದ ಪರಿಶೀಲಿಸುವ ಡಾ. ರಾಮಚಂದ್ರನ್ ಅವರ ಪ್ರಬಂಧ, ತನ್ನ ದೃಷ್ಟಿಕೋನದಿಂದ "ರಾಜಕೀಯ"ದ ರಾಜಕೀಯ ನಿರ್ವಚನವನ್ನೇ ಮುಂದಿಸುವುದಿಲ್ಲ! ಇಲ್ಲಿನ ಸಮಸ್ಯೆ ಕೇವಲ ಸಾಹಿತ್ಯ ಪ್ರಕಾರದ ವಿಶಿಷ್ಟತೆಯನ್ನು ಗುರುತಿಸುವ ಬದಲಾಗಿ ಅವುಗಳ ಹಿಂದಿರುವ ಮೂಲ ತಾತ್ವಿಕ ರಚನೆಗಳನ್ನು ಗುರುತಿಸುವುದು ಎಂದು ನನ್ನ ನಂಬಿಕೆ. ಅನೇಕ ವಿವರಗಳಿಂದ ಕೂಡಿದ ಮೂರನೆಯ ಪ್ರಬಂಧ, ರೆನ್ಯಾಸೆನ್ಸ್ ನಂತರದ, ವ್ಯಕ್ತಿ ಸ್ವಾಯತ್ತ, ಕೈಗಾರಿಕೀಕೃತ ಬಂಡವಾಳ ಶಾಹಿ ಸಮಾಜದಲ್ಲಿ ಬೇರು ಬಿಟ್ಟಿರುವ ವಿಮರ್ಶಾವಿಧಾನಗಳನ್ನು, ಇಂದಿಗೂ ಸಾಮುದಾಯಿಕ ಚಿಂತನಕ್ರಮ ವನ್ನು ಬಿಡದಿರುವ ಕನ್ನಡಿಗರಂತಹ ಚಿಕ್ಕ ಸಾಹಿತ್ಯ ಸಮುದಾಯದಲ್ಲಿ ತರುವ ಔಚಿತ್ಯ -ಪ್ರಸ್ತುತತೆಗಳ ಪ್ರಶ್ನೆಯನ್ನೇ ಕೈಬಿಟ್ಟಿದೆ. ನಾವೀನ್ಯದಿಂದ ಕೂಡಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊನೆಯ ಪ್ರಬಂಧ, ಯೂಂಗ್‌ನ ಪ್ರಾಗ್ರೂಪ ಪರಿಕಲ್ಪನೆಯ ವಿಶ್ವಸ್ಥ ಪರಿಭಾಷೆಯನ್ನು ತನ್ನ ಗ್ರಹಿತವನ್ನಾಗಿರಿಸಿಕೊಂಡಿದೆ. ಮಧ್ಯಕಾಲೀನ ಕನ್ನಡ ಕೃತಿಯೊಂದನ್ನು ಅದರ ಸಾಂಸ್ಕೃತಿಕ ಅನನ್ಯ ಸನ್ನಿವೇಶದಿಂದ ಹೆಕ್ಕಿ ತೆಗೆದು ಯೂಂಗ್‌ನ ವಿಶ್ವಸ್ಥ ಅನ್ವಯೀಕರಣಕ್ಕೆ(Universal applicability)ಅಳವಡಿಸುವುದೊಂದೇ ಇಲ್ಲಿನ ಸಮಸ್ಯೆಯಲ್ಲ. ಪಶ್ಚಿಮದ ಸಾಹಿತ್ಯ ವ್ಯಾಖ್ಯಾನ ಪರಂಪರೆಯಲ್ಲಿಯೇ ಯೂಂಗನ ಸಾಧನ ಇಂದು ಏನಾಗಿದೆ ಎನ್ನುವುದೂ ಅಷ್ಟೇ ಮುಖ್ಯ ಪ್ರಶ್ನೆ. ಪೋಸ್ಟ್‌ಸ್ಟ್ರಕ್ಚರಲಿಸ್ಟರ ವಾಗ್ವಾದದ ಬಿರುಗಾಳಿಯಲ್ಲಿ ಸಿಲುಕಿ ಮನೋವೈಜ್ಞಾನಿಕ ವಿಮರ್ಶೆ ತತ್ತರಿಸಿರುವ ಪಾಶ್ಚಿಮಾತ್ಯ ವಾಸ್ತವವನ್ನು ನಾವು ಮರೆಯುವಂತಿಲ್ಲ. ಇಂತಹ ಯತ್ನವೊಂದು ಸಮರ್ಥನೀಯವೆನಿಸಿಕೊಳ್ಳಬೇಕಾದರೂ ಅದಕ್ಕೆ ಯೂಂಗ್‌ನ ಪರಿಕಲ್ಪನೆಗಳನ್ನು ಅತ್ಯಂತ ವಿಮರ್ಶಾತ್ಮಕವಾಗಿ ಅರಗಿಸಿಕೊಳ್ಳಬೇಕಾದ ಅಗತ್ಯವಿದೆ.

ನನ್ನ ಈ ವಿಮರ್ಶಾತ್ಮಕ ಅನ್ನಿಸಿಕೆಗಳು ಈ ನಾಲ್ಕು ಪ್ರಬಂಧಗಳ ಪ್ರಯೋಜನವನ್ನಾಗಲೀ ಅವುಗಳ ಹಿಂದಿನ ಪಾಂಡಿತ್ಯ–ಶ್ರಮಗಳನ್ನಾಗಲೀ ಅಲ್ಲಗಳೆಯುವುದಿಲ್ಲ, ಅಲ್ಲಗಳೆಯಬಾರದು. ಮೆಟ್ರೋಪಾಲಿಟನ್ ಸಾಹಿತ್ಯ ಪರಂಪರೆಯ ನೆರಳಾಗಿಯೇ ರೂಪುಗೊಳ್ಳುವಾಗಲೂ ದೇಸೀ ಸಾಹಿತ್ಯ ಪರಂಪರೆ, ಸಂಸ್ಕೃತಿಗಳು ತಮ್ಮ ಸಮಬಿಂಬವನ್ನು ಪುನರ್ ಸಂಘಟಿಸುವ, ಸಮಾನತೆ–ಅನುರೂಪತೆಗಳ ಪಾತಳಿಯಲ್ಲಿ ತಮ್ಮ ಸಂಬಂಧವನ್ನು ರೂಪಿಸಿಕೊಳ್ಳುವ ಚಾರಿತ್ರಿಕ ಪ್ರಕ್ರಿಯೆಯನ್ನು ಸ್ವಲ್ಪವಾದರೂ ತೀವ್ರಗೊಳಿಸುವ ಸಾಂಸ್ಕೃತಿಕ ಕಾಳಜಿಯಿಂದ ಮಾತ್ರ ಈ ಮಾತುಗಳು ಬಂದಿವೆ. ನಮ್ಮ ಸಾಹಿತ್ಯ–ಸಂಸ್ಕೃತಿಗಳ ವಸಾಹತು ಪರಿಸ್ಥಿತಿಯಿಂದ ಬಿಡಿಸಿಕೊಳ್ಳುವ ಮಹಾನ್ ಯತ್ನದ ಮುಂಚೂಣಿಯವೆಂದು ಡಾ. ರಾಮಚಂದ್ರನ್ ಅವರ ಪ್ರಬಂಧಗಳು ಗೌರವಿಸಲ್ಪಡಬೇಕು. ಸ್ವತಃ ರಾಮಚಂದ್ರನ್ ತಮ್ಮ ಸ್ವಭಾವದಲ್ಲಿ ವಾಗ್ವಾದಕಾರರಲ್ಲವಾದರೂ ಅವರ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಹೊಸ ತಾತ್ವಿಕ ವಾಗ್ವಾದ ಪರಂಪರೆಯನ್ನು ಹುಟ್ಟು ಹಾಕುವಷ್ಟು ಸಮರ್ಥವಾಗಿವೆ. ಡಾ. ರಾಮಚಂದ್ರನ್ ತಮ್ಮ ಅನ್ವಯಿಕ ದೃಷ್ಟಾಂತವಾದೀ ಪಾಂಡಿತ್ಯದ ನೆಲೆಯಿಂದ ಮುಂದುವರಿದು ತಮ್ಮದೇ ಆದ ತಾತ್ವಿಕ, ವೈಚಾರಿಕ ಆಕೃತಿಗಳನ್ನು ನಿರ್ಮಿಸುವ ಯತ್ನದ ತಾತ್ವಿಕ ಧೀಮಂತಿಕೆ ಹಾಗೂ ಸೃಜನ ಶೀಲತೆಗಳನ್ನು ಮುಂದಿನ ದಿನಗಳಲ್ಲಿ ತೋರಿಸಲಿ ಎಂದು ನಾನು ಹಾರೈಸುತ್ತೇನೆ. ಇಂಗ್ಲಿಷ್ ಸಾಹಿತ್ಯವನ್ನು ಕಲಿಸುವ, ಕನ್ನಡದಲ್ಲಿ ಬರೆಯುವ ಹಾಗೂ ಸಂಸ್ಕೃತ ಸಾಹಿತ್ಯದಲ್ಲಿ ಸಾಕಷ್ಟು ಗತಿ ಇರುವ ಡಾ. ರಾಮಚಂದ್ರನ್ ಅವರಿಗೆ ಇಂತಹ ರೋಮಾಂಚಕಾರಿ ವಿಮರ್ಶಾ ಸಾಹಸಕ್ಕೆ ಅಗತ್ಯವಾದ ಅಸಾಮಾನ್ಯ ಅರ್ಹತೆಯೂ ಇದೆ.

ಕೆ. ರಾಘವೇದ್ರರಾವ್

ಎಪ್ರಿಲ್ 1988

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂಬಯಿ ವಿಶ್ವವಿದ್ಯಾಲಯ :
ಕನ್ನಡ ವಿಭಾಗದ ಪ್ರಕಟನೆಗಳು

೧.	ಭಾರತೀಯ ರಂಗಭೂಮಿ	ಆದ್ಯ ರಂಗಾಚಾರ್ಯ	೯ ರೂ.
೨.	ಮಹಾಕೃತಿ (ಸಾಹಿತ್ಯ ವಿಮರ್ಶೆ)	ರಂ. ಶ್ರೀ. ಮುಗಳಿ	೧೮ ರೂ.
೩.	ಮಹಾರಾಷ್ಟ್ರದ ಕನ್ನಡ ಶಾಸನಗಳು	ಎಂ. ಎಂ. ಕಲಬುರ್ಗಿ	೧೬ ರೂ.
೪.	ಪತ್ರಗಳು ಚಿತ್ರಿಸಿದ ಗೋವಿಂದ ಪೈ	ಶ್ರೀನಿವಾಸ ಹಾವನೂರ(ಸಂ.)	೨೨ ರೂ.
೫.	ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ	ತಾಳ್ತಜೆ ವಸಂತಕುಮಾರ	
೬.	ಕರ್ನಾಟಕದ ಶಿಕ್ಷಣ ಪರಂಪರೆ(ಸಚಿತ್ರ)	ಜ್ಯೋತ್ಸ್ನಾ ಕಾಮತ	೬೦ ರೂ.
೭.	ಸ್ವರೂಪ ವಿಮರ್ಶೆ ಹಾಗೂ ಕೆಲವು ಕನ್ನಡ ಕೃತಿಗಳ ಅಧ್ಯಯನ	ಸಿ. ಎನ್. ರಾಮಚಂದ್ರನ್	೧೮ ರೂ.
೮.	ವ್ಯಾಸಪರ್ವ (ದುರ್ಗಾ ಭಾಗವತ)	ಗೌರೀಶ ಕೈಕಿಣಿ (ಅನು)	
೯.	ಕಾರಂತರ ಕಾದಂಬರಿಗಳು (ಮರಾಠೀ ಮಾರ್ದನಿ)	ಸುಧಾಕರ ದೇಶಪಾಂಡೆ ಅನು ವಿರೂಪಾಕ್ಷ ಕುಲಕರ್ಣಿ	
೧೦.	शिवाजी–मल्लम्माजी समरोत्सव	–(सं) के. एन. चीट्णीस	
೧೧.	दीप अजळे आमुच्या घरीं	(हा मा. नायक) अस. पी. पाटील (अनु)	
೧೨.	तब्रचची गोष्ट आणी अितर कथा.	(पू चं. तेजस्वी.) अुमा कुलकरणी (अनु)	
೧೩.	ಮಹಿ ಪತಿದಾಸರು: ಒಂದು ಅಧ್ಯಯನ	ಕೃಷ್ಣ ಕೊಲ್ಹಾರ–ಕುಲಕರ್ಣಿ	
೧೪.	ಪು. ಲ. ದೇಶಪಾಂಡೆ: ವ್ಯಕ್ತಿ ಮತ್ತು ವಾಙ್ಮಯ	ಅ. ರಾ. ತೋರೊ ಮತ್ತು ವಿರೂಪಾಕ್ಷ ಕುಲಕರ್ಣಿ (ಸಂ.)	
೧೫.	ಮುದ್ದಣನ ಶಬ್ದ ಸೃಷ್ಟಿ ಮತ್ತು ಕಾವ್ಯ ಪ್ರತಿಭೆ	ನಾ. ದಾಮೋದರ ಶೆಟ್ಟಿ	

पुस्तकालय
गुरुकुल कांगड़ी विश्वविद्यालय
6856

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"Forwarded free of cost, and with the
Compliments of the department of Education,
Government of India, NEW DELHI."

GURUKUL KANGRI LIBRARY
Accos on 16-2-1
Class on
Cat on
Tag etc.
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸ್ತುತ ಗ್ರಂಥದಲ್ಲಿ ನಾಲ್ಕು ಪ್ರಬಂಧಗಳಿವೆ. ಮೊದಲಿನದು ಸ್ವರೂಪ ವಿಮರ್ಶೆ (*generic criticism*) ಎಂಬ ನೂತನ ವಿಧಾನವನ್ನು ತಿಳಿಸುತ್ತದೆ. ಇತರ ಮೂರು ಪ್ರಬಂಧಗಳಲ್ಲಿ ಈ ವಿಧಾನ ಹಾಗೂ ಕೆಲವು ಬಿಂಪ್ರತೀಕಗಳನ್ನು ಅನ್ವಯಿಸಿದ ಕನ್ನಡ ಕೃತಿಗಳ ಪರಾಮರ್ಶೆ ಇದೆ. ಈ ಅನ್ವಯದಲ್ಲಿ ಕೆಲವು ರಾಜಕೀಯ ಕಾದಂಬರಿಗಳೂ ಒಂದು ಕಲಾವಿದ ಕಾದಂಬರಿಯೂ ಲಕ್ಷ್ಮೀಶನ ಜೈಮಿನಿಭಾರತವೂ ಒಳಗೊಂಡಿವೆ.

ಲೇಖಕರಾದ ಪ್ರೊ. ರಾಮಚಂದ್ರನ್ ಮಂಗಳೂರು ವಿಶ್ವವಿದ್ಯಾನಿಲಯದ ಆಂಗ್ಲ ಪ್ರಾಧ್ಯಾಪಕರು . ಆದಾಗ್ಯೂ ಅವರಿಗೆ ಪ್ರಾಚೀನ ಕವಿಗಳ ಬಗ್ಗೆ ಅನೂನ ಆದರವಿದೆ. ಅಂಥ ಕನ್ನಡ ಸಂಸ್ಕೃತ ಕೃತಿಗಳಲ್ಲಿ ಹೊಸತನ್ನು ಹುಡುಕುವ ಹಂಬಲ ಅವರದು. ಪಾಶ್ಚಿಮಾತ್ಯರಲ್ಲಿ ಕಂಡು ಬಂದ ಒಂದು ಹೊಸ ವಿಮರ್ಶನ ವಿಧಾನವನ್ನು ಕನ್ನಡದಲ್ಲಿ ಹೇಗೆ ತರಬೇಕು ಎಂದು ಯೋಚಿಸುವ ಬದಲಾಗಿ ಅದು ನಮ್ಮ ಕೃತಿಗಳಿಗೂ ಹೇಗೆ ಅನ್ವಯವಾಗುತ್ತದೆ ಎಂದು ಅರಸಿಕೊಂಡು ಹೋಗುತ್ತಾರೆ. ಅವರ "ಶಿಲ್ಪ ವಿನ್ಯಾಸ" ಕೃತಿಯಲ್ಲಿ ಇದೇ ನಿಲುಮೆ ಕಂಡು ಬರುತ್ತದೆ.

ಈ ದ್ವಿತೀಯ ಸಂಕಲನದಲ್ಲಿ ಒಳಗೊಂಡ ಪ್ರಬಂಧಗಳು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಮಾಡಿದ ವಿಶೇಷೋಪನ್ಯಾಸಗಳ ವಿಸ್ತೃತ ರೂಪಗಳಾಗಿವೆ.

- ಶ್ರೀನಿವಾಸ ಹಾವನೂರರ 'ಮೊದಲ ನುಡಿ'ಯಿಂದ

CC-0. In Public Domain. Gurukul Kangri Collection, Haridwar